ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಫೆಬ್ರವರಿ 15, 2012 ಪುಟ 20 ರೂ. 14/-




ಎಲ್.ಬಸವರಾಜು ಸಂದರ್ಶನ



ತನಿಖಾ ವರದಿ

ಪಾಕ್ ಧ್ವಜ ಹಾರಿಸಿದ್ದು RSS ನೀಚರು



ಪಾಂಡೆ ಪತ್ನಿಗೂ IAS ಮದ

ಸತ್ತ ನಟಿ ಹೆಸರಲ್ಲಿ ಹೆತ್ತವರ ವೇಶ್ಯಾ ದಂಧೆ




ಸಚಿನ್‌ಗೆ ಭಾರತರತ್ನ ಬೇಕೆ?



ISRO ಕರ್ಮಕಾಂಡ

ಸಲ್ಮಾನ್ ರಶ್ದಿ ಪ್ರಕರಣ

ಸಂತರಿಲ್ಲದ ಸಂತೆಯಲ್ಲಿ ಸೈತಾನರು ಯಾರೆಂಬುದೇ ಪ್ರಶ್ನೆ?





ಶಿವಸುಂದರ್

ಚಾರ್ವಾಕ

ಜೈಪುರ ಸಾಹಿತ್ಯ ಜಾತ್ರೆಯಲ್ಲಿ ಸಲ್ಮಾನ್ ರಶ್ದಿಯನ್ನು ಬರಗೊಡದಂತೆ, ಆತನ ವಿಡಿಯೋ ಸಂದರ್ಶನ ಕೂಡಾ ನಡೆಯದಂತೆ ತಡೆಗಟ್ಟುವಲ್ಲಿ ಮುಸ್ಲಿಂ ಸಮುದಾಯದ ಒಂದು ಸಣ್ಣ ಪುರೋಹಿತಶಾಹಿ ವರ್ಗವಾದ ದೇವ್‌ಬಂದ್ ಮಠ ಯಶಸ್ವಿಯಾಗಿದೆ. ಉತ್ತರ ಪ್ರದೇಶ, ರಾಜಸ್ಥಾನ ಹಾಗೂ ಇನ್ನಿತರ ಐದು ರಾಜ್ಯಗಳ ಚುನಾವಣೆಯ ಮೇಲೆ ಕಣ್ಣಿಟ್ಟು ಕಾಂಗ್ರೆಸ್ ಸರ್ಕಾರ ಸಹ ಪರೋಕ್ಷವಾಗಿ ರಶ್ದಿ ಬರದಂತೆ ಉಗ್ರಗಾಮಿ ಬೆದರಿಕೆಯ ಕಥೆ ಕಟ್ಟಿ ಎಂದಿನಂತೆ ಮುಸ್ಲಿಮ್ ಪುರೋಹಿತಶಾಹಿ ತುಷ್ಟೀಕರಣ ನೀತಿಯನ್ನು (ಮುಸ್ಲಿಮ್ ತುಷ್ಟೀಕರಣವಲ್ಲ) ಅನುಸರಿಸಿತು. ಈಗ ಜೈಪುರ ಸಾಹಿತ್ಯ ಹಬ್ಬ ಮುಗಿದಿದೆ. ಆದರೆ ರಶ್ದಿ ಪ್ರಕರಣದ ಹೆಣ ಮಾತ್ರ ಹಾಗೆ ಪಡಸಾಲೆಯಲ್ಲಿ ಬಿದ್ದಿದೆ. ಅದರ ದಫನು ಆಗುವ ಮುಂಚೆ ಅದರ ಕಫನ್ನಿಗೆ ಹಲವರು ಹಲವು ಬಗೆಯ ಕಸೂತಿಗಳನ್ನು ಹೊಲೆಯುತ್ತಿದ್ದಾರೆ. ಆದರೂ ಅದು ಎತ್ತುತ್ತಿರುವ ಹಲವು ಪ್ರಶ್ನೆಗಳು ಮಾತ್ರ ಹಾಗೆಯೇ ಉಳಿದಿವೆ. ಇವಕ್ಕೆ ಉತ್ತರ ಪಡೆದುಕೊಳ್ಳದಿದ್ದರೆ ಈ ಪ್ರಶ್ನೆ ಮತ್ತೆ ಮತ್ತೆ ಸೈತಾನನಂತೆ ಮರುಕಳಿಸುತ್ತಲೇ ಇರುತದೆ.

ಪ್ರಸ್ತುತ ಸಲ್ಮಾನ್ ರಶ್ದಿ ಪ್ರಕರಣದಲ್ಲಿ ಪ್ರಭುತ್ವ, ಸಾಹಿತಿಗಳು, ಪ್ರಗತಿಪರರು ಹಾಗೂ ಮುಸ್ಲಿಂ ಸಮುದಾಯದ ಪುರೋಹಿತಶಾಹಿ ತೆಗೆದುಕೊಂಡ ನಿಲುವುಗಳು ಈ ಪ್ರಕರಣದ ಸಂಕೀರ್ಣತೆಯನ್ನು ತೋರಿಸುತ್ತದೆ. ಮಾತ್ರವಲ್ಲ ನಮ್ಮ ಪ್ರಜಾತಂತ್ರದ ಟೊಳ್ಳುತನವನ್ನು, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಾಮಾಜಿಕ ಜವಾಬ್ದಾರಿಗಳ ನಡುವಿನ ಸಂಬಂಧದ ಸೂಕ್ಷ್ಮತೆಯನ್ನು ಹಾಗು ಪುರೋಗಾಮಿ ಮೌಲ್ಯಗಳು ಹಿನ್ನೆಡೆಯಲ್ಲಿರುವ ಈ ಕಾಲಘಟ್ಟದಲ್ಲಿ ಒಂದು ಬಗೆಯ ಮೂಲಭೂತವಾದಿತನ ಮತ್ತೊಂದು ಮೂಲಭೂತವಾದಿತನವನ್ನೇ ಪೋಷಿಸುವ ದುರಂತವನ್ನು ತೋರಿಸುತ್ತದೆ.

ಸಲ್ಮಾನ್ ರಶ್ದಿ 30 ವರ್ಷಗಳ ಹಿಂದೆ 'ಸೆಟಾನಿಕ್ ವರ್ಸಸ್' ಎಂಬ ಕಾದಂಬರಿ ಬರೆದು ಅದರಲ್ಲಿ ಪ್ರವಾದಿ ಪೈಗಂಬರನನ್ನು ಲೇವಡಿ ಮಾಡಿದ್ದರೆಂಬುದು ಅವರ ಮೇಲಿದ್ದ ಆಪಾದನೆ. ಅದಕ್ಕಾಗಿ ಭಾರತದಲ್ಲಿ ರಾಜೀವ್ ಗಾಂಧಿ ಸರ್ಕಾರ 1989ರಲ್ಲಿ ಅದನ್ನು ನಿಷೇಧಿಸಿದ್ದರೆ ಇರಾನಿನ ಖೊಮೇನಿ ರಶ್ದಿಯ ತಲೆತೆಗೆಯುವ ಫತ್ವಾವನ್ನು ಜಾರಿ ಮಾಡಿದ್ದ. ಆಗಲೂ ಲೇಖಕನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಭುತ್ವದ ಮತ್ತು ಮುಸ್ಲಿಮರ ಮೂಲಭೂತವಾದಿ ಪುರೋಹಿತ ಶಾಹಿಯ ವಿರುದ್ಧದ ಉದಾರವಾದಿ ನಿಲುವುಗಳು ಒಂದು ಕಡೆ ಅಭಿವ್ಯಕ್ತವಾಗಿತ್ತು. ಈ ಪ್ರಕರಣ ಯಾವ ರೀತಿಯಿಂದಲೂ ಅತಿಹೆಚ್ಚು ಬಡವರೇ ಇರುವ ಮುಸ್ಲಿಂ ಸಮುದಾಯದ ಬದುಕನ್ನು ಬದಲಿಸದಿದ್ದರೂ ತಾವು ಮುಸ್ಲಿಂ ಪರ ಎಂದು ತೋರಿಸಿಕೊಳ್ಳಲು ಕಾಂಗ್ರೆಸ್ ಕಾದಂಬರಿಯನ್ನು ನಿಷೇಧಿಸಿತ್ತು. ಇದು ಕೇವಲ ಮುಸ್ಲಿಂ ಪುರೋಹಿತಶಾಹಿ ತುಷ್ಟೀಕರಣವೇ ಹೊರತು ಸಮುದಾಯಕ್ಕೆ ಸರ್ಕಾರದಿಂದ ಏನೂ ಪ್ರಯೋಜನವಾಗಿಲ್ಲವೆಂದು ಗೊತ್ತಿದ್ದರೂ ಹಿಂದೂತ್ವವಾದಿಗಳು ಸರ್ಕಾರ ಹೇಗೆ ಮುಸ್ಲಿಮರನ್ನು ತುಷ್ಟೀಕರಿಸುತ್ತಿದೆ ಎಂದು ವಾದಿಸುವುದಕ್ಕೆ ಇದನ್ನು ಉದಾಹರಣೆಯಾಗಿ ಬಳಸಿಕೊಂಡಿದ್ದರು. ಮಾತ್ರವಲ್ಲದೆ ತಮ್ಮ ಎಲೆಯಲ್ಲಿ ಹೆಗ್ಗಣವೇ ಸತ್ತು ಬಿದ್ದಿದ್ದರೂ ಇಸ್ಲಾಮ್ ಮತ್ತು ಮುಸ್ಲಿಮರು ಎಷ್ಟು ಕಂದಾಚಾರಿಗಳೆಂದು ತೋರಿಸಲು ಇದನ್ನು ಉದಾಹರಣೆಯಾಗಿ ಬಳಸಿತ್ತು. ಹೀಗೆ ಒಟ್ಟಾರೆ ನೋಡಿದರೆ ಮುಸ್ಲಿಂ ಸಮುದಾಯದ ದುರಂತ ವರ್ತಮಾನವನ್ನು ಪ್ರಭುತ್ವ, ರಾಜಕೀಯ ಪಕ್ಷಗಳು, ಮುಸ್ಲಿಂ ಸಮುದಾಯದ ಪುರೋಹಿತಶಾಹಿ ಹಾಗೂ ಹಿಂದೂತ್ವವಾದಿ ಶಕ್ತಿಗಳು ತಮ್ಮ ತಮ್ಮ ಅಜೆಂಡಾಗಳಿಗೆ ಬಳಸಿಕೊಂಡರು.

ಈಗ ಜೈಪುರ ಸಾಹಿತ್ಯ ಜಾತ್ರೆಯ ಸಂದರ್ಭದಲ್ಲೂ ಮತ್ತದೇ ಶಕ್ತಿಗಳು ಅದೇರೀತಿ ಈ ಪ್ರಕರಣವನ್ನು ಬಳಸಿಕೊಳ್ಳುತ್ತಿವೆ.

ಈಗಲೂ ರಶ್ದಿ ಪ್ರಕರಣ......

1. ಸಾಹಿತಿಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆಯನ್ನು
2. ಇದೇ ಸಮಯದಲ್ಲಿ ಸಾಹಿತಿ ತನ್ನ ಬರಹದಲ್ಲಿ ತೋರಿಸಬೇಕಾದ ಸಾಮಾಜಿಕ ಜವಾಬ್ದಾರಿಯ ಪ್ರಶ್ನೆಯನ್ನು
3. ಸಾಮಾಜಿಕ ದುಷ್ಪರಿಣಾಮದ ಹೆಸರಲ್ಲಿ ಪ್ರಭುತ್ವ ಮತ್ತು ಮೂಲಭೂತವಾದಿಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಮಾಡಬಹುದಾದ ಹಲ್ಲೆಯನ್ನು ಹೇಗೆ ತಡೆಗಟ್ಟಬಹುದೆಂಬ ಪ್ರಶ್ನೆಯನ್ನೂ ಮುಂದೆ ತಂದಿದೆ.

ಸರ್ಕಾರವೇನೋ ಇಲ್ಲಸಲ್ಲದ ತಾಂತ್ರಿಕ ನೆಪ ಹೇಳಿ ರಶ್ದಿ ಮೇಲೆ ಪರೋಕ್ಷ ನಿರ್ಬಂಧ ಹೇರಿತು. ಕೆಲವು ಸಾಹಿತಿಗಳು ರಶ್ದಿಯ ಕಾದಂಬರಿಯ ಕೆಲವು ಸಾಲುಗಳನ್ನು ಓದಿ ಪ್ರಭುತ್ವ ಮತ್ತು ಮೂಲಭೂತವಾದಿಗಳ ವಿರುದ್ಧ ತತ್ ಪ್ರೇರಣೆಯ ಪ್ರತಿಭಟನೆ ಮಾಡಿದರು. ಆದರೆ ಕೇಸು ಬಿದ್ದೊಡನೆ ಅಲ್ಲಿಂದ ಪರಾರಿಯಾಗಿ ಪ್ರತಿಭಟನೆಗೆ ಪ್ರಹಸನದ ಆಯಾಮವನ್ನು ತಂದುಕೊಟ್ಟುಬಿಟ್ಟರು.

ಈ ಪ್ರಕರಣ ಎತ್ತಿದ ಪ್ರಶ್ನೆಗಳಿಗೆ ಸರಳವಾದ ಉತ್ತರಗಳಿಲ್ಲವಾದರೂ, ಒಂದಂತೂ ಸ್ಪಷ್ಟವಾಗಿ ಹೇಳಬಹುದು.

30 ವರ್ಷಗಳ ನಂತರವೂ ಕಾದಂಬರಿಯೊಂದರ ಬರಹಕ್ಕೆ ರಶ್ದಿಯ ತಲೆದಂಡವನ್ನು ಕೇಳುತ್ತಿರುವ ದಿವ್ಯೋಬಂದ್ ಪುರೋಹಿತಶಾಹಿಗಳ ನಿಲುವು ಖಂಡನಾರ್ಹ.

ಅದಕ್ಕೆ ತಲೆಬಾಗಿ ಸರ್ಕಾರ ರಶ್ದಿಯನ್ನು ಬರದಂತೆ ತಡೆದದ್ದು ಕೂಡಾ ಅತ್ಯಂತ ಖಂಡನಾರ್ಹ. ಮುಸ್ಲಿಂ ಸಮುದಾಯದಲ್ಲೇ ಪ್ರಗತಿಪರರ ಬಹುದೊಡ್ಡ ವರ್ಗ ಇದೊಂದು ಅನಗತ್ಯವಾದ ಬೆಳವಣಿಗೆಯಾಗಿತ್ತು ಎಂಬ ನಿಲುವನ್ನು ತಾಳಿದ್ದು ಈ ನಿಷೇಧ ಬೇಕಿರಲಿಲ್ಲ ಎಂದು ಭಾವಿಸುತ್ತದೆ. ಆದರೆ ಇದಕ್ಕೆ ಮಾಧ್ಯಮಗಳು ಹೆಚ್ಚಿನ ಪ್ರಚಾರ ಕೊಡಲಿಲ್ಲ. ಮುಸ್ಲಿಂ ಸಮುದಾಯ ಕಂದಾಚಾರಿ ಎಂದು ಬಿಂಬಿಸುವುದರಲ್ಲೇ ಮಾಧ್ಯಮದ ಸೆನ್ಸೇಷನಲ್ ರಿಪೋರ್ಟಿಂಗ್, ಟಿಆರ್‌ಪಿ ರೇಟಿಂಗ್, ಎಲ್ಲವೂ ಹೆಚ್ಚಿರುತ್ತದೆ. ಹೆಚ್ಚೆಚ್ಚು ಕಂದಾಚಾರಿಯಾಗಿ ಮುಸ್ಲಿಂ ಸಮುದಾಯವನ್ನು ಇಟ್ಟುಕೊಳ್ಳುವುದರಲ್ಲೇ ಪಕ್ಷ ರಾಜಕಾರಣಗಳ ಹಿತವೂ ಅಡಗಿದೆ. ಅದೇನೇ ಇರಲಿ, ಮುಸ್ಲಿಂ ಪುರೋಹಿತಶಾಹಿಗಳನ್ನು ಬಿಟ್ಟರೆ ಮುಸ್ಲಿಂ ಸಮುದಾಯಕ್ಕೆ ಇದರ ಬಗ್ಗೆ ತಿಳಿದೂ ಇಲ್ಲ. ಮುಸ್ಲಿಮ್ ಪ್ರಗತಿಪರರ ಬಹುದೊಡ್ಡ ಸಂಖ್ಯೆ ಈ ನಿಷೇಧದ ಪರವಾಗಿಯೂ ಇಲ್ಲ ಎಂಬುದೇ ವಾಸ್ತವ.

ಆದರೆ ಇಂದಿನ ಸಂದರ್ಭ ಖಂಡನೆ ಮಂಡನೆಯಾಚೆಗಿನ ಕೆಲವು ಸಂಕೀರ್ಣ ಪ್ರಶ್ನೆಗಳನ್ನು ಕೇಳುತ್ತಿದೆ. ಪ್ರಭುತ್ವಕ್ಕಲ್ಲ, ಪ್ರಗತಿಪರರಿಗೆ. ಅದರಲ್ಲೂ ಮುಸ್ಲಿಂ ಸಮುದಾಯದ ಉದಾರವಾದಿ ಧ್ವನಿಗಳಿಗೆ...

ವಿಮರ್ಶೆಯ ಧ್ವನಿಗಳು ಒಂದು ಸಮಾಜಕ್ಕೆ ಅವಹೇಳನದ ಧ್ವನಿಯಾಗಿ ಏಕೆ ಕೇಳಿಸುತ್ತದೆ? ಭೌತಿಕ ಬದುಕಿನ ದ್ವಂದ್ವಗಳು ಅಪರಿಹಾರ್ಯವಾಗುತ್ತಿರುವ ಕಾಲಘಟ್ಟದಲ್ಲಿ ಅಸಹನೆ, ಅಸಹಿಷ್ಣುತೆಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಒಬ್ಬ ಸೃಜನಶೀಲ ಬರಹಗಾರ ಇದಕ್ಕೆ ಸ್ಪಂದಿಸದೆ ಸೃಜನಶೀಲವಾಗಲು ಸಾಧ್ಯವೇ?

ಇಂದು ಎಲ್ಲ ಲೇಖಕರಿಗಿಂತ ಮುಸ್ಲಿಂ ಲೇಖಕರು ಈ ದ್ವಂದ್ವವನ್ನು ಎದುರಿಸುತ್ತಿದ್ದಾರೆ. ಒಂದೆಡೆ ಇಡೀ ಮುಸ್ಲಿಂ ಸಮುದಾಯವನ್ನು ಮತ್ತು ಇಸ್ಲಾಮನ್ನು ಭಯೋತ್ಪಾದಕರಂತೆ ಬಿಂಬಿಸುವ ತಂತ್ರ, ಇನ್ನೊಂದೆಡೆ ಅದಕ್ಕೆ ಇಸ್ಲಾಂ ಧರ್ಮದಲ್ಲಿರುವ ಕಂದಾಚಾರವೇ ಕಾರಣ ಎಂಬ ಅಮೆರಿಕ ಪ್ರಣೀತ ಪ್ರಚಾರ.. ಇವೆರಡೂ ಇಡೀ ಮುಸ್ಲಿಂ ಸಮುದಾಯದ ಮನಸ್ಥಿತಿ ಯನ್ನು ಸದಾ ಕ್ಷೋಭೆಯಲ್ಲಿಟ್ಟಿದೆ. ಭಾರತದಲ್ಲಿ ಹಿಂದೂತ್ವವಾದಿ ಶಕ್ತಿಗಳು ಇದನ್ನೇ ಭಾರತ ಎದುರಿಸುತ್ತಿರುವ ಆತಂಕ ಎಂದು ಬಿಂಬಿಸಿ ತಾವು ನಡೆಸುವ ನರಹತ್ಯೆಗೆ ಸಮರ್ಥನೆಯೆಂಬಂತೆ ಪ್ರಚಾರ ಮಾಡುತ್ತಿವೆ.

ಮುಸ್ಲಿಮರ ಈ ಆತಂಕವನ್ನು ತಮ್ಮ ರಾಜಕಾರಣಕ್ಕೆ ಬಳಸಿಕೊಳ್ಳುವ ಮುಸ್ಲಿಂ ರಾಜಕಾರಣಿಗಳ ಮತ್ತು ಧಾರ್ಮಿಕ ನಾಯಕರ ಪಾತ್ರವೂ ಇದರಲ್ಲಿದೆ. ಆದರೆ ಸಮುದಾಯ ಹೊರಗಿನಿಂದ ಶೋಷಣೆ ಮತ್ತು ದಮನಕ್ಕೊಳಗಾದಾಗ ಒಳಗಿನ ಶೋಷಕರು ಸಹಜವಾಗಿಯೇ ಕಾಣಬರುವುದಿಲ್ಲ. ಹೀಗಾಗಿ ಆ ಸಮುದಾಯದ ಸಾಮಾನ್ಯರು ಹೊರಗಿನ ಶತ್ರುಗಳಿಂದ ಪ್ರತ್ಯಕ್ಷವಾಗಿಯೂ, ಒಳಗಿನ ಶತ್ರುಗಳಿಂದ ಪರೋಕ್ಷವಾಗಿಯೂ ಎರಡೆರಡು ರೀತಿಯ ಶೋಷಣೆಗೊಳಗಾಗುತ್ತಾರೆ. ಹಿಂದೂತ್ವವಾದಿ ರಾಜಕಾರಣ ಮುಸ್ಲಿಂ ಸಮುದಾಯದೊಳಗಿನ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಾನ್ಯತೆಯನ್ನು ತಂದುಕೊಟ್ಟು ಸಮುದಾಯ ಇನ್ನಷ್ಟು ತನ್ನೊಳಗೇ ಸಂಕುಚಿತವಾಗುವಂತೆ ಮಾಡುತ್ತದೆ.

ಇಂಥ ಸಂದರ್ಭ ಮುಸ್ಲಿಂ ಪ್ರಗತಿಪರ ಲೇಖಕರಿಗೆ ಅತಿದೊಡ್ಡ ಸವಾಲು. ಸಮುದಾಯಕ್ಕೆ ದೂರವಾಗದೆ ಸಮುದಾಯದ ಕಂದಾಚಾರವನ್ನು ಮತ್ತು ಪುರೋಹಿತಶಾಹಿಯನ್ನು ಎದುರುಗೊಳ್ಳುವುದು ಹೇಗೆ? ಸಮುದಾಯವನ್ನು ಎಚ್ಚರಗೊಳಿಸುತ್ತಲೇ ಹಿಂದೂತ್ವವಾದಿ ರಾಜಕಾರಣಕ್ಕೂ, ಮುಸ್ಲಿಂ ಧಾರ್ಮಿಕ ಮೂಲಭೂತವಾದಿ ರಾಜಕಾರಣಕ್ಕೂ, ಅಮೆರಿಕ ಸಾಮ್ರಾಜ್ಯಶಾಹಿ ಇಸ್ಲಾಂ ಭಂಜಕ ಪ್ರಚಾರಕ್ಕೂ ಆಹಾರವಾಗದೇ ಇರುವುದು ಹೇಗೆ?

ಹೀಗೆ ಒಬ್ಬ ಸಾಹಿತಿಯ ಉದ್ದೇಶ ವಿಮರ್ಶೆಯೇ ಆಗಿದ್ದರೂ ಸಮುದಾಯ ಇರುವ ಸಂದರ್ಭ ಅದಕ್ಕೆ ಬೇರೆಯೇ ಅರ್ಥಕೊಡುತ್ತದೆ. ಹೀಗಾಗಿಯೇ ವಿಮರ್ಶೆಯೋ ಮಾತುಗಳು ಮುಸ್ಲಿಂ ಸಮುದಾಯಕ್ಕೆ ಅವಹೇಳನೆಯೇ ದೂಷಣೆಯಾಗಿ ಕೇಳಿಬಂದರೆ ಅದಕ್ಕೆ ವಿಮರ್ಶೆ ಮಾಡಿದವರು ಮಾತ್ರ ಕಾರಣರಲ್ಲ. ಮುಸ್ಲಿಂ ಸಮುದಾಯವೂ ಕಾರಣವಲ್ಲ. ಅದಕ್ಕೆ ಸಾಮ್ರಾಜ್ಯ ಶಾಹಿಗಳು ಮತ್ತು ಫ್ಯಾಸಿಸ್ಟರು ಸೃಷ್ಟಿಸಿರುವ ಸಂದರ್ಭವೇ ಕಾರಣ. ಆದ್ದರಿಂದಲೇ ಮುಸ್ಲಿಂ ಸಮು ದಾಯದೊಳಗಿನ ಸಾಹಿತಿ ಮತ್ತು ಬುದ್ಧಿಜೀವಿಗಳಿಗೆ ಇದು ಇನ್ನೂ ಹೆಚ್ಚಿನ ಜವಾಬ್ದಾರಿಯ ಹೊರೆಯನ್ನು ಹೊರಿಸುತ್ತದೆ.

ಒಂದು ಸಮುದಾಯ ಮತ್ತದರ ನಾಯಕತ್ವ ಅದರ ಧಾರ್ಮಿಕ ನಂಬಿಕೆಗಳ ಬಗ್ಗೆ, ಆಚಾರ ವಿಚಾರಗಳ ಬಗ್ಗೆ ಬರುವ ವಿಮರ್ಶೆಗೆ ಮುಕ್ತವಾಗಿದ್ದರೆ ಮಾತ್ರ ಅದು ಜೀವಪರವಾಗುತ್ತದೆ. ಇನ್ನೂ ಹೆಚ್ಚು "ಮಾನವೀಯ"ಗೊಳ್ಳುತ್ತದೆ. ಹಾಗೆ ನೋಡಿದರೆ ಬ್ರಾಹ್ಮಣ ಧರ್ಮ ಮೂಲಭೂತವಾಗಿ ಅಸಮಾನತೆ ಇತ್ಯಾದಿಗಳನ್ನು ಬೋಧಿಸಿದ್ದರೆ ಇಸ್ಲಾಮ್ ಮತ್ತು ಕ್ರಿಶ್ಚಿಯಾನಿಟಿ ಮೂಲಭೂತವಾಗಿ ಮನುಷ್ಯ ಪ್ರೀತಿಯನ್ನು ಆಧರಿಸಿ ಹುಟ್ಟಿಕೊಂಡವು. ಆದರೆ ಕ್ರಮೇಣ ಇಸ್ಲಾಮ್ ಮತ್ತು ಕ್ರಿಶ್ಚಿಯನ್ ಧರ್ಮಗಳ ಧಾರ್ಮಿಕ ನಾಯಕತ್ವ ಅತ್ಯಂತ ಆಸ್ತಿಕ ಕಾರಣಗಳಿಗಾಗಿ ಅದರಲ್ಲಿನ ಜೀವಪ್ರೀತಿಯನ್ನು ಕೊಂದು ಕಾಲಕಾಲಕ್ಕೆ ತಮ್ಮ ವರ್ಗದ ಹಿತಾಸಕ್ತಿಗೆ ಬೇಕಾದಂತೆ ಧರ್ಮದ ಮರುವ್ಯಾಖ್ಯಾನ ಮಾಡಿಕೊಳ್ಳುತ್ತಾ ಬಂದವು.

ಜೀವಪ್ರೀತಿಯ ಮತ್ತು ಅಮೂರ್ತ ಅಸಮಾನತೆಯ ಆಶಯದೊಂದಿಗೆ ಹುಟ್ಟಿದ ಇಸ್ಲಾಮ್ ಅನುಯಾಯಿಗಳಲ್ಲೂ ಇಂದು ಅಪಾರ ಅಸಮಾನತೆ ಇದೆ. ಬಡ್ಡಿ ವ್ಯಾಪಾರದ ವಿರೋಧ, ಜಕಾತ್ ಎಂಬ ದಾನಪ್ರೇರಣೆಯಂತ ಅಂಶಗಳು ಉಳಿದುಕೊಂಡಿದ್ದರೂ ಮುಸ್ಲಿಮರ ನಡುವೆಯೂ ಹಿಂದೂ ಧರ್ಮೀಯರ ನಡುವೆ ಇರುವಷ್ಟೇ ಬಡವ-ಶ್ರೀಮಂತ, ಕೆಳಜಾತಿ-ಮೇಲ್ಜಾತಿ, ಹೆಣ್ಣು-ಗಂಡು ಎಂಬ ತಾರತಮ್ಯಗಳು ತಾಂಡವವಾಡುತ್ತಿವೆ. ಕಂದಾಚಾರಗಳು ಹೇರಳವಾಗಿವೆ. ಆದರೆ ಅವುಗಳ ವಿರುದ್ಧ ಮುಸ್ಲಿಂ ಸಮುದಾಯ ದೊಳಗಿಂದಲೇ ಅತಿತೀಕ್ಷ್ಣವಾದ ವಿಮರ್ಶೆಗಳು ಬಂದಿವೆ. ಸೂಫಿ ಸಂತರು ಇಸ್ಲಾಂ ಧರ್ಮವು ಕಂದಾಚಾರಿಗಳ, ಪುರೋಹಿತಶಾಹಿಗಳ ಕೈಗೆ ಸಿಕ್ಕಿ ನಲುಗುತ್ತಿರುವ ಬಗ್ಗೆ ಮಾಡಿರುವಷ್ಟು ವಿಮರ್ಶೆ, ವಿಡಂಬನೆ, ಲೇವಡಿಗಳನ್ನು ಪ್ರಾಯಶಃ ರಶ್ದಿಯೂ ಮಾಡಿಲ್ಲ, ಯಾವ ಆಧುನಿಕ ವಿಮರ್ಶಕನೂ ಮಾಡಿಲ್ಲ. ಆದರೂ ಸೂಫಿ ಸಂತರು ಮಾಡಿದ ವಿಮರ್ಶೆ ಜನರನ್ನು ತಟ್ಟಿತು, ಇಸ್ಲಾಮನ್ನು ಸಾಧ್ಯವಾದಷ್ಟು ಸುಧಾರಿಸಿತು. ಜನರಿಗೆ ಪ್ರೀತಿಪಾತ್ರವಾಗು ಳಿಯಿತು. ಮೂಲಭೂತವಾದಿಗಳು ಅವರನ್ನು ಆಗಲೂ ಹೀಗಳೆದರೂ, ಪ್ರಭುತ್ವ ಕೊಡಬಾರದ ಚಿತ್ರಹಿಂಸೆ ಕೊಟ್ಟರೂ ಅವರು ಹಿಂದಕ್ಕೆ ಸರಿಯಲಿಲ್ಲ.

ಜನರ ಮೌಢ್ಯವನ್ನು ವಿಮರ್ಶೆ ಮಾಡಿ ಜನರನ್ನು ಪ್ರೀತಿಸುವುದು, ಅವರ ಭೌತಿಕ ಬದಲಾವಣೆಯ ಸುಧಾರಣೆಗೆ ಹೆಣಗುವುದು ಒಂದು ಜನಪರ ವಿಮರ್ಶೆಯ ಪರಿ. ವಿಮರ್ಶೆ ಎಷ್ಟೇ ತೀವ್ರ ಮತ್ತು ತೀಕ್ಷ್ಣವಾಗಿದ್ದರೂ ಜನರಿಂದ ದೂರ ವಾಗದೆ ಜನರ ಹೃದಯದಲ್ಲಿ ಬೇರುಬಿಡುವ ಪರಿ. ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ಜವಾಬ್ದಾರಿ ಒಂದಕ್ಕೊಂದು ಪೂರಕವಾಗಿ ಬೆಸೆದುಕೊಳ್ಳುವ ರೀತಿ...

ನೋ ಕಾಮೆಂಟ್ಸ್

"ಕನ್ನಡವು ತಂತ್ರಾಂಶದಲ್ಲಿ ಮುಂದುವರೆಯದಿದ್ದರೆ ಅದಕ್ಕೆ ಉಳಿಗಾಲ ಇಲ್ಲ ಎಂದು ಕುವೆಂಪು, ತೇಜಸ್ವಿ ಹೇಳಿದ್ದರು. ಸರಕಾರ ಗಣಿ ಮಣ್ಣಿನ ಬಗ್ಗೆ ಆಸಕ್ತಿ ವಹಿಸುವಷ್ಟು ಕನ್ನಡ ಗಣಕದ ಬಗ್ಗೆ ವಹಿಸುವುದಿಲ್ಲ. ಈ ಬಗ್ಗೆ 2004ರಲ್ಲಿ ತೇಜಸ್ವಿ ಮತ್ತು ನಾನು 16 ಜನ ಮಂತ್ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೆವು. ಎಲ್ಲಾ ಸಚಿವರು ನಮ್ಮನ್ನು ಕಂಬಳದ ಕೋಣದಂತೆ ಪಕ್ಕದಲ್ಲಿ ನಿಲ್ಲಿಸಿಕೊಂಡು ಛಾಯಾಚಿತ್ರ ತೆಗೆಸಿಕೊಂಡರು. ಆದರೆ ಯಾವುದೇ ಕೆಲಸಗಳಾಗಲಿಲ್ಲ."



\- ಚಂದ್ರಶೇಖರ ಕಂಬಾರ

"ರಾಜ್ಯದಲ್ಲಿ ಇದುವರೆಗೆ ಕರ್ನಾಟಕ ಸರ್ಕಾರಗಳು ಬಂದಿವೆಯೇ ವಿನಃ ಒಂದೇ ಒಂದು ಕನ್ನಡ ಸರ್ಕಾರವೂ ಬಂದಿಲ್ಲ. ಈಗಿನ ಕನ್ನಡ ಚಳವಳಿಗೆ ಸೈದ್ಧಾಂತಿಕ ರೂಪವಿಲ್ಲ. ಕನ್ನಡ ಚಳವಳಿಗಳಲ್ಲಿ ಇರುವ ಕಾರ್ಯಕರ್ತರಿಗೆ ಕೇವಲ ಭಾವನಾತ್ಮಕ ಆಯಾಮವಿದ್ದರಷ್ಟೇ ಸಾಲದು. ವೈಚಾರಿಕ ಆಯಾಮವೂ ಬೇಕು. ಹೀಗಾಗಿ ಕನ್ನಡ ಸಂಘಟನೆಗಳ ಕಾರ್ಯಕರ್ತರಿಗೆ ವೈಚಾರಿಕ ಅರಿವು ಮೂಡಬೇಕು. ಹೀಗಾಗಿ ಕನ್ನಡ ಸಂಘಟನೆಗಳ ಕಾರ್ಯಕರ್ತರಲ್ಲಿ ವೈಚಾರಿಕ ಅರಿವು ಮೂಡಿಸುವ ಕಾರ್ಯ ಆಗಬೇಕು."



\- ಚಂಪಾ

"ಕಳೆದ ಮಾರ್ಚ್ ತಿಂಗಳಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಮನರಂಜನಾ ಕಾರ್ಯಕ್ರಮಗಳಿಗೆ 8 ಕೋಟಿ ರೂ. ಖರ್ಚು ಮಾಡಲಾಗಿದೆ. ಅದರಲ್ಲಿ ಐಶ್ವರ್ಯ ರೈಯವರ ವಿಮಾನಯಾನಕ್ಕೆ 9 ಲಕ್ಷ ಖರ್ಚಾಗಿದೆ."

\- ಪತ್ರಿಕಾ ವರದಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಗುಬ್ಬಿ ಚನ್ನಬಸವೇಶ್ವರನ ಆಣೆಗೂ ನಾನು ಯಾವುದೇ ತಪ್ಪು ಮಾಡಿಲ್ಲ. ಕಳೆದ ಮೂರು ವರ್ಷಗಳಲ್ಲಿ ವಿರೋಧಿಗಳ ಕಣ್ಣುಕುಕ್ಕುವಂಥ ಕೆಲಸ ಮಾಡಿದ್ದರಿಂದ ನನ್ನ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ಅಧಿಕಾರದಿಂದ ಕೆಳಗೆ ಇಳಿಯುವಂತೆ ಮಾಡಿದರು."

\-ಯಡಿಯೂರಪ್ಪ


ಇದು ಲಂಚವಲ್ಲ-ಹೂಡಿಕೆ. ಅದು ಹೇಸಿಗೆಯಲ್ಲ- ಅಮೇಧ್ಯ!

"ಆರೆಸ್ಸೆಸ್-ಜ್ಯೋತಿ ಸಂಸ್ಥೆಯು ಯಡಿಯೂರಪ್ಪನವರ ಮಕ್ಕಳ ಒಡೆತನಕ್ಕೆ ಸೇರಿದ ಧವಳಗಿರಿ ಪ್ರಾಪರ್ಟೀಸ್ ಹಾಗೂ ಶಾಸಕ ಪ್ರೇಮಚಂದ್ರಸಾಗರ್ ಒಡೆತನಕ್ಕೆ ಸೇರಿದ ಸಹ್ಯಾದ್ರಿ ಹೆಲ್ತ್‌ಕೇರ್‌ಗೆ ನೀಡಿದ್ದು ಲಂಚವಲ್ಲ. ಅದು ಹೂಡಿಕೆ. ಎಲ್ಲಾ ನಿಯಮಾವಳಿಗಳು ಸರಿ ಇದ್ದದ್ದರಿಂದ ಯಡಿಯೂರಪ್ಪ ಬದಲು ಇನ್ಯಾರೇ ಮುಖ್ಯಮಂತ್ರಿಯಾಗಿದ್ದರೂ ಇದೇ ಕ್ರಮ ಕೈಗೊಳ್ಳುತ್ತಿದ್ದರು."

\- ಲೋಕಾಯುಕ್ತ ಎಡಿಜಿಪಿ ಸತ್ಯನಾರಾಯಣ್

ನೂಲಿನಂತೆ ಸೀರೆ!

"ಸಿಂಧಗಿಯಲ್ಲಿ ಪಾಕ್ ಧ್ವಜ ಹಾರಿಸಿದ್ದು ಆರೆಸ್ಸೆಸ್ಸಿನವರಾಗಿದ್ದು ವಿನಾಕಾರಣ ಶ್ರೀರಾಮಸೇನೆಯವರು ಎಂದು ಬಿಂಬಿಸಲಾಗುತ್ತಿದೆ. ಆದ್ದರಿಂದ ಪ್ರಕರಣವನ್ನು ಸಿಬಿಐಗೆ ವಹಿಸಬೇಕು."



\- ಪ್ರಮೋದ್ ಮುತಾಲಿಕ್

ರಾವಣ ಪುರಾಣ-ಹೆಣ್ಣು ಭ್ರೂಣಕ್ಕೆ ಶ್ರೀಲಂಕಾದಲ್ಲೂ ಬೆಳಕಿಲ್ಲ

"ಭಾರತದಲ್ಲಿ ಅನಾದಿಕಾಲದಿಂದಲೂ ಮಹಿಳೆಯರ ಶೋಷಣೆ ನಡೆಯುತ್ತಲಿದ್ದರೆ, ಶ್ರೀಲಂಕಾದಲ್ಲಿ ರಾವಣನ ಕಾಲದಿಂದಲೂ ಸ್ತ್ರೀಯರಿಗೆ ಉನ್ನತ ಸ್ಥಾನಮಾನಗಳನ್ನು ನೀಡುತ್ತಾ ಬರಲಾಗುತ್ತಿದೆ."

\- ಪದ್ಮಾ ಚಿನ್ಮಯಿ. ಉಪನ್ಯಾಸಕಿ

ವಿಮರ್ಶೆ ಮಾಡುವುದು ಜನಮನ್ನಣೆಗೇ??

"ವಿನಯದಿಂದ ವಿಮರ್ಶೆ ಮಾಡಬೇಕು. ಆಗ್ರಹ ಅಥವಾ ವ್ಯಂಗ್ಯದಿಂದಲ್ಲ. ಸ್ವೀಕರಣ ಗುಣ ಕಳೆದುಕೊಳ್ಳುವ ವಿಮರ್ಶೆ ಜನಮನ್ನಣೆ ಕಳೆದುಕೊಳ್ಳುತ್ತವೆ."

\- ಎಸ್. ಜಿ. ಸಿದ್ಧರಾಮಯ್ಯ

ಫಾಲಕ್ ಎಂಬ ನತದೃಷ್ಟ ಮಗುವನ್ನು ಕುರಿತು....



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಆಕೆಯ ಎರಡೂ ತೋಳುಗಳು ಮುರಿದಿವೆ. ಬುರುಡೆಗೆ ಹಲವಾರು ಏಟುಗಳು ಬಿದ್ದಿವೆ. ಮೇಲೆಲ್ಲ ಕಚ್ಚಿದ ಗಾಯಗಳಿವೆ. ಗಲ್ಲಗಳಿಗೆ ಕಾದ ಣದಿಂದ ಬರೆ ಇಡಲಾಗಿದೆ.

ತನ್ನ ದೇಹದ ಮೇಲೆ ಇಷ್ಟೆಲ್ಲ ಭೀಕರ ಳಿಯನ್ನು ಅನುಭವಿಸಿ, ಕಳೆದ 17 ದಿನಗಳಿಂದ ಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ಸಾವುಬದುಕಿನ ುವೆ ಹೊಯ್ದಾಡುತ್ತಿರುವ ಆಕೆಯ ಹೆಸರು ಲಕ್. ವಯಸ್ಸು ಕೇವಲ ಎರಡು ವರ್ಷ...

ಫಾಲಕ್‌ನಂತಹ ಅಮಾಯಕ ಮಗುವಿಗೆ ಇಷ್ಟೆಲ್ಲ ಸೆ ಕೊಟ್ಟವರು ಯಾರು? ಯಾಕೆ ಈ ಪುಟ್ಟ ಗುವಿಗೆ ಹೀಗಾಯಿತು? ಬದುಕೆಂಬುದು ಏನು ದು ಅರಿಯುವ ಮುನ್ನವೇ ಈ ಪುಟಾಣಿ ವಿನ ಬಾಯಿಗೆ ತುತ್ತಾಗುವಂತಹ ಪರಿಸ್ಥಿತಿ ರ್ಮಾಣವಾಗಿದ್ದು ಹೇಗೆ? ಅದಕ್ಕೆ ಕಾರಣರು ಾರು?

ಈ ಎಲ್ಲ ಪ್ರಶ್ನೆಗಳಿಗೆ ನಾವು ಸರಿಯಾದ ತ್ತರಗಳನ್ನು ಕಂಡುಕೊಳ್ಳಬೇಕಿದೆ. ಹಾಗೆ ಾಡಿದರೆ ಮಾತ್ರ ನಮ್ಮ ದೇಶದಲ್ಲಿ ಾಡವಾಡುತ್ತಿರುವ ಬಡತನ ಇಲ್ಲದೆ ಹುಟ್ಟು ಕುವ ಕ್ರೌರ್ಯತೆ, ಹಿಳೆಯರ ಮೇಲಾಗುವ ತ್ಯಾಚಾರ, ಚಿಕ್ಕ ಡುಗಿಯರನ್ನೂ ಶ್ಯಾವಾಟಿಕೆಗೆ ದೂಡುವ ಲ, ಏನೂ ಅರಿಯದ ಟ್ಟಬಾಲೆಯರನ್ನೇ ಮುಕ್ಕುವ ಣದ ಕುಳಗಳ ವಿಕೃತಿ, ಮ್ಮ ದೇಶದಲ್ಲಿರುವ ರ್ಥಿಕ-ಸಾಮಾಜಿಕ-ಲೈಂಗಿಕ ಸಮಾನತೆ ... ಎಲ್ಲವೂ ರ್ಥವಾಗುತ್ತದೆ.



ಕಳೆದ ತಿಂಗಳು ಹದಿನಾಲ್ಕು ರ್ಷದ ಹುಡುಗಿಯೊಬ್ಬಳು ಜ್ಞಾಹೀನಳಾಗಿದ್ದ ಫಾಲಕ್ ಾವುವನ್ನು ಎತ್ತಿಕೊಂಡು ದೆಹಲಿಯ ಏಮ್ಸ್ ಆಸ್ಪತ್ರೆಗೆ ಂದು "ಇದು ನನ್ನ ಮಗು. ಮಂಚದಿಂದ ಜಾರಿ ದ್ದಿದ್ದ ರಿಂದ ಇದಕ್ಕೆ ಗಾಯಗಳಾಗಿವೆ. ಇದಕ್ಕೆ ಕಿತ್ಸೆಕೊಡಿ" ಎಂದು ಕೇಳಿದಳು. ಫಾಲಕ್ ಪಾಪುವಿನ ಾರುಣ ಸ್ಥಿತಿ ಯನ್ನು ಗಮನಿಸಿದ ಏಮ್ಸ್ ವೈದ್ಯರಿಗೆ ಹುಡುಗಿ ಸತ್ಯ ಹೇಳುತ್ತಿಲ್ಲ ಎಂದು ಗೊತ್ತಾಯಿತು. ಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಧಿಕಾರಿಗಳಿಗೆ ಆ ಹುಡು ಗಿಯ ಬಗ್ಗೆ ತಿಳಿಸಿದ ವೈದ್ಯರು ಕ್ಷಣವೇ ಫಾಲಕ್‌ಳಿಗೆ ಚಿಕಿತ್ಸೆ ನೀಡಲಾರಂಭಿಸಿದರು. ಳೆದ ಹದಿನೇಳು ದಿನಗಳಿಂದ ವೈದ್ಯರು ಫಾಲಕ್‌ಗೆ ಸ್ತ್ರಚಿಕಿತ್ಸೆ, ಔಷಧಿ ಇತ್ಯಾದಿಗಳನ್ನು ನೀಡುತ್ತಿದ್ದರೂ ಈ ೀಖನವನ್ನು ಬರೆಯುತ್ತಿರುವಾಗಲೇ ಆಕೆ ದುಕುಳಿಯುವುದು ಕಷ್ಟ ಎಂದು ವೈದ್ಯರು ಹೇಳಿದ್ದಾರೆ.

ಯಾರು ಈ ಫಾಲಕ್? ಆಕೆಯ ತಂದೆತಾಯಿ ಯಾರು? ಫಾಲಕ್‌ಳಿಗೂ, ಆಕೆಯನ್ನು ಆಸ್ಪತ್ರೆಗೆ ಸೇರಿಸಿದ ದಿನಾಲ್ಕು ವರ್ಷದ ಹುಡುಗಿಗೂ ಏನು ಸಂಬಂಧ? ಕೆಗೆ ಈ ಮಗುವನ್ನು ಕೊಟ್ಟವರು ಯಾರು? ಆಕೆ ಯಾಕೆ ಈ ಮಗುವಿನ ಪ್ರಾಣವೇ ಹೋಗುವಂತೆ ಬಡಿದಳು? ಇದೆಲ್ಲವನ್ನು ಅರಿಯಲು ದೆಹಲಿ ಪೊಲೀಸರು ಪ್ರಯತ್ನಿಸು ತ್ತಿದ್ದಾರೆ. ಆದರೆ ಈಗಾಗಲೇ ಸಿಕ್ಕಿರುವ ಹಲವೇ ಮಾಹಿತಿ ಗಳು ತಲ್ಲಣಿಸುವಂತಿವೆ.

ಇಲ್ಲಿಯವರೆಗೂ ಯಾರಿಗೂ ಈ ಫಾಲಕ್‌ಳ ತಂದೆ ತಾಯಿ ಯಾರೆಂಬದು ಗೊತ್ತಿಲ್ಲ. ಆಕೆ ಯಾವುದೋ ಅವಿವಾಹಿತ ಯುವತಿಗೆ ಹುಟ್ಟಿದ್ದರಿಂದ ಆ ಯುವತಿ ಫಾಲಕ್‌ಳನ್ನು ಬಿಸಾಡಿ ಹೋಗಿರಬಹುದು ಅಥವಾ ಫಾಲಕ್ ಯಾವುದೋ ಬಡಮಹಿಳೆಗೆ ಹುಟ್ಟಿದ್ದು ಆಕೆ ತನ್ನ ಮಗಳನ್ನು ಸಾಕಲಾಗದೇ ತಮ್ಮ ಪಾಪುವನ್ನು ತೊರೆದಿರಬಹುದು. ಅಥವಾ ಫಾಲಕ್‌ಳನ್ನು ಯಾವುದೋ ಬಡಕುಟುಂಬ ಮಾರಿರಬಹುದು. ಅಥವಾ ಆಕೆಯನ್ನು ಯಾರೋ ಅಪಹರಿಸಿ, ಆನಂತರ ಮಾರಾಟ ಮಾಡಿರ ಬಹುದು. ಫಾಲಕ್ ಅವಿವಾಹಿತ ಯುವತಿಗೆ ಹುಟ್ಟಿದ್ದರೆ ಇವತ್ತು ನಮ್ಮ ಯುವಜನತೆ ವಿವಾಹ ಪೂರ್ವ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿದೆ ಎಂದೂ, ಅವರಿಗೆ ಗರ್ಭ ನಿರೋಧಕದ ಮಾರ್ಗಗಳ ಬಗ್ಗೆ ಗೊತ್ತಿಲ್ಲ ಎಂದೂ, ಇಂತಹದ್ದನ್ನು ತಡೆಯಬೇಕೆಂದರೆ ಶಾಲಾ-ಕಾಲೇಜುಗಳಲ್ಲಿ ಸೆಕ್ಸ್ ಎಜುಕೇಶನ್ ಅಗತ್ಯವಾಗಿದೆ ಎಂದೂ ಸ್ಪಷ್ಟವಾಗುತ್ತದೆ.

ಈ ಹಿಂದೆ ಹಲವಾರು ಸಮೀಕ್ಷೆಗಳು ನಮ್ಮ ದೇಶದ ಯುವಜನತೆ ಲೈಂಗಿಕ ಕ್ರಿಯೆಗಳಲ್ಲಿ ತೊಡಗಿರುವುದನ್ನು ಸಾಬೀತುಪಡಿಸಿವೆ. ಫಾಲಕ್ ದೆಹಲಿಯಲ್ಲಿ ಸಾವುಬದುಕಿನ ನಡುವೆ ಹೋರಾಡುತ್ತಿರುವಾಗಲೇ ಬೆಂಗಳೂರು ಸೇರಿ ದಂತೆ ಭಾರತದ ವಿವಿಧ ಊರುಗಳಲ್ಲಿ ಹತ್ತಾರು ಮಕ್ಕಳನ್ನು ಕಸದ ತಿಪ್ಪೆಗಳಲ್ಲಿ, ರಸ್ತೆಬದಿಯಲ್ಲಿ ಬಿಟ್ಟುಹೋಗಿರುವುದು ವರದಿಯಾಗಿದೆ. ಈ ಎಲ್ಲ ಮಕ್ಕಳೂ ಅವಿವಾಹಿತ ಯುವತಿ ಯರಿಗೆ ಹುಟ್ಟಿರಲೂಬಹುದು. ಇಂತಹ ಪ್ರಕರಣಗಳ ಬಗ್ಗೆ ನಾವು ಹಲವಾರು ಬಾರಿ ವರದಿಗಳನ್ನು ಓದಿದ್ದರೂ, ಇದಕ್ಕೆ ಕಾರಣ ಯುವಜನತೆಯಲ್ಲಿನ ಅಜ್ಞಾನ ಎಂಬುದು ಗೊತ್ತಿ ದ್ದರೂ, ಸೆಕ್ಸ್ ಎಜುಕೇಶನ್ ವಿರುದ್ಧ ನಮ್ಮ ಸಮಾಜದಲ್ಲಿ ಅದೆಷ್ಟು ಪೂರ್ವಗ್ರಹಗಳಿವೆ ಎಂದರೆ ಇವತ್ತು ಈ ವಿಷಯಕ್ಕೆ ಸಂಬಂಧಪಟ್ಟಂತೆ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಆಯಾಮಗಳೂ ಅಂಟಿಕೊಂಡಿದ್ದು ಅದು ಅಸಾಧ್ಯವೆಂಬ ವಾತಾವರಣ ಸೃಷ್ಟಿಯಾಗಿದೆ.

ಇನ್ನು ಫಾಲಕ್ ಯಾವುದೋ ಬಡ ತಂದೆ ಮತ್ತು ತಾಯಿಗೆ ಹುಟ್ಟಿದ್ದು, ಅವರು ಆಕೆಯನ್ನು ಸಾಕಲು ಆರ್ಥಿಕ ಶಕ್ತಿ ಇಲ್ಲದೆ ತೊರೆದಿದ್ದಾರೆ ಎಂಬುದು ನಿಜವಾಗಿದ್ದರೆ ನಮ್ಮ ದೇಶದಲ್ಲಿ ಬಡತನವೆಂಬುದು ಹೆತ್ತ ಕರುಳನ್ನೂ ಹೇಗೆ ಅಮಾನವೀಯಗೊಳಿಸುತ್ತದೆ ಎಂಬುದು ಗೊತ್ತಾಗುತ್ತದೆ. ಇವತ್ತು ಹತ್ತಾರು ಮಿಲಿಯಾಧೀಶರು ಇರುವ ಭಾರತದಲ್ಲಿ ಹೆತ್ತ ಮಕ್ಕಳನ್ನೇ ತೊರೆಯುವಷ್ಟು ಬಡತನ ಇರುವು ದಾದರೂ ಯಾಕೆ ಎಂದು ನೋಡಿದರೆ ನಮ್ಮ ಹಾಲಿ ಆರ್ಥಿಕ ನೀತಿಗಳ ಕಠೋರತೆ ಅರ್ಥವಾಗುತ್ತದೆ.

ಹಾಗೆಯೇ ಪುಟಾಣಿ ಫಾಲಕ್‌ಳನ್ನು ಹೆತ್ತವರೇ ಮಾರಿದ್ದಾರೆ, ಆಕೆಯನ್ನು ದುಡ್ಡುಕೊಟ್ಟು ಯಾರೋ ಖರೀದಿಸಿದ್ದಾರೆ ಎಂಬುದು ಸತ್ಯವಾದರೆ ಇವತ್ತು ಚಿಕ್ಕ ಮಕ್ಕಳೂ ಹೇಗೆ ನಮ್ಮ ದೇಶದಲ್ಲಿ ಮಾರುವ/ಖರೀದಿಸುವ ಸರಕುಗಳಾಗಿದ್ದರೆ ಎಂದೂ, ಹಾಗೆ ಹಣ ಕೊಟ್ಟುಕೊಂಡುಕೊಂಡವರು ಆನಂತರ ಅಂತಹ ಮಕ್ಕಳನ್ನು ವೇಶ್ಯಾವಾಟಿಕೆಗೆ ದೂಡಲೆಂಧೇ ಪಡೆದಿದ್ದಾರೆ ಎಂದೂ ಅರಿವಾಗುತ್ತದೆ. ಹೀಗೆ ಮಕ್ಕಳನ್ನೇ ನಿರ್ಧಯಿಯಾಗಿ ಮಾರುವ, ಕೊಳ್ಳುವ ಜನರನ್ನು ನಮ್ಮ ಆರ್ಥಿಕ-ಸಾಮಾಜಿಕ ನೀತಿಗಳು ಸೃಷ್ಟಿಸಿವೆ.

ಇವತ್ತು ಫಾಲಕ್ ಪ್ರಜ್ಞಾವಸ್ಥೆಯಲ್ಲಿ ನರಳುತ್ತಿದ್ದರೆ ಅದಕ್ಕೆ ಕಾರಣ ಆಕೆಯನ್ನು ಆಸ್ಪತ್ರೆಗೆ ಕರೆತಂದ ಹದಿನಾಲ್ಕು ವರ್ಷದ ಹುಡುಗಿ. ಆದರೆ ಈ ಹುಡುಗಿಯ ಬಗ್ಗೆ ಕೋಪ ಬರುವುದಿಲ್ಲ, ಯಾಕೆಂದರೆ ಆಕೆಯ ಬದುಕು ಕೂಡ ಒಂದು ರೀತಿಯಲ್ಲಿ ಫಾಲಕ್‌ಳ ಜೀವನದಂತೆಯೇ ಇದೆ.

ಈ ಹುಡುಗಿ ಚಿಕ್ಕವಳಾಗಿದ್ದಾಗಲೇ ತನ್ನ ತಾಯಿಯನ್ನು ಕಳೆದುಕೊಂಡಳು. ಅವಳ ತಂದೆ ಆಕೆಗೆ ತುಂಬಾ ಹೊಡೆಯುತ್ತಿದ್ದ. ಆತ ತನ್ನ ಮಗಳಿಗೆ ಪ್ರೀತಿ ಇರಲಿ, ಉಣ್ಣಲು ಸರಿಯಾಗಿ ಊಟ ಕೂಡ ಹಾಕುತ್ತಿರಲಿಲ್ಲ. ಇದೆಲ್ಲದರಿಂದ ಬೇಸತ್ತ ಆ ಹುಡುಗಿ ಒಂದು ದಿನ ಮನೆಯಿಂದ ಓಡಿಹೋದಳು. ಹಾಗೆ ಓಡಿ ಹೋದವಳಿಗೆ ಆಶ್ರಯ ನೀಡಿದ್ದು ಪೂಜಾ ಎಂಬ ಮಹಿಳೆ. ಆದರೆ ಪೂಜಾ ಈ ಹುಡುಗಿಗೆ ಕರುಣೆ ತೋರಿಸಿದ್ದು ಮಾನವೀಯತೆಯಿಂದಲ್ಲ, ಬದಲಾಗಿ ಈ ಹುಡುಗಿಯನ್ನು ವೇಶ್ಯಾವಾಟಿಕೆಗೆ ದೂಡಿ ಆ ಮೂಲಕ ಹಣ ಗಳಿಸಲು. ಪೂಜಾ ಮತ್ತು ಆಕೆಯ ಗಂಡ ಸುದೀಪ್ ಈ ಹುಡುಗಿಯನ್ನು ಉತ್ತರ ಭಾರತದ ವಿವಿಧ ಊರುಗಳಿಗೆ ಕರೆದುಕೊಂಡು ಹೋಗಿ ಗಿರಾಕಿಗಳಿಗೆ ಮಾರಿ ಹಣಗಳಿಸಲಾರಂಭಿಸಿದರು.

ಕೆಲದಿನಗಳ ನಂತರ ಪೂಜಾ ಮತ್ತು ಸುದೀಪ್ ಈ ಹುಡುಗಿಯನ್ನು ರಾಜ್‌ಕುಮಾರ್ ಎಂಬಾತನಿಗೆ ವಹಿಸಿದರು. ರಾಜ್‌ಕುಮಾರ್ ಕೂಡ ಈ ಹುಡುಗಿಯನ್ನು ತನ್ನ ಕಾಮತೃಷೆಗೆ ಬಳಸಿಕೊಂಡನಲ್ಲದೆ ಆಕೆಯನ್ನು ಬೇರೆಯವರಿಗೂ ಮಾರುತ್ತಿದ್ದ.

ಹೀಗಿರುವಾಗ, ಫಾಲಕ್ ಎಂಬ ಎರಡು ವರ್ಷದ ಮಗು ಕೂಡ ಹಲವಾರು ಜನರ ಕೈಬಲದಾಗಿ ಕೊನೆಗೆ ರಾಜ್‌ಕುಮಾರ್‌ನ ಕೈಸೇರಿತು. ಆತ ಫಾಲಕ್‌ಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹದಿನಾಲ್ಕು ವರ್ಷದ ಹುಡುಗಿಗೆ ವಹಿಸಿದ. ಕೆಲದಿನಗಳ ಹಿಂದೆ ಇದೇ ರಾಜ್‌ಕುಮಾರ್ ತನ್ನ ಅಂಗವಿಕಲ ಮಗನಿಗೆ ಚಿಕಿತ್ಸೆ ಕೊಡಿಸಲು ಮುಂಬೈಗೆ ಹೋದಾಗ, ಆ ಹುಡುಗಿ ಫಾಲಕ್‌ಳನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಳು.


ಅಳುತ್ತಿದ್ದ ಪುಟ್ಟ ಮಗು ಫಾಲಕ್‌ಳನ್ನು ಸುಮ್ಮನಾಗಿಸಲಾಗದೇ ಆ ಹದಿನಾಲ್ಕು ವರ್ಷ ವಯಸ್ಸಿನ ಹುಡುಗಿಯೇ ಹತಾಶೆಯಿಂದ ಹೊಡೆದು ಬಡಿದಳೇ? ಅಥವಾ ಫಾಲಕ್‌ಳನ್ನು ರಾಜ್‌ಕುಮಾರ್ ಹೊಡೆದು ಓಡಿಹೋದನೆ? ಇನ್ನೂ ಆಘಾತಕಾರಿಯಾದ ವಿಚಾರ ಯಾವುದೆಂದರೆ ಈ ಪುಟ್ಟ ಫಾಲಕ್‌ಳನ್ನೂ ಲೈಂಗಿಕ ಕೃತ್ಯಗಳಿಗೆ ಬಳಸಲಾಗಿದೆಯೇ?

ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳು ಇನ್ನೂ ಸ್ಪಷ್ಟವಾಗಿಲ್ಲ. ಉತ್ತರಗಳು ಸಿಕ್ಕನಂತರವೂ ಯಾರಿಗೂ ನೆಮ್ಮದಿ ಸಿಗುವುದಿಲ್ಲ. ಯಾಕೆಂದರೆ ಈ ಪ್ರಶ್ನೆಗಳಿಗೆ ಸಿಗುವ ಉತ್ತರಗಳು ನಮ್ಮ ದೇಶದ ಬಡವರ ಅಸಹಾಯಕತೆ, ಅಮಾಯಕ ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ರಕ್ಷಣೆ ಇಲ್ಲದ ಬಾಲಕಿಯರು, ಇಂತಹವುಗಳನ್ನೇ ಎತ್ತಿತೋರುತ್ತವೆ ಅಷ್ಟೇ. ಇದು ದುಬಾರಿ ಶಾಪಿಂಗ್ ಮಾಲ್‌ಗಳ, ಟಿಕ್ಕಿಗಳ ಹವಾನಿಯಂತ್ರಿತ ಬಂಗಲೆಗಳ, ಆಮದಾದ ಐಷಾರಾಮಿ ಕಾರ್‌ಗಳ, ವಿಜಯ್ ಮಲ್ಯನ ಬಿಕಿನಿ ಕ್ಯಾಲೆಂಡರ್‌ಗಳ, ಪಬ್ಬು-ಕ್ಲಬ್ಬು-ಡಿಸ್ಕೋಥೆಕ್‌ಗಳ, ಟ್ವಿಟ್ಟರ್-ಫೇಸ್ ಬುಕ್‌ಗಳ 'ಶೈನಿಂಗ್ ಇಂಡಿಯಾ'ದ ಅಡಿಯಲ್ಲೇ ಕೊಳೆತು ನಾರುತ್ತಿರುವ ಭಾರತದ ಸ್ಥಿತಿಗತಿಗಳನ್ನು ತೋರುವ ಉತ್ತರಗಳು.

ಎಲ್ಲಕ್ಕಿಂತ ಮುಖ್ಯವಾಗಿ ಫಾಲಕ್ ಮತ್ತು ಆ ಹದಿನಾಲ್ಕು ವರ್ಷದ ಹುಡುಗಿ, ಇಬ್ಬರೂ, ನಮ್ಮ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಧಃಪತನಕ್ಕೆ ಬಲಿಯಾಗಿರುವ ಅಮಾಯಕರು.... ❧

ವಚನಸಾಹಿತ್ಯ ಬೆಳೆದದ್ದೇ ಕೆಳ ಜಾತಿಗಳಿಂದ

- ಡಾ. ಎಲ್. ಬಸವರಾಜು



ಹಿರಿಯ ಸಾಹಿತಿ, ಸಂಶೋಧಕ ಎಲ್.ಬಸವರಾಜು ಅವರು ಇತ್ತೀಚೆಗೆ ಮರಣಹೊಂದಿದ್ದಾರೆ. ಅವರ ಬೌದ್ಧಿಕ ತೀಕ್ಷ್ಣತೆ, ಸಾಮಾಜಿಕ ಕಾಳಜಿಗಳನ್ನು ಬಿಂಬಿಸುವ ಸಂದರ್ಶನವನ್ನು ಅವರ ನೆನಪಿನಲ್ಲಿ ಇಲ್ಲಿ ನೀಡುತ್ತಿದ್ದೇವೆ.

ಡಾ. ಎಲ್. ಬಸವರಾಜು ಅವರು ಒಬ್ಬ ಶ್ರೇಷ್ಠ ಅಧ್ಯಯನಕಾರರಾಗಿ ಅರ್ಥಪೂರ್ಣ ಬರಹಗಳಿಂದ ವಿದ್ವತ್ ವಲಯದಲ್ಲಿ ಒಂದು ದೊಡ್ಡ ಆಶಯವಾಗಿದ್ದಾರೆ. ಸೃಜನಶೀಲ ವಿದ್ವಾಂಸರಾಗಿರುವಂತೆಯೆ ಅವರು ಮಾತಿನ ವಿಶಿಷ್ಟ ಕವಿಯೂ ಹೌದು. ವಾಲ್ಟ್‌ವಿಟ್‌ಮನ್ ತರದ ಕವಿ ಮನಸ್ಸು ಹಾಗೂ ವಚನಕಾರರ ಸ್ಪರ್ಶ ಅವರ ಪದ್ಯಗಳಲ್ಲಿ ಮೌನವಾಗಿ ಹಾದುಹೋಗುತ್ತವೆ. ಎಪ್ಪತ್ತೈದು ವಸಂತಗಳನ್ನು ದಾಟಿರುವ ಬಸವರಾಜು ಅವರ ಶರೀರಕ್ಕೆ ಮುಪ್ಪಾಗಿದ್ದರೂ ಅವರ ಮನಸ್ಸು ಮಾತ್ರ ಹದಿಹರೆಯದ ಕಾವ್ಯದ ಕನ್ನೆತನದಂತೆ ಈಗ ಬಿಚ್ಚಿಕೊಂಡಿದೆ. ನಮ್ಮ ಪರಂಪರೆಯಲ್ಲಿ ಬಸವರಾಜು ಅವರು ಬಹಳ ಎತ್ತರಕ್ಕೆ ನಿಲ್ಲುವುದು ಅವರ ಗಂಭೀರ ಸಂಶೋಧನಾ ಬರಹಗಳಿಂದ ಹಾಗೂ ಸಂಪಾದನಾ ಕೃತಿಗಳಿಂದ. ಬಸವ, ಅಲ್ಲಮ, ಅಕ್ಕ ಹಾಗೂ ದೇವರ ದಾಸಿಮಯ್ಯ ಅವರ ವಚನಗಳನ್ನು ತೂಗಿ ತಾಳೆ ಹಾಕಿ ಪರಿಷ್ಕರಿಸಿ ಖೋಟಾತನವ ಕಡಿದುಹಾಕಿ ವಿಶಿಷ್ಟ ಗ್ರಹಿಕೆಯಿಂದ ಟೀಕೆ ಬರೆದು ಅಧ್ಯಯನದ ಹಾದಿಯಲ್ಲಿ ಮೈಲುಗಲ್ಲುಗಳನ್ನು ನೆಟ್ಟಿದ್ದು ಬಹುದೊಡ್ಡ ಸಾಧನೆಯಾಗಿದೆ. ಜೈನ, ವಚನ ಹಾಗೇ ಪ್ರಾಚೀನ ಕನ್ನಡ ಸಾಹಿತ್ಯದ ಬಗ್ಗೆ ಬಸವರಾಜು ಅವರ ವಿದ್ವತ್ತು ಪರಂಪರೆಯನ್ನು ವಿಸ್ತರಿಸುವ ಸಂದರ್ಭದಲ್ಲಿ ಯಾವೊಬ್ಬ ದೊಡ್ಡ ಕವಿಗಿಂತಲೂ ಕಡಿಮೆ ಏನಲ್ಲ. ನಿರಂತರವಾಗಿ ಒಂದು ಬಗೆಯ ಸೃಜನಶೀಲವಾದ ಹುಡುಕಾಟದ ನೆಲೆ ಅವರ ಒಟ್ಟು ಬರಹಗಳಲ್ಲಿ ಕಂಡುಬರುತ್ತದೆ. ಸರ್ವಜ್ಞನ ವಚನಗಳನ್ನಾಗಲಿ, ಷಟ್‌ಸ್ಥಲ ವಚನಗಳನ್ನಾಗಲಿ, ಅಕ್ಕನ ವಚನಗಳನ್ನೆ ಆಗಲಿ ಅವರಂತೆ ನೋಡಿ ಅವುಗಳ ಸುತ್ತ ಇದ್ದ ಧಾರ್ಮಿಕವಾದ ಮತೀಯ ಮುಸುಕನ್ನು ತುಂಡರಿಸಿ ವಚನ ಸಾಹಿತ್ಯಕ್ಕೆ ವ್ಯಾಖ್ಯಾನ ನೀಡಿದವರು ಬಹು ಅಪರೂಪ. ಹೀಗಾಗಿಯೇ, ಪರಂಪರೆಯನ್ನು ವಿಸ್ತರಿಸುವ ಹಾಗು ಅದರ ಮಿತಿಗಳನ್ನು ದಾಟಿಸುವ ದೊಡ್ಡ ಕೆಲಸವನ್ನು ಇಂತಹವರು ಮಾಡುತ್ತಲೇ ಇರುತ್ತಾರೆ. ಅವರಿಗೆ ಅವರ ಕೃತಿಗಳು ಅಪಾರ ಕೀರ್ತಿಯನ್ನು ತಂದುಕೊಟ್ಟಿರುವುದರ ಜೊತೆಗೆ ವಿದ್ವತ್ ವಲಯವನ್ನು ಬೆಳೆಸಿವೆ. 'ಅಲ್ಲಮನ ವಚನ ಚಂದ್ರಿಕೆ' ಹಾಗೂ 'ಶಿವದಾಸ ಗೀತಾಂಜಲಿ' ಎಂಬ ಈ ಎರಡೂ ಕೃತಿಗಳಿಗೆ ಡಿಲಿಟ್ ಪದವಿ ಕೂಡ ಅವರಿಗೆ ಲಭಿಸಿತು. (ಅನಂತರ ಅವರ ಅಪಾರ ಶ್ರಮ, ಶಿಸ್ತು, ಗಾಂಭೀರ್ಯ ತುಂಬಿದ ಅಧ್ಯಯನ ಕೃತಿಗಳ ಕಡೆಗೆ ಯಾವ ಪದವಿಯೂ ಕಣ್ಣೆತ್ತಿ ಕೂಡ ನೋಡಲಿಲ್ಲ) ಸಂಸ್ಕೃತ ನಾಟಕಗಳನ್ನೂ ಅವರು ಕನ್ನಡಕ್ಕೆ ತಂದರು. 'ಭಾಸನ ಭಾರತ ರೂಪಕ' ಆ ವಿಚಾರದಲ್ಲಿ ವಿಶಿಷ್ಟ ಕೃತಿಯಾಗಿದೆ. ಆಮೇಲೆ ಬಸವರಾಜು ಅವರು 'ಕನ್ನಡ ಛಂದಸ್ಸು' ಕೃತಿಯ ಮೂಲಕ ಹೊಸದೊಂದು ದೃಷ್ಟಿಯನ್ನು ತೋರಿದರು. ಅನೇಕ ಮೇರು ಕೃತಿಗಳನ್ನು ನಿರಂತರವಾಗಿ ನಾಲ್ಕೂವರೆ ದಶಕಗಳತನಕ ಸೃಷ್ಟಿಸುತ್ತಾ 1990ರ ವೇಳೆಗೆ 'ಬಸವಣ್ಣನವರ ಷಟ್‌ಸ್ಥಲ ವಚನಗಳು' ಹೊತ್ತಿಗೆಯನ್ನು ಸಂಪಾದಿಸಿ ಹೊಸ ನೆಲೆಯ ವ್ಯಾಖ್ಯಾನಗಳ ಸಹಿತ ಇಡೀ ವಚನ ಸಾಹಿತ್ಯದ ಬಗ್ಗೆಯೇ ಹೊಸ ಹೊಳಹುಗಳನ್ನು ಕೊಟ್ಟರು. 1951 ರಿಂದ 1990ರವರೆಗೆ ನಿರಂತರವಾದ 'ಶೋಧ'ದಲ್ಲಿ ಡಾ. ಎಲ್. ಬಸವರಾಜು ಅವರು ಮುಳುಗಿ ಪರಂಪರೆಯನ್ನು ಕಟ್ಟುವ ಕೆಲಸವನ್ನು ಮಾಡಿದ್ದಾರೆ. ಈಗ ಅವರು ಇದ್ದಕ್ಕಿದ್ದಂತೆ ಒಂದು ಸಂಜೆ ಮುಳುಗಿ ಆವಿಯಾಗುತ್ತಿರುವ ಸೂರ್ಯನೆಳೆರೇಖೆಮೆಯಂತಹ ಕ್ಷಣದಲ್ಲಿ ಕಾವ್ಯದ ಅಲೆಗಳ ಮಧ್ಯೆ ತಮ್ಮ 'ಕಾಣಾಂತರ' ಎಂಬ ಪುಟ್ಟ ದೋಣಿಯನ್ನು ಬಿಟ್ಟಿದ್ದಾರೆ. ನಿಜಕ್ಕೂ ಅವರು ಮುಗ್ಧಕವಿ. ಸ್ಫೂರ್ತಿ ಹಾಗು ಪ್ರೋತ್ಸಾಹಗಳ ಮೂಲಕ ಕಾವ್ಯರಚನೆಯ ಪಯಣದಲ್ಲಿ ಸಾಗಿದ್ದಾರೆ. ಹೀಗೆ ಮುಪ್ಪಿನ ಚಿಪ್ಪಿನಲ್ಲಿ ಹೊಳೆಯುತ್ತಿರುವ ಪ್ರೀತಿಯ ಜೀವಿ ಎಲ್. ಬಸವರಾಜು ಅವರ ಜೊತೆಗಿನ ಸಂದರ್ಶನ ಇಲ್ಲಿದೆ.

* *ವಚನ ಸಾಹಿತ್ಯ ಮತ್ತು ಅದರ ಕ್ರಾಂತಿ ಮೂಲತಃ ದೇಶಿ ಸಂವೇದನೆಯದು ಅಂತಾ ನಿಮಗೆ ಅನ್ನುತ್ತಾ?*

- ಖಂಡಿತವಾಗಿ, ನನಗಂತೂ ಆ ಬಗ್ಗೆ ಸಂಶಯವೇ ಇಲ್ಲ. ಎಲ್ಲ ಕೆಳಜಾತಿಗಳ ಒಂದು ಸಮುಷ್ಠಿತನ ವಚನಸಾಹಿತ್ಯದಲ್ಲಿ ಮೊಟ್ಟ ಮೊದಲಬಾರಿಗೆ ನಮ್ಮ ದೇಶದಲ್ಲಿ ಅಭಿವ್ಯಕ್ತಗೊಂಡಿತು. ನಮ್ಮ ಜನಪದರ ಆಳದ ಮಾತು ವಚನವಾದದ್ದೇ ಇಲ್ಲಿ. ಆ ಜನರ ಕಳ್ಳುಬಳ್ಳಿಯಿಂದಲೇ ಅದು ಹುಟ್ಟಿದ್ದು. ನಮ್ಮ ಕೆಳಜಾತಿಗಳ ಒಡಲಿಂದಲೇ ಮೊದಲು ಇಂತಹ ವಚನ ಸಂವೇದನೆ ನಿರ್ಮಾಣವಾಯಿತು. ಆಮೇಲೆ ಬಸವಣ್ಣ ಮುಂದೆ ಬಂದು ನಿಂತ. ಜನಪದ ಸಮುದಾಯದ ಸಾರ ಮತ್ತು ಬೇರು ಇಡೀ ವಚನ ಪರಂಪರೆಯನ್ನು ನಿರ್ಮಿಸಿವೆ ಎಂಬುದನ್ನು ಇವತ್ತು ನಾವೆಲ್ಲ ಒಪ್ಪಿಕೊಳ್ಳಬೇಕಾಗಿದೆ. ಅವರ ಭಾಷೆ, ಅವರ ನಡೆ, ಅವರದೇ ಮಾತು ಮತ್ತು ಕ್ರಿಯೆ ಇಲ್ಲಿ ಗಾಢವಾಗಿ ತುಂಬಿಕೊಂಡಿವೆ.

* *ಅಂದರೆ ಬೌದ್ಧಿಕ ಅಂತರಮಾರ್ಗ ಮತ್ತು ದೇಶಿಯ ನಡುವೆ ಇರಲಿಲ್ಲ ಅಂತಾಯ್ತು?*

- ಹೌದು. ಯಾವ ರೀತಿಯಲ್ಲೂ ಈ ದೇಶೀ ಪರಂಪರೆಗೆ ಬೌದ್ಧಿಕ ಬಡತನ ಇರಲಿಲ್ಲ. ನಾವೆಲ್ಲ ಈ ಜನಪದ ಸಮಾಜವನ್ನು ದಡ್ಡರು ಮೂರ್ಖರು ಕೊಳಕರು ಅವಿದ್ಯಾವಂತರು ಎಂದು ಈಗಲೂ ವಿಂಗಡಿಸುವಂತೆ ಆ ಕಾಲದಲ್ಲೂ ಇನ್ನೂ ಭಯಂಕರವಾಗಿ ಉಪೇಕ್ಷೆಗೊಳಪಡಿಸಿದ್ದರು. ಆದರೆ ವಾಸ್ತವದಲ್ಲಿ ಮಾರ್ಗ ಪರಂಪರೆಗಿಂತ ಅವರು ಯಾವ ಹಂತದಲ್ಲೂ ಕಡಿಮೆ ಇರಲಿಲ್ಲ. ಒಂದು ರೀತಿಯಲ್ಲಿ ಇಡೀ ಜನಪದರು ತಮ್ಮ ಮೇಲೆ ಆಗುತ್ತಿದ್ದ ಆಕ್ರಮಣ ಅನ್ಯಾಯಗಳ ವಿರುದ್ಧ ಪ್ರತಿಭಟಿಸಲು ಬಹಳ ಮೌನವಾಗಿ ಆಲೋಚಿಸಿದ್ದಾರೆ. ಅನೇಕ ಕಲೆಗಳ ಮೂಲಕ ಸೂಕ್ಷ್ಮವಾಗಿ ಧ್ವನಿಸಿದ್ದಾರೆ. ಅಲ್ಲದೆ ಅವರು ಬಹುಮುಖ್ಯವಾಗಿ ಸ್ವಾತಂತ್ರ್ಯದ ಬಗ್ಗೆ ತಮ್ಮ ಪರಂಪರೆಯ ಒಳಗೆ ವಿವೇಚಿಸಿದ್ದಾರೆ. ಇವೆರಡರ ನಡುವೆ ಅಂತರ ಏರ್ಪಡಿಸಿದವರಿಗೆ ಬೌದ್ಧಿಕ ದಾರಿದ್ರ್ಯ ಇತ್ತೇ ವಿನಃ ದೇಶೀ ಪ್ರಜ್ಞೆಗೆ ಅಂತಹ ಮಿತಿ ಇರಲಿಲ್ಲ. ಅದು ಮಾನವೀಯತೆಯ ಮೂಲಕವೇ ಕಾಯಕವನ್ನು ಅಪ್ಪಿಕೊಂಡಂತಹ ಸಮಾಜವಾಗಿತ್ತು. ಅವರು ಕ್ರಿಯೆ ಮತ್ತು ಸ್ವಾತಂತ್ರ್ಯ ಬಗ್ಗೆ ಮಾಡಿದ ಹುಡುಕಾಟ ಹರಳುಗಟ್ಟಿ ಕಾಯಕವಾಗಿ ವೈದಿಕತೆಯ ಸಂಕೋಲೆಗಳಿಂದ ಬಿಡುಗಡೆ ಪಡೆದು ಹನ್ನೆರಡನೇ ಶತಮಾನದಲ್ಲಿ ಕ್ರಾಂತಿಯನ್ನೇ ಮಾಡಿದರು. ದೀರ್ಘಕಾಲದ ಆಳದ ತರ್ಕ ವಿವೇಚನೆಯ ಈ ದೇಶಿಪ್ರಜ್ಞೆಯೇ ವಚನ ಚಳವಳಿಯಾಗಿ ಏರ್ಪಟ್ಟಿತು. ಆದ್ದರಿಂದಲೇ ನಮ್ಮಲ್ಲಿ ಹೊಸದೊಂದು ಚಿಂತನೆ ಬೆಳೆಯಲು ಸಾಧ್ಯವಾಯ್ತು.

* *ಪ್ರಾಚೀನ ಕನ್ನಡ ಕಾವ್ಯವನ್ನೆಲ್ಲ ಬಲ್ಲ ನಿಮಗೆ ಈಗ ಆ ಎಲ್ಲ ಬರಹಗಳ ಬಗ್ಗೆ ಏನನಿಸುತ್ತದೆ?*

- ಆ ಕಾಲದ ಅಪೇಕ್ಷೆಗಳೇ ಒಂಥರಾ ಇದ್ವು. ದೇವರು, ರಾಜರು ಹಾಗೂ ದರ್ಪಿಷ್ಠರ ಪರವಾಗಿಯೇ ಆ ಸಾಹಿತ್ಯ ನಿರ್ಮಾಣವಾಯ್ತು, ಜನಸಾಮಾನ್ಯ ಆಗ ಮುಖ್ಯ ಆಗಿರಲಿಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ದಲಿತ ವಿಸ್ಮೃತಿಯೇ ಶಿಷ್ಟ ಕಾವ್ಯ. ಸಾಹಿತ್ಯದಲ್ಲೂ ಮೇಲುಕೀಳು ಇತ್ತು. ಸಾಂಗತ್ಯ ತ್ರಿಪದಿಗಳಲ್ಲಿ ಬರೆಯೋದಾಗಲಿ, ಇಲ್ಲವೆ ಲಾವಣಿ ಕಟ್ಟಿ ಜನಪದರು ಹಾಡುವುದಾಗಲಿ ಪಂಡಿತರ ದೃಷ್ಟಿಯಲ್ಲಿ ಕೀಳಾಗಿತ್ತು. ಇಂತಾದ್ದನ್ನು ನಮ್ಮ ಅನೇಕ ಕಾವ್ಯಗಳ ಉದ್ದಕ್ಕೂ ಅಲ್ಲಲ್ಲಿ ಕಾಣಬಹುದು. ಈ ನಮ್ಮ ಪ್ರಾಚೀನ ಸಾಹಿತ್ಯವನ್ನೆಲ್ಲ ನಮ್ಮ ಹೊಸ ಪೀಳಿಗೆಯ ನಿಮ್ಮಂತವರು ಮರುಪರಿಶೀಲನೆಗೆ ಒಳಪಡಿಸಲೇಬೇಕಾಗಿದೆ.

* *ಡಿ.ಆರ್. ನಾಗರಾಜ್ ಅವರು ಇತ್ತೀಚೆಗೆ 'ವಿಸ್ಮೃತಿ' ಅನ್ನೋ ಒಂದು ವಾದವನ್ನು ಮುಂದಿಟ್ಟಿದ್ದಾರಲ್ಲಾ?*

- ಅವರ ಈ ವಿಸ್ಮೃತಿಯ ಬಗ್ಗೆ ನನಗೆ ಯಾಕೋ ಸಮ್ಮತಿ ಇಲ್ಲ. ಇಂತಹ ಜಿಜ್ಞಾಸೆಗಳೆಲ್ಲ ಅತಿ ಜಾಣರ ಅಕೆಡಮಿಕ್ ಪ್ರತಿಭೆಯಾಗ್ತದೆಯೇ ಹೊರತು ಒಂದು ಪರಂಪರೆಯ ನಾಡಿಬಡಿತಗಳನ್ನು ತಪ್ಪಾಗಿಯೂ ಭಾವಿಸುವಂತೆ ಮಾಡುತ್ತದೆ. ನಮ್ಮ ಚರಿತ್ರೆಯಲ್ಲಿ ಬಹಳ ಮೌನವಾದ ಒಂದು ನಿರಂತರ ಹುಡುಕಾಟ ಹೋರಾಟ ತತ್ವ ಚಿಂತನೆ ವೈದಿಕ ನೆಲೆಯನ್ನು ಧಿಕ್ಕರಿಸಲು ನಡೆದುಕೊಂಡೇ ಬಂದಿದೆ ಎಂದು ನಾವು ಅನೇಕ ಅಂಶಗಳನ್ನು ಗಮನಿಸಿ ತಿಳಿಯಬೇಕಾಗಿದೆ. ಒಂದು ನಿರಂತರ ಘರ್ಷಣೆ ಇದ್ದಲ್ಲಿ 'ವಿಸ್ಮೃತಿ' ಹೇಗೆತಾನೆ ಸಾಧ್ಯವಾಗ್ತದೆ?

* *ವಚನ ಸಾಹಿತ್ಯಕ್ಕೆ ಏರ್ಪಟ್ಟಿದ್ದ ಮತೀಯ ಚೌಕಟ್ಟನ್ನು ದಾಟಿ ನೋಡುವ ಪ್ರವೃತ್ತಿ ನಿಮಗೆ ಹೇಗೆ ಸಾಧ್ಯವಾಯ್ತು?*


- ನಿಜ. ಆ ಕಾಲದಲ್ಲಿ ಇಡೀ ವಚನ ಸಾಹಿತ್ಯದ ಸುತ್ತ ಮತೀಯತೆ ತುಂಬಿತ್ತು. ಅಂತ ವಾತಾವರಣದ ನಡುವೆಯೇ ನಾನು ಬೆಳೆದೆ. ನಾನು ಬೆಳೆಯುತ್ತಾ ಬಂದಂತೆ ಬಸವಣ್ಣ ಹಾಗು ಇತ್ಯಾದಿ ಶರಣರ ವಚನಗಳು ನನ್ನನ್ನು ಕಾಡತೊಡಗಿದವು. ನನ್ನ ಮನಸ್ಸಿನ ಒಳಗೆ ಈ ಎಲ್ಲ ವಚನಗಳ ಅರ್ಥ ಬೇರೆಯೇ ಇದೆ ಅಂತಾ ಅನಿಸ್ತಿತ್ತು. ಅನೇಕ ವಚನಗಳ ಮಧ್ಯೆ ಎಷ್ಟೆಷ್ಟೋ ಖೋಟಾ ವಚನಗಳು ತುಂಬಿಕೊಂಡಿವೆ ಅನಿಸ್ತಾ ಬೇಸರ ಸಿಟ್ಟು ಆಗ್ತಿತ್ತು. ಮೂಲಭೂತವಾದಿಗಳು ತಪ್ಪಾಗಿ ವ್ಯಾಖ್ಯಾನಿಸುತ್ತಿದ್ದನ್ನು ಕಂಡ ನನ್ನ ಮನಸ್ಸು ವಿಷಾದಿಸ್ತಿತ್ತು. ಒಟ್ಟಾರೆ ವಚನ ಸಾಹಿತ್ಯ ನಿರ್ಮಾಣವಾದ ಉದ್ದೇಶಕ್ಕೂ ಈಗ ಅದು ಇದ್ದ ಸ್ಥಿತಿಗೂ ನಮ್ಮ ಸಮಾಜಕ್ಕೂ ಸಂಸ್ಕೃತಿಗೂ ಉಂಟಾಗುತ್ತಿದ್ದ ಗೊಂದಲಗಳಿಂದ ನನ್ನನ್ನು ನಾನೇ ಬಿಡಿಸಿಕೊಳ್ಳಬೇಕಾಯ್ತು. ಹಾಗಾಗಿಯೇ ವಚನಗಳನ್ನು ಮತೀಯ ಧೋರಣೆಯಿಂದ ನೋಡುವುದು ತಪ್ಪಿತು. ಜೊತೆಗೆ ಹಿಂದಿನಿಂದಲೂ ನಾನು ಒಂದು ರೀತಿಯಲ್ಲಿ ಅವಧೂತರ ಪಂಥಕ್ಕೆ ಸೇರಿದವನು. ಯಾರಿಗೂ ನಾನು ಹೆದರುವುದಿಲ್ಲ. ಒಂದು ಸತ್ಯಕ್ಕೆ ಒಂದು ಅರ್ಥಪೂರ್ಣವಾದ ಪರಂಪರೆಗೆ ನಾನು ಬದ್ಧನೇ ಹೊರತು ಧರ್ಮದ ಜೈಲಿನಲ್ಲಿ ಕೊಳೆಯುವ ಮನುಷ್ಯನಲ್ಲ. ಇವತ್ತಿಗೂ ಕೂಡ ನಮ್ಮ ಜನ ಧರ್ಮಗ್ರಂಥಗಳಿಂದ ಬಿಡುಗಡೆ ಪಡೆಯಬೇಕಾಗಿದೆ. ಶರಣರ ನಿಜವಾದ ಕನಸುಗಳನ್ನು ಅವುಗಳ ರೂಪ ವಿರೂಪವಾಗದಂತೆ ಜನರಿಗೆ ತಿಳಿಸುವುದೇ ನನ್ನ ಆಸೆಯಾಗಿದ್ದರಿಂದ ನಾನು ಈ ರೀತಿ ಅಧ್ಯಯನ ಮಾಡಲು ಸಾಧ್ಯವಾಯ್ತು ಅಂತಾ ಅನಿಸ್ತದೆ.

* *ಬಸವಣ್ಣನನ್ನು ಜಾತಿ ಮತ್ತು ಮಠಗಳಲ್ಲಿ ಬಂಧಿಸಿದ್ದರ ಬಗ್ಗೆ ಹೇಳಿ?*

- ಮಹಾತ್ಮರು ಕಂಡ ಕನಸುಗಳನ್ನು ವಿರೂಪಗೊಳಿಸುವುದು ಯಾವತ್ತಿನಿಂದಲೂ ನಡೆದುಬಂದಿದೆ. ನನಗಂತು ಮಠಮಾನ್ಯಗಳ ನಡವಳಿಕೆ ಕಂಡು ಸಾಕಾಗಿ ಹೋಗಿದೆ. ಒಂದು ದೊಡ್ಡ ಉದ್ದೇಶ ಒಂದು ಚಿಕ್ಕ ಆಸೆಯಾಗಿ ಪರಿವರ್ತನೆಗೊಂಡಾಗ ನಾವೆಲ್ಲ ಕೈಕಟ್ಟಿ ಕೂತುಕೊಳ್ಳುವುದರಲ್ಲಿ ಅರ್ಥವೇ ಇಲ್ಲ. ಬಸವಣ್ಣನ ತತ್ವ ಜಾತಿ ಆದದ್ದು ಸಾಮಾನ್ಯ ದುರಂತವೇನೂ ಅಲ್ಲ. ಅಂದರೆ ಈ ದೇಶದಲ್ಲಿ ಮನುಷ್ಯ ವಿರೋಧಿ ಶಕ್ತಿಗಳ ಬಗ್ಗೆ ನೆನೆದುಕೊಂಡರೆ ನಮ್ಮ ಸುತ್ತ ಎಂತಹ ನರಕ ಸುತ್ತುವರಿದಿದೆ ಎಂದು ಊಹಿಸಲಿಕ್ಕೂ ನನ್ನಿಂದಾಗದು. ಆದರಿಂದಲೇ ಏನೋ ನನ್ನ ಎಲ್ಲ ಸಂಶೋಧನೆಗಳಲ್ಲೂ ಆ ಮತೀಯತೆ ಹಾಗು ಜಾತಿಯ ಕೋಟೆಗಳನ್ನು ನಾಶಮಾಡುವುದೇ ಮುಖ್ಯವಾಗಿಬಿಡ್ತು.

* *ಕಾಯಕದ ಮೂಲಕ ಅನುಭವಗೊಳ್ಳುತ್ತಾ ವಚನಕಾರರು ಮಾನವೀಯತೆಯನ್ನೇ ಮುಖ್ಯವಾಗಿ ಪ್ರತಿಪಾದಿಸಿದರಲ್ಲವೆ?*

- ಹೌದು. ನಿಮ್ಮ ಇಂತಹ ತಿಳಿವಳಿಕೆ ಹೊಸಪೀಳಿಗೆಯ ಲೇಖಕರಲ್ಲಿ ಇನ್ನಷ್ಟು ಹೆಚ್ಚಬೇಕಾಗಿದೆ. ಅನೇಕ ಹೊಸ ಸಾಧ್ಯತೆಗಳಿಂದ ಆ ಕಾಲವನ್ನೂ ಅದರ ಸಮಾಜ ಹಾಗೂ ಸಾಹಿತ್ಯವನ್ನು ಮತ್ತೆ ಮತ್ತೆ ವಿಭಿನ್ನ ದೃಷ್ಟಿಗಳಿಂದ ನೋಡಲು ಸಾಧ್ಯವಿದೆ. ಇವತ್ತಿನ ಬಂಡಾಯ ಇಲ್ಲವೇ ದಲಿತ ಸಾಹಿತ್ಯದ ಮೊದಲ ಬೇರುಗಳ ದನಿಗಳು ಹಾಗು ಅವರ ಕನಸುಗಳು ಅನುಭಾವದ ಸ್ವಭಾವದಲ್ಲಿ ಆದರೂ ಅವರದೇ ಒಳದನಿಯಲ್ಲಿ ಮೊದಲು ಕಾಣಿಸಿಕೊಂಡದ್ದು ಅಲ್ಲೇ. ಆದ್ದರಿಂದಲೇ ವಚನಸಾಹಿತ್ಯ ಒಂದು ರೀತಿಯಲ್ಲಿ ಜಾತ್ಯತೀತವಾಗಿತ್ತು.



ಸಂದರ್ಶನ

ಸಂದರ್ಶನಕಾರರು:
ಮೊಗಳ್ಳಿ ಗಣೇಶ್

* *ದಲಿತ ಬಂಡಾಯ ಸಾಹಿತ್ಯದ ಬಗ್ಗೆ ನಿಮಗೆ ಏನನಿಸುತ್ತದೆ?*

- ಈ ಸಾಹಿತ್ಯದಲ್ಲಿ ಸಾಮಾಜಿಕ ಬದ್ಧತೆಯೆ ದೊಡ್ಡದು. ದಲಿತ ಬಂಡಾಯ ಸಾಹಿತ್ಯದ ಬಗ್ಗೆ ಆ ಕಾರಣವಾಗಿ ನನಗೆ ಗೌರವ ಇದೆ. ಅದು ಕಲೆಯೋ ಅಲ್ಲವೋ ಅದು ಮುಖ್ಯ ಅಲ್ಲ. ಈವರೆಗೆ ನಮ್ಮ ಈ ವೈದಿಕ ದೇಶದಲ್ಲಿ ಹೊಸ ದನಿಗಳು ಏನನ್ನೋ ಹೇಳಿಕೊಳ್ಳುವಾಗ ನಾವು ತಾಳ್ಮೆಯಿಂದ ಅವಲೋಕಿಸಬೇಕಾಗಿರ್ತದೆ. ನವ್ಯ ಸಾಹಿತಿಗಳು ಹೇಳೋ ರೀತಿ ಒಂದು ಗಂಭೀರವಾದ ಬಂಧ, ರಚನೆ ಶೈಲಿ ಇವೆಲ್ಲ ದಲಿತರ ಅನುಭವಗಳನ್ನು ಹೇಳಿಕೊಳ್ಳುವ ಸಂದರ್ಭದಲ್ಲಿ ಎಷ್ಟರ ಮಟ್ಟಿಗೆ ಅವು ಆಗತ್ಯ ಎಂಬುದನ್ನು ನಾವು ನೋಡಬೇಕಾ

ಎತ್ತದೆ. ಯಾಕೋ ಏನೋ ದಲಿತಬಂಡಾಯ ಸಾಹಿತ್ಯವು ನನ್ನನ್ನು ಮುಟ್ಟುವ ಹಾಗೆ ನನ್ನೊಳಕ್ಕೆ ಇಳಿಯುವ ಹಾಗೆ ಆ ವ್ಯ ಸಾಹಿತ್ಯ ಬರೋಲ್ಲರಿ. ಆ ನವ್ಯ ಕವಿಗಳ ಪದ್ಯಗಳು ನನ್ನ ಟ್ಟಿಗೆ ಸತ್ಯ ಅಲ್ಲ. ಅಡಿಗರನ್ನ ದೊಡ್ಡ ಕವಿ ಅಂತಾ ಹೇಳೋದಾದ್ರೆ ಸಿದ್ದಲಿಂಗಯ್ಯನನ್ನೂ ಅಷ್ಟೇ ಎತ್ತರದ ಕವಿ ಅಂತಾ ಹೇಳ್ಬೇಕಾಗ್ತದೆ. ನವ್ಯಕಾವ್ಯಕ್ಕೆ ಜನರನ್ನು ಮರುಳು ಗೊಳಿಸಿ ದಾರಿತಪ್ಪಿಸುವ ಗುಣವಂತೂ ಇದ್ದೇ ಇದೆ. ಆದರೆ ನವ್ಯದ ಒಳಗಿದ್ದೇ ಹೊರಗಿನವರಂತೆ ಬರೆದ ನಮ್ಮ ಲಂಕೇಶ್‌ರ ಬರಹಗಳನ್ನು ನಾವು ಹಾಗೆ ನೋಡಲು ಬರುವುದಿಲ್ಲ. ಲಂಕೇಶ್‌ರ ಪ್ರತಿಭೆಯ ಮುಂದೆ ಈ ದೊಡ್ಡ ಖ್ಯಾತಿಯ ಅನೇಕರು ನನಗೆ ಬಹಳ ಎಳಸಾಗಿ, ಅವಕಾಶವಾದಿ ಗಳಾಗಿ ಮತ್ತೆ ತಪ್ಪಿತಸ್ಥರಂತೆ ಕಾಣ್ತಾರೆ. ಆದ್ರಿಂದ್ಲೆ ಒಂದು ಕಡೆ ಕುವೆಂಪು, ಇನ್ನೊಂದು ಕಡೆ ಕಂಬಾರ ಹಾಗೇನೇ ಲಂಕೇಶ್ ರಂಥವರು ಇರ್ಲಿಲ್ಲಾ ಅಂದ್ರೆ, ನಮ್ಮ ಸಾಹಿತ್ಯ ಇನ್ನೂ ಬಡವಾಗಿಬಿಡ್ತಿತ್ತು. ನಮ್ಮ ಸಂಸ್ಕೃತಿಗೆ ಸಮೀಪವಲ್ಲದ ಅವರ ನೀತಿ ರೀತಿ ನಂಬಿಕೆ ಹಾಗೇ ಅವರ ಪದ್ಯಗಳು ಚರಿತ್ರೆಯಲ್ಲಿ ನಿಲ್ಲಲಾರವು.

ಮತ್ತೆ ಇನ್ನೊಂದು ಮಾತನ್ನು ಹೇಳ್ತೇನೆ..... ದಲಿತರು ಬರೆದದ್ದೇ ದಲಿತ ಸಾಹಿತ್ಯ ಅಂತಾ ತೀರ್ಮಾನವಾಗಬೇಕು. ಇಲ್ಲದಿದ್ದರೆ ನಾವೂ ಕೂಡ ಜಾತಿಯ ಅವಮಾನ ಅನ್ಯಾಯದ ಬಗ್ಗೆ ಬರೆಯುವಷ್ಟು ಬುದ್ಧಿ ಇದೆ ಎಂದು ಹೇಳಿ, ಈ ಬ್ರಾಹ್ಮಣರು ನಾಳೆದಿನ ದಲಿತ ಸಾಹಿತ್ಯದ ಮೇಧಾವಿ ಲೇಖಕ ರಿವನೇ ಎಂದು ಮೆರೀತಾರೆ. ನಮ್ಮ ಸಾಹಿತ್ಯದ ಗತಿ ಹೀಗೇ ಮುಂದುವರಿದರೆ ಈ ಜನ ಇನ್ನು ಮುಂದೆ ಕಾವ್ಯ, ಕತೆ, ಕಾದಂಬರಿ, ವಿಮರ್ಶೆ, ನಾಟಕ ಇವುಗಳನ್ನೆಲ್ಲ ಗ್ಯಾಟ್ ಒಪ್ಪಂದಕ್ಕೆ ಒಳಪಡಿಸಲೂಬಹುದು. ಇದಕ್ಕಿಂತ ಕಠಿಣವಾಗಿ ನಾನ್ನೇನನ್ನೂ ಹೇಳಲಾರೆ. ಕ್ಷಮಿಸಿ.

* *ಹಾಗಲ್ಲಾ..... ಯಾವುದೇ ಒಂದು ಸಾಹಿತ್ಯ ಪಂಥ ಅದು ಎಷ್ಟೋ ಅಸಮರ್ಥ ಅಂತಾ ಅನ್ನಿಸಿದ್ರೂ ಅದ್ರೊಳಗೂ ಏನೋ ಒಂದು ಜೀವದ ಉಸಿರಾಟ ಇರ್ತದೆ ಅಲ್ವಾ?*

– ನೀವು ಹೇಳೋದು ಒಂದು ರೀತಿ ನಿಜ ಅನ್ನಿಸಿದ್ರೂ, ಆ ಸಾಹಿತ್ಯದ ಕಾಳಜಿ ಮತ್ತು ರೀತಿಯನ್ನು ನೋಡಿದರೆ ಅದು ಎಷ್ಟರಮಟ್ಟಿಗೆ ಜನಪರವಾಗಿ ಜನಸಾಮಾನ್ಯರ ಬಳಿ ಇತ್ತು ಎಂಬುದನ್ನು ನೋಡಿದಾಗ ನವ್ಯ ಸಾಹಿತ್ಯ ನನಗೆ ಆಪ್ತ ಅನಿಸೋದಿಲ್ಲ. ನನಗಂತೂ ಜನಸಾಮಾನ್ಯರ ಮುಟ್ಟುವಂತೆಯೇ ನಮ್ಮ ಸಾಹಿತ್ಯ ಇರಬೇಕು.

* *ಸಂಶೋಧನೆಯಿಂದ ಪದ್ಯ ಬರೆವ ಕಾಯಕಕ್ಕೆ ಹೇಗೆ ಬಂದಿರಿ?*

– ಬಹಳ ಚಿಕ್ಕ ವಯಸ್ಸಿನಿಂದಲೂ ನಾನು ಒಂಥರಾ ಭಾವುಕವಾಗೇ ಇದ್ದೆ. ಆಗಾಗ ಏನೋ ಪದ್ಯಗಿದ್ಯ ಅಂತಾ ಬರೀತಾನೇ ಇದ್ದೆ. ಕಾಲೇಜು ಓದೋ ಕಾಲಕ್ಕೆ ಬೇಂದ್ರೆಯವರ ಸಹವಾಸ ಒಮ್ಮೆ ಆಯ್ತು. ಸಂಶೋಧನೆ ಬಿಟ್ಟು ಕಾವ್ಯಕ್ಕೆ ಬಾ ಅಂದ್ರು. ನಾನು ಆ ಕಾಲದಲ್ಲಿ ವಚನಸಾಹಿತ್ಯದ ಸಾಗರದಲ್ಲಿ ಮುಳುಗಿಹೋಗಿದ್ದೆ. ಅದರ ಸೆಳೆತದಿಂದ ಬಿಡಿಸಿಕೊಳ್ಳಲು ಆಗಲೇ ಇಲ್ಲ. ದೆವ್ವದಂತೆ ನಿರಂತರವಾಗಿ ಆ ಕ್ಷೇತ್ರದಲ್ಲಿ ನಾನು ಹಗಲುರಾತ್ರಿ ಕೆಲಸಮಾಡಿದೆ. ಕುಂತರೆ ನಿಂತರೆ ಯಾವಾಗಲೂ ನನ್ನೊಳಗೆ ಸಂಶೋಧನೆಗೆ ಸಂಬಂಧಿಸಿದ ಬರಹಗಳ ವಿಚಾರವೇ ಗಾಣದಂತೆ ಅರೆಯುತ್ತಿತ್ತು. ನಿದ್ದೆಯಲ್ಲಿ ಕನಸಿನಲ್ಲಿ ಅಂತಹ ಅನೇಕ ವಿಚಾರಗಳು ನನ್ನನ್ನು ವಿಶ್ರಾಂತಿಯಿಂದ ಒಂದಿಷ್ಟು ಹೊತ್ತು ಸುಧಾರಿಸಿಕೊಳ್ಳಲು ಕೂಡ ಬಿಡ್ತಿರಲಿಲ್ಲ. ನನಗೆ ಯಾವ ಖ್ಯಾತಿಯ ಪ್ರಶಸ್ತಿಯ ಹುಚ್ಚು ಕೂಡ ಇರ್ಲಿಲ್ಲ. ನನ್ನ ಹೆಂಡತಿ ಕೂಡ ವಚನ ಸಾಹಿತ್ಯದ ತಿರುಳನ್ನು ಸರಿಯಾದ ಅರ್ಥದಲ್ಲಿ ಸಮಾಜಕ್ಕೆ ತಿಳಿಸಬೇಕು ಕಣ್ರೀ ಇದು ನನ್ನಾಸೆ. ನೀವು ಇದನ್ನು ಮಾಡಲೇಬೇಕು ಅಂತಾ ಕೇಳಿಕೊಂಡಳು. ಹಾಗಾಗಿ ಈ ಕಾವ್ಯದ ಉತ್ಸಾಹ ಅದರ ಸೆಳೆತ ಅದು ಕೊಡಬಹುದಾದ ಸುಖದುಃಖವನ್ನೆಲ್ಲ ಮರೆತು ಸಂಶೋಧನೆ ಯಲ್ಲಿ ಸತತ ನಲವತ್ತೈದು ವರ್ಷಕಾಲ ಕೆಲಸ ಮಾಡಿದೆ. ಇದ್ದಕ್ಕಿದ್ದಂತೆ ಒಂದು ದಿನ ನನ್ನ ಕೈಲಿದ್ದ ಎಲ್ಲ ಹಳೆಯ ಕಾವ್ಯಗಳೂ ಮುಗಿದವು ಅನಿಸಿತು. ಇನ್ನೊಂದರ್ಥದಲ್ಲಿ ಅವುಗಳಿಂದ ನಾನು ಬಿಡಿಸಿಕೊಳ್ಳಲು ಬೇರೆ ಮಾಧ್ಯಮ ಬೇಕು ಅನಿಸಿತು. ಆದ್ದರಿಂದ ಪದ್ಯ ಬರೆಯಲು ಕುಳಿತೆ. ನನಗೇ ವಿಸ್ಮಯ ಅನಿಸುವಂತೆ ಕಾವ್ಯ ಎನ್ನುವ ಕನ್ನೆ ಮುದುಕನಾದ ನನ್ನನ್ನು ಆಲಂಗಿಸಿಕೊಂಡಳು. ಈಗ ಅವಳ ತೆಕ್ಕೆಯಲ್ಲಿ ನಾನು ಬಂಧಿಯಾಗಿದ್ದೀನಿ. ದಿನವೂ ಕವಿತೆ ಬರೆಯುತ್ತಿದ್ದೇನೆ. ನನಗೆ ನನ್ನ ಸಂಶೋಧನೆಯ ಕೆಲಸಗಳು ಈ ಮಟ್ಟಿನ ಸುಖ ನೆಮ್ಮದಿ ಸಂತೃಪ್ತಿಗಳನ್ನು ನೀಡಿರಲಿಲ್ಲ. ನಿಜವಾಗಲೂ ಈ ಕೆಲಸವೇ ನನಗೆ ಹೆಚ್ಚು ಸಮಾಧಾನ ಕೊಟ್ಟಿದೆ. ಕಾವ್ಯದ ಬೆರಗಿನಲ್ಲಿ ಏನೇನೋ ಬರೆಯುತ್ತಿರುವೆನು. ನನ್ನ ಪದ್ಯಗಳನ್ನು ಓದುಗರು, ವಿಮರ್ಶಕರು ಹೇಗೆ ಸ್ವೀಕರಿಸುತ್ತಾರೋ ಎಂಬ ಆತಂಕ ಕುತೂಹಲ ಇದೆ.

* *ಇವತ್ತಿನ ಸಂಶೋಧನೆಗಳ ಬಗ್ಗೆ ಹೇಳಿ.*

– ಬೇಸರವಾಗ್ತದೆ. ಹಲವರ ಅಭಿಪ್ರಾಯಗಳ ಸಂಗ್ರಹವೇ ಇವತ್ತು ಸಂಶೋಧನಾ ಬರಹಗಳಾಗ್ತಿವೆ. ಹೊಸ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವುದಕ್ಕೂ ಸಂಶೋಧಕರಲ್ಲಿ ದಾರಿದ್ರ್ಯ ಇದೆ.

(ನವೆಂಬರ್ 16, 1994)

ನಿಮ್ಮ ಅಷ್ಟಮಠಗಳನ್ನ ಅನಿಷ್ಟ ಮಠಗಳು ಅನ್ನಬಹುದೇ?

ಉಡುಪಿಯ ಅಷ್ಟಮಠಗಳ ಅನಿಷ್ಟ ಜಗಳವನ್ನ ನೋಡುತ್ತ ಕುತೂಹಲಗೊಂಡಿರುವಾಗಲೇ ಅಲ್ಲಿನ ಅನಾಚಾರಗಳ ಬಗ್ಗೆ ತಿಳಿದು ಆಘಾತಗೊಂಡು, ನಮ್ಮ ಮೆಚ್ಚಿನ ಪೇಜಾವರರನ್ನ ಮಾತನಾಡಿಸಿದರೆ ಹೇಗೆ ಅನ್ನಿಸಿತಲ್ಲಾ, ತಡಮಾಡದೆ ವಿಶ್ವೇಶ್ವರ ತೀರ್ಥರಿಗೆ ಫೋನು ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ..."

"ಹಲೋ ಯಾರು?"

"ಸ್ವಾಮೀಜಿ ಅಡ್ಡಬಿದ್ದೆ, ನಾನು ಯಾಹೂ."

"ಏನು ಹೇಳಿ ಯಾಹು ಅವರೆ."

"ಏನಿಲ್ಲ, ನಿಮ್ಮ ಗೆಳೆಯರೊಬ್ಬರು ಸಿಕ್ಕಿದ್ರು."

"ನನಗೆ ಗೆಳೆಯರು ಅಂತ ಹೇಳಿ ಯಾರೂ ಇಲ್ಲ."

"ಸಾರಿ, ಗೆಳೆಯರಲ್ಲ, ನಿಮ್ಮ ಸಹೋದ್ಯೋಗಿಯಾಗಿದ್ದವರು."

"ನಾನು ಯಾರ ಜೊತೆ ಉದ್ಯೋಗ ಮಾಡಿದ್ದೂ ಇಲ್ಲ."

"ಕ್ಷಮಿಸಿ ಸ್ವಾಮಿ. ಏನು ಹೇಳಬೇಕು ಅಂತ್ಲೆ ಗೊತ್ತಾಯ್ತಾಯಿಲ್ಲ. ಅವರು ನಿಮಗಿಂತಲೂ ಕೆಲವು ವರ್ಷಕ್ಕೆ ಚಿಕ್ಕವರು. ಒಂಬೈನೂರು ವರ್ಷದ ನಿಮ್ಮ ಒಂದು ಮಠಕ್ಕೆ ಸ್ವಾಮೀಜಿಯಾಗಿದ್ರು. ಪೀಠತ್ಯಾಗ ಮಾಡಿ ಮದುವೆಯಾಗಿ ಈಗ ಅಮೆರಿಕದಲ್ಲಿದ್ದಾರೆ."

"ಗೊತ್ತು. ರಘುವಲ್ಲಭ ತೀರ್ಥ. ಅವ ನಿಮಗೆ ಸಿಕ್ಕಿದ್ದನಾ?"

"ಹೌದು ಸ್ವಾಮೀಜಿ. ಬಹಳ ವರ್ಷಗಳ ನಂತರ ಒಬ್ಬ ಅಪ್ಪಟ ಮನುಷ್ಯನನ್ನ ನೋಡಿದಂಗಾಯ್ತು."

"ಅಪ್ಪಟ ಮನುಷ್ಯ ಅಂದರೆ ಏನು?"

"ನೋಡಿ, ಅವರು ಸುಳ್ಳು ಹೇಳಲ್ಲ, ದುರಾಶೆಗಳಿಲ್ಲ, ಪ್ರಚಾರದ ಹುಚ್ಚಿಲ್ಲ, ಆತ್ಮವಂಚನೆಯಿಲ್ಲ, ಹೀಗೆ ಸ್ವಾಮೀಜಿಗಳಾಗಿ ನೀವು ಪಾಲಿಸಬೇಕಾದ ಗುಣಗಳನ್ನ ಅವರು ರೂಢಿಸಿಕೊಂಡವ್ರರೆ ಅನ್ನುಸ್ತು."

"ಅವ ನಿಜಕ್ಕೂ ಹೇಡಿ."

"ಹಾಗಂತಿರಾ?"

"ಮತ್ಯಂತ ಹೇಳುವುದು. ಗೀತೆಯಲ್ಲಿ ಕೃಷ್ಣ ಅರ್ಜುನನಿಗೆ ಏನು ಹೇಳಿದ್ದಾನೆ ಗೊತ್ತುಂಟ?"

"ನಾನು ಗೀತೆ ಓದಿಲ್ಲ."

"ಓದದಿದ್ದರೆ ಕೇಳಬೇಕು. ನಾವು ನಿಮ್ಮಂತವರಿಗಾಗಿಯೇ ಬನ್ನಂಜೆ ಗೋವಿಂದಾಚಾರ್ಯರನ್ನ ಬಿಟ್ಟಿದ್ದೇವೆ."

"ದೇವರಿಗೆ ಬಸವನ್ನ ಬಿಟ್ಟಂಗೆ ಅನ್ನಿ."

"ಹಾಗಲ್ಲ, ದೇವರ ಬಳಿ ಕರೆದೊಯ್ಯುವ ದೇವಭಾಷಾ ಪಂಡಿತರನ್ನ ಬಿಟ್ಟಿದ್ದೇವೆ. ಗೀತೆಯಲ್ಲಿ ಕೃಷ್ಣ ಸ್ವಧರ್ಮ ಪಾಲನೆಯಲ್ಲಿ ಪ್ರಾಣ ತ್ಯಜಿಸುವುದು ಶ್ರೇಷ್ಠ. ಸ್ವಧರ್ಮ ಉಲ್ಲಂಘಿಸಿದರೆ ಪಾಪಕ್ಕೆ ಗುರಿಯಾಗಬೇಕಾಗ್ತದೆ ಅಂತ ಹೇಳಿದ್ದಾನೆ. ಈ ರಘುವಲ್ಲಭ ತನಗೆ ವಹಿಸಿದ್ದ ಧರ್ಮ ಪೀಠದ ಜವಾಬ್ದಾರಿ ಬಿಟ್ಟು ಓಡಿಹೋದವ."

"ಅವರು ಹೇಳೋ ಪ್ರಕಾರ ಅಷ್ಟಮಠಗಳು ಅನಿಷ್ಟಾಚರಣೆಯಲ್ಲಿ ತೊಡಗಿದ್ದ್ಯೂ ಆ ಕೊಳಕು ಜೀವನಕ್ಕೆ ಬೇಸತ್ತು ಉತ್ತಮ ಮಟ್ಟದ ಸಾಮಾನ್ಯ ಮನುಷ್ಯ ಜೀವನಕ್ಕೆ ಪಾದಾರ್ಪಣೆ ಮಾಡಿದೆ ಅಂತ ಹೇಳ್ತರೆ."

"ಅಷ್ಟಮಠದ ಯತಿಗಳ ಜೀವನ ಕೊಳಕು ಜೀವನ ಅನ್ನುವುದು ಬೇಡ."

"ನಿಮ್ಮ ಬಗ್ಗೆ ಅವರ ತಕರಾರಿಲ್ಲ. ನೀವು ಒಳ್ಳೆಯ ಸನ್ಯಾಸಿಯಂತೆ. ಆದರೆ ಒಳ್ಳೆ ವ್ಯಕ್ತಿಯಲ್ಲ, ನಮ್ಮ ಅನಂತಮೂರ್ತಿ ಹೇಳೋತರ ದ್ವಂದ್ವಮೂರ್ತಿ."

"ದ್ವಂದ್ವಮೂರ್ತಿ ಅಂದರೆ?"

"ಅದಷ್ಟೇ ಅಲ್ಲ ಅವಕಾಶವಾದಿ ಕೂಡ."

"ಹೀಗೆ ವೃಥಾ ಆರೋಪ ಮಾಡುವುದು ಸರಿಯಲ್ಲ."

"ಉದಾಹರಣೆ ಕೊಡ್ಲ?"

"ಕೊಡಿ ನೋಡುವ."

ಥೂತ್ತೇರಿ

▸ ಯಾಹೂ

"ರಾಮಮಂದಿರ ಕೆಡವೋದನ್ನ ತಡಿಯಕ್ಕೋಗಿದ್ದೆ ಅಂದ್ರಿ. ಕೆಡವಿದ ಮೇಲೆ ಅಲ್ಲಿ ರಾಮನ ಸರ, ಉಂಗುರ, ಉಡದಾರ ಸಿಕ್ತು ಅಂತ ಕುಣದಾಡಿದ್ರಿ. ಆ ಎಸ್ಸೆಂ ಕೃಷ್ಣ ಅನ್ನೋ ಸೋಗಲಾಡಿ ಹಿಡಕಂಡು ಕುವೆಂಪು ನಾಡಗೀತೆಗೆ ಮಧ್ವರನ್ನ ಸೇರಿಸಿದ್ರಿ. ಸೇರಿಸಿದ ಕೂಡಲೇ ಕನಕದಾಸನ್ನ ಸೇರಿಸಬೇಕಿತ್ತು ಅಂದ್ರಿ. ಕನಕಗೋಪುರ ಕೆಡವಿ ರಾಜಗೋಪುರ ಕಟ್ಟಿ ಅದೇ ಹೆಸರು ಇಡಕ್ಕೋಗಿದ್ರಿ. ಗಲಾಟೆಯಾದಾಗ ಕನಕ ರಾಜಗೋಪುರ ಅಂತ ಇಡ್ತಿವಿ ಅಂದ್ರಿ. ಕನಕನ ಕಿಂಡಿಯ ನವಗ್ರಹ ಕಿಂಡಿ ಅಂತ ಕರದ್ರಿ. ಪ್ರತಿಭಟಿಸಿದಾಗ ಕನಕ ನವಗ್ರಹ ಕಿಂಡಿ ಅಂದ್ರಿ. ಅವುನ್ಯಾರೋ ಸ್ವಾಮಿ ವಿದೇಶಕ್ಕೆ ಹೋಗಿ ಬಂದ ಅದಕ್ಕೆ ಕೃಷ್ಣನ ಪೂಜೆ ಮಾಡೋದು ಬೇಡ ಅಂದ್ರಿ. ಆತ ಮಾಡೇಮಾಡ್ತಿನಿ ಅಂದಾಗ ಆಯ್ತು ಮಾಡಿ ಆದರೆ ಕೃಷ್ಣನ ವಿಗ್ರಹ ಮುಟ್ಟೋದು ಬೇಡ ಅಂದ್ರಿ. ಈ ತರ ನೀವು ಬೆನ್ನುಮೂಳೆನೆ ಇಲ್ಲದ ಸ್ವಾಮಿ."

"ನಮ್ಮ ಬೆನ್ನಮೂಳೆ ಗಟ್ಟಿಯುಂಟು. ಅದಕ್ಕೆ ನಾವು ಗಂಟೆಗಟ್ಟಲೆ ಕೂತು ಪೂಜೆ ಮಾಡುವುದು. ಉಪವಾಸ ಸತ್ಯಾಗ್ರಹ ಮಾಡುವುದು."

"ಇನ್ನೊಂದು ದೊಡ್ಡ ಆಪಾದನೆ ಇದೆ ನಿಮ್ಮ ಮೇಲೆ."

"ಅದು ಯಂತ ದೊಡ್ಡ ಆಪಾದನೆ?"

"ರಘುವಲ್ಲಭರು ಪೀಠತ್ಯಾಗ ಮಾಡೋದಕ್ಕೆ ಹೊರಟಾಗ ನಿಮ್ಮ ಆಸೆಗಳನ್ನ ಈಡೇರಿಸಿಕೊಂಡು ಸ್ವಾಮಿಯಾಗಿಯೇ ಇರಬಹುದು ಅಂದರಂತೆ."

"ಸನ್ಯಾಸವನ್ನು ತ್ಯಜಿಸಿ ಮಠಕ್ಕೆ ಕೆಟ್ಟ ಹೆಸರು ತರುವುದಕ್ಕಿಂತ ಮಠದಲ್ಲಿ ಇದ್ದುಕೊಂಡು ಭಕ್ತರಿಗೆ ಕಾಣದಂತೆ ತಮ್ಮ ಅಪೇಕ್ಷೆಗಳನ್ನು ಈಡೇರಿಸಿಕೊಂಡು ಜನರ ನಂಬಿಕೆಗೆ ದ್ರೋಹವಾಗದಂತೆ ಇರಬಹುದಲ್ಲವಾ..."


"ಆ ತರ ಸುಮಾರು ಜನ ಸ್ವಾಮಿಗಳು ಉಡುಪಿ ಮಠದಲ್ಲಿದ್ದಾರಂತೆ. ಅವರಿಗೆ ಹಣದ ಮದ, ಜಾತಿ ಮದ, ಅಹಂಕಾರ ಎಲ್ಲಾ ಇದೆಯಂತೆ. ಜನಗಳು ಕಾಲಿಗೆ ಬೀಳೋದರಿಂದ ನಾವು ದೊಡ್ಡವರು ಅನ್ಕೊಂಡಿದ್ದಾರಂತೆ."

"ಸನ್ಯಾಸತ್ವವನ್ನು ಬಿಟ್ಟು ಜಯಂತಿ ಅನ್ನುವ ಹೆಣ್ಣು ಮಗಳನ್ನು ಮದುವೆಯಾಗಿ ಈಗ ಅಮೆರಿಕಾದಲ್ಲಿ ವಾಸ ಮಾಡುವ ರಘುವಲ್ಲಭನ ಮಾತಿಗೆ ನಾವು ಬೆಲೆ ಕೊಡುವುದಿಲ್ಲ."

"ಒಳ್ಳೆಯವರ ಮಾತಿಗೆ ಭಂಡರು ಬೆಲೆ ಕೊಡಲ್ವಂತೆ. ಅದೋಗ್ಲಿ ಸ್ವಾಮೀಜಿ, ನೀವು ಹರಿಜನರ ಕೇರಿಗೆ ಹೋಗಿಬಂದ ಸುದ್ದಿ ಪತ್ರಿಕೆಯಲ್ಲಿ ಬಂದಿದೆಯೋ ಇಲ್ಲವೋ ಅಂತ ಹುಡುಕಿ ಓದೋದಕ್ಕಿಂತ, ಅಷ್ಟಮಠದಲ್ಲಿರೊ ಕೆಲವು ಅನಿಷ್ಟ ಸ್ವಾಮಿಗಳಿಗೆ ವಿದ್ಯೆ, ಬುದ್ಧಿ ಒಳ್ಳೆ ನಡವಳಿಕೆ ಮತ್ತೆ ದುಶ್ಚಟಗಳಿಂದ ದೂರ ಇರೋದನ್ನ ಕಲುಸಬೇಕು ಅಂತ ನಮ್ಮ ನಮ್ರ ವಿನಂತಿ. ಯಾಕಂದ್ರೆ ಹರಿಜನರಿಗೆ ನೀವು ಹೇಳೋ ತಿಳಿವಳಿಕೆ ಯಾವುದೂ ಇಲ್ಲ. ಅವರ ಸಹನೆ, ತಾಳ್ಮೆ, ಎಲ್ಲವನ್ನೂ ಸಹಿಸಿಕೊಂಡು ಇನ್ನು ಹಿಂದೂ ಧರ್ಮದಲ್ಲಿ ಇರೋ ಅಸಾಮಾನ್ಯ ಗುಣದ ಎದುರು ನೀವು ಸಣ್ಣವರು, ತೀರಾ ಸಣ್ಣವರು. ನಿಮ್ಮ ಉಡುಪಿ ಗಲಾಟೆ, ಭೋಜನಕ್ಕಾಗಿ ನಡೆದಿರೊ ಹೊಡೆದಾಟ, ಆದ್ದರಿಂದ ಆ ಮಠಗಳನ್ನ ಅಷ್ಟಮಠಗಳು ಅನ್ನೋದಕ್ಕಿಂತ ಅನಿಷ್ಟ ಮಠಗಳು ಅನ್ನಬಹುದೇ?"

"ನೀವು ಇನ್ನೆಂದು ಫೋನು ಮಾಡುವುದು ಬೇಡ."


ಥೂತ್ತೇರಿ!!!



ಇಸ್ರೋ ಕರ್ಮಕಾಂಡ

ಈ ಪ್ರಕರಣದ ತನಿಖೆ ಕೈಗೊಂಡಿರುವ ಸಿಎಜಿ ಕಳೆದ ವರ್ಷ ಅಂದಾಜು ಮಾಡಿದಂತೆ ಭಾರೀ ಬೇಡಿಕೆಯಲ್ಲಿರುವ ಈ ತಂತ್ರಜ್ಞಾನ ಗುತ್ತಿಗೆಯಿಂದ ಸಾರ್ವಜನಿಕ ಬೊಕ್ಕಸಕ್ಕೆ ಸುಮಾರು 2 ಲಕ್ಷ ಕೋಟಿಗಳ ನಷ್ಟವುಂಟಾಗಿದೆ. ಹಾಗಾದರೆ ಮೋಸದ ಪ್ರಮಾಣ ಎಷ್ಟು? "ದೇಶೋದ್ಧಾರಕ" ವಿಜ್ಞಾನಿಗಳಿಂದ ಇಂಥ ಘನಂದಾರಿ ಮೋಸ ನಡೆಯುತ್ತದೆಂದರೆ ನಂಬುವುದು ಕಷ್ಟ. ಆದರೇನು ಮಾಡುವುದು ಸತ್ಯ ಯಾವಾಗಲೂ ಕಹಿಯಾಗಿರುತ್ತೆ. ಇತ್ತೀಚಿನ ದಿನಗಳಲ್ಲಿ ಪದೇಪದೇ ಇಂಥ ಕಹಿ ಉಣ್ಣಬೇಕಾದ ದೌರ್ಭಾಗ್ಯ ನಮ್ಮದು.

• ದೊಡ್ಡಿಪಾಳ್ಯ ನರಸಿಂಹಮೂರ್ತಿ




ಇತ್ತೀಚೆಗೆ ಪ್ರಧಾನ ಮಂತ್ರಿ ಕಚೇರಿಗೆ ಒಂದು ಪತ್ರ ರವಾನೆಯಾಯಿತು. ಅದು ಸಾಮಾನ್ಯ ಪತ್ರವಲ್ಲ, ಅದು ಪ್ರಧಾನಿಯವರು ಕ್ಷಮಾಪಣೆ ಕೋರಬೇಕೆಂದು ಆಗ್ರಹಿಸಿ ಬರೆದ ಪತ್ರವಾಗಿತ್ತು, ಎಲ್ಲಾ ಪ್ರಮುಖ ದಿನಪತ್ರಿಕೆಗಳು, ಟಿವಿ ಚಾನೆಲ್‌ಗಳು ಈ ಸುದ್ದಿಯನ್ನು ತಪ್ಪದೆ ಪ್ರಕಟಿಸಿದವು. ಈ ಪತ್ರ ಮಾಮೂಲಿ ರಾಜಕೀಯ ಪಕ್ಷಗಳ ಕೆಸರೆರಚಾಟದ ಭಾಗವಾಗಿದ್ದಿದ್ದರೆ ಅದಕ್ಕೆ ಯಾವುದೇ ಮಹತ್ವವಿರಲಿಲ್ಲ, ಆದರೆ ಈ ಪತ್ರ ಅಂಥದ್ದಲ್ಲ, 2 ಜಿ ಹಗರಣಕ್ಕಿಂತಲೂ ದೊಡ್ಡ ಹಗರಣವೆಂದು ಅಂದಾಜಿಸಲಾಗುತ್ತಿರುವ ಹಗರಣದಲ್ಲಿ ಆರೋಪಿತರಾದ ವ್ಯಕ್ತಿಯೊಬ್ಬರು ಬಹಿರಂಗವಾಗಿ ಪ್ರಧಾನಿಗೆ ಒಡ್ಡಿದ ಸವಾಲಾಗಿತ್ತು, ಭಾರೀ ಹಗರಣದ ಆರೋಪಿಯೊಬ್ಬರು ಅಷ್ಟೊಂದು ಧಾರ್ಷ್ಟ್ಯ ತೋರುತ್ತಾರೆಂದರೆ ಆ ವ್ಯಕ್ತಿ ಯಾರಿರಬಹುದು? ಏನಿದರ ಮರ್ಮ?

ಆ ವ್ಯಕ್ತಿಯ ಹೆಸರು ಡಾಕ್ಟರ್ ಜಿ.ಮಾಧವನ್ ನಾಯರ್. ಅವರೊಬ್ಬ ಖ್ಯಾತ ಖಗೋಳ ವಿಜ್ಞಾನಿ. ಭಾರತ ಸರ್ಕಾರದಿಂದ ಪದ್ಮವಿಭೂಷಣ ಪ್ರಶಸ್ತಿ ಗಳಿಸಿದ್ದವರು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಮಾಜಿ ಅಧ್ಯಕ್ಷರೂ, ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿಯೂ ಆಗಿದ್ದವರು. ಈ ಮಹಾಶಯರ ಅಧಿಕಾರಾವಧಿಯಲ್ಲೆ 2 ಜಿ ಹಗರಣಕ್ಕಿಂತಲೂ ದೊಡ್ಡ ಹಗರಣವೊಂದು ನಡೆದಿದೆಯೆಂದು ಸಿಎಜಿ ಅಂದಾಜು ಮಾಡಿದೆ. ಪ್ರಾಥಮಿಕ ತನಿಖಾ ವರದಿಯ ಪ್ರಕಾರ ಈ ಹಗರಣದಿಂದ ನಮ್ಮ ಬೊಕ್ಕಸಕ್ಕಾದ ನಷ್ಟ ಸುಮಾರು 2 ಲಕ್ಷ ಕೋಟಿಗಳೆಂದು ಅಂದಾಜು. ಅದು ಇತ್ತೀಚೆಗೆ ಮಾಧ್ಯಮಗಳಲ್ಲಿ ಸುದ್ದಿಗೆ ಗ್ರಾಸವಾಗಿರುವ 'ಅಂತರಿಕ್ಷ್-ದೇವಾಸ್ ಒಪ್ಪಂದ' ಎಂದು ಕರೆಯಲಾಗುವ ವ್ಯವಹಾರಕ್ಕೆ ಸಂಬಂಧಿಸಿದ್ದು.

ಜನಸಾಮಾನ್ಯರ ಪಾಲಿಗೆ ಸಂಸ್ಕೃತ ಶ್ಲೋಕದಂತೆ ಕಾಣುತ್ತಿರುವ ಈ ವ್ಯವಹಾರವನ್ನು ಸರಳ ಕನ್ನಡ ಭಾಷೆಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ.

ವಿಶ್ವದ ಬಾಹ್ಯಾಕಾಶದಲ್ಲಿ ಭಾರತದ ಹೆಜ್ಜೆಗುರುತುಗಳು ಎದ್ದು ಕಾಣುವಂತಿವೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಸಾಧನೆಯನ್ನು ಮೆಚ್ಚಿಕೊಳ್ಳದವರು ಇಲ್ಲವೆಂದೇ ಹೇಳಬಹುದು. ದೇಶದ ದೂರಸಂಪರ್ಕ, ವಾಣಿಜ್ಯ ಮನೋರಂಜನೆ, ಮಾಹಿತಿ, ರಕ್ಷಣೆ, ಸಂಶೋಧನೆ ಮುಂತಾದ ನಾನಾ ಕ್ಷೇತ್ರಗಳಿಗೆ ಅತ್ಯವಶ್ಯಕವಾಗಿರುವ ಉಪಗ್ರಹಗಳನ್ನು ತಯಾರಿಸಿ, ಅವುಗಳನ್ನು ಅಂತರಿಕ್ಷದಲ್ಲಿ ನೆಲೆಗೊಳಿಸುವ ಉತ್ಕೃಷ್ಟ ತಂತ್ರಜ್ಞಾನವನ್ನು ಇಸ್ರೋ ಅಭಿವೃದ್ಧಿಪಡಿಸುತ್ತಾ ಬಂದಿದೆ. ಇಂದು ಜಾಗತಿಕ ಮಟ್ಟದಲ್ಲಿ ಬಾಹ್ಯಾಕಾಶ ಕ್ಷೇತ್ರದ ಪ್ರಮುಖರಾದ ಅಮೆರಿಕ, ರಷ್ಯ ಚೀನಾ, ಐರೋಪ್ಯ ಒಕ್ಕೂಟ, ಜಪಾನ್‌ಗಳ ಸಾಲಿನಲ್ಲಿ ಭಾರತಕ್ಕೂ ಭದ್ರ ಸ್ಥಾನವಿದೆ.



ಅಂಥ ಘನತೆವೆತ್ತ ಇಸ್ರೋ ಸಂಸ್ಥೆ ತನ್ನ ವಾಣಿಜ್ಯ ವ್ಯವಹಾರಗಳನ್ನು ನಡೆಸಲಿಕ್ಕಾಗಿ 'ಅಂತರಿಕ್ಷ್ ಕಾರ್ಪೊರೇಷನ್ ಲಿಮಿಟೆಡ್' ಎಂಬ ಹೆಸರಿನ ವಾಣಿಜ್ಯ ಕಂಪನಿಯೊಂದನ್ನು 1992ರಲ್ಲಿ ಸ್ಥಾಪಿಸಿದೆ. ಈ ವಾಣಿಜ್ಯ ವಿಭಾಗವು ಉಪಗ್ರಹಗಳಲ್ಲಿ ಅಳವಡಿಸಲಾದ ವಿಶಿಷ್ಟ ತಂತ್ರಜ್ಞಾನದ ಸೇವೆಯನ್ನು ಒದಗಿಸಲು ಸಂಬಂಧಿಸಿದ ಕಂಪನಿಗಳೊಂದಿಗೆ ವಹಿವಾಟು ನಡೆಸುತ್ತದೆ. ಉದಾಹರಣೆಗೆ ಟಿವಿ ಚಾನೆಲ್‌ಗಳು, ಡಿ.ಟಿ.ಎಚ್, ಮೊಬೈಲ್ ಕಂಪನಿಗಳು, ಅಂತರ್ಜಾಲ ಸೇವಾಸಂಸ್ಥೆಗಳು, ಬ್ಯಾಂಕಿಂಗ್ ಮತ್ತು ಶೇರು ವ್ಯವಹಾರದ ಸಂಸ್ಥೆಗಳು ಇತ್ಯಾದಿ. ಈ ಕಂಪನಿಗಳು ಉಪಗ್ರಹ ತಂತ್ರಜ್ಞಾನದ ಸೇವೆಯನ್ನು ಗುತ್ತಿಗೆ ಆಧಾರದಲ್ಲಿ ಬಳಸಿಕೊಳ್ಳಲು ಅಂತರಿಕ್ಷ್‌ನೊಂದಿಗೆ ವಾಣಿಜ್ಯ ಒಪ್ಪಂದವನ್ನು ಮಾಡಿಕೊಳ್ಳುತ್ತವೆ. ಈ ಯಶಸ್ವಿ ಅಂತರಿಕ್ಷ್ ಸಂಸ್ಥೆ ಸಾರ್ವಜನಿಕ ಉದ್ದಿಮೆಗಳಲ್ಲಿ 'ಮಿನಿ ರತ್ನ' ಎಂಬ ಖ್ಯಾತಿಗೆ ಪಾತ್ರವಾಗಿದೆ.

2 ಜಿ ನಂತರ 3 ಜಿ

ಭಾರತದಲ್ಲಿ ಇತ್ತೀಚೆಗೆ ದೂರಸಂಪರ್ಕ, ಮಾಹಿತಿ ತಂತ್ರಜ್ಞಾನ ಮತ್ತು ಮನೋರಂಜನಾ ಕ್ಷೇತ್ರಗಳು ಭಾರೀ ಬೆಳವಣಿಗೆ ಸಾಧಿಸಿವೆ. ಈ ನಿಟ್ಟಿನಲ್ಲಿ 2 ಜಿ ತಂತ್ರಜ್ಞಾನದ ನಂತರ 3 ಜಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ. ಎಸ್-ಬ್ಯಾಂಡ್ ಎಂದು ಕರೆಯಲಾಗುವ ಒಂದು ನಿರ್ದಿಷ್ಟ ತರಂಗಾಂತರದ (2.5 ಗಿಗಾ ಹರ್ಟ್ಸ್‌ನಿಂದ 2.69 ಗಿಗಾ ಹರ್ಟ್ಸ್ ತರಂಗಾಂತರ) ಪ್ರಸರಣದ ವ್ಯವಸ್ಥೆಯನ್ನು ಇಸ್ರೋ ರೂಪಿಸಿದೆ.

ಭಾರೀ ಲಾಭವನ್ನು ತಂದುಕೊಡುವ ಈ ತಂತ್ರಜ್ಞಾನದ ಹಕ್ಕನ್ನು ತಮ್ಮದಾಗಿಸಿಕೊಳ್ಳಲು ಟೆಲಿಕಾಮ್ ಆಪರೇಟರ್‌ಗಳ ನಡುವೆ ತೀವ್ರ ಪೈಪೋಟಿಯಿದೆ. ಹಾಗೆ ನೋಡಿದರೆ ಅತ್ಯಂತ ಲಾಭದಾಯಕವಾದ ತಂತ್ರಜ್ಞಾನದ ಹಿಡಿತ ಇಸ್ರೋ ಸಂಸ್ಥೆಯ ಮೂಲಕ ಸರ್ಕಾರದ ಕೈಯಲ್ಲೇ ಇದೆಯೆಂಬುದು ಸಮಾಧಾನಕರ ಸಂಗತಿ. ಆದರೇನಂತೆ? ಸರ್ಕಾರ ಮತ್ತು ಇಸ್ರೋನಂಥ ಪ್ರತಿಷ್ಠಿತ ಸಂಸ್ಥೆಗಳು ಯಾರ ಕೈಯಲ್ಲಿವೆ ಎಂಬುದು ಬಹಳ ಮುಖ್ಯ ತಾನೇ? ಈ ಪ್ರಕರಣವನ್ನು ನೋಡಿದರೆ ನಮ್ಮ ದೇಶದ ವಿಜ್ಞಾನ ಮತ್ತು ತಂತ್ರಜ್ಞಾನಗಳು ಯಾರ ಕೈಯಲ್ಲಿವೆ ಮತ್ತು ರಾಷ್ಟ್ರದ ಸ್ವತ್ತಾಗಬೇಕಿದ್ದ ತಂತ್ರಜ್ಞಾನದ ಲಾಭವನ್ನು ಕೆಲವೇ ವ್ಯಕ್ತಿಗಳು ಹೇಗೆ ಲಪಟಾಯಿಸುತ್ತಿದ್ದಾರೆ ಎಂಬುದರ ಅರಿವಾಗುತ್ತದೆ.


ಇಲ್ಲಿಗೆ ಏಳು ವರ್ಷಗಳ ಹಿಂದೆ ಅಂದರೆ 2005ರ ಜನವರಿಯಲ್ಲಿ ಇಸ್ರೋನ ಮಾರ್ಕೆಟಿಂಗ್ ಕಂಪನಿಯಾದ ಅಂತರಿಕ್ಷ್ ಅತ್ಯಾಧುನಿಕ ತಂತ್ರಜ್ಞಾನದ ಬಳಕೆಗೆ ಸಂಬಂಧಿಸಿ ಗುತ್ತಿಗೆ ಒಪ್ಪಂದವೊಂದನ್ನು ಮಾಡಿಕೊಂಡಿದೆ. ನಿಗೂಢವಾಗಿ ಸದ್ದು ಗದ್ದಲವಿಲ್ಲದೆ ಭಾರೀ ಲಾಭ ತಂದುಕೊಡಲಿರುವ ಈ ಹೊಸ ಸೇವೆಯ ಗುತ್ತಿಗೆ ಪಡೆದುಕೊಂಡ 'ಅದೃಷ್ಟಶಾಲಿ' ಕಂಪನಿಯೇ 'ದೇವಾಸ್ ಮಲ್ಟಿಮೀಡಿಯ ಪ್ರೈವೇಟ್ ಲಿಮಿಟೆಡ್'.

ಅಷ್ಟೇನೂ ಹೆಸರುವಾಸಿಯಲ್ಲದ ಈ ಕಂಪನಿ ರಿಜಿಸ್ಟರ್ ಆಗಿದ್ದುದು ಕೇವಲ ಒಂದು ವರ್ಷ ಹಿಂದೆಯಷ್ಟೆ, ಅಂದರೆ 2004ರಲ್ಲಿ, ಈ ಕಂಪನಿಯ ಪೂರ್ವಾಪರ ಕೆದಕುತ್ತಾ ಹೋದರೆ ಮತ್ತಷ್ಟು ಆಶ್ಚರ್ಯಕರ ಸಂಗತಿಗಳು ಹೊರಬೀಳುತ್ತವೆ. ದೇವಾಸ್ ಕಂಪನಿಯ ಸೃಷ್ಟಿಕರ್ತರು ಇಸ್ರೋದಲ್ಲಿ ಈ ಹಿಂದೆ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದ ಉನ್ನತ ಹಂತದ ತಂತ್ರಜ್ಞರು ಹಾಗೂ ಅಧಿಕಾರಿಗಳು! ಗುತ್ತಿಗೆ ಪಡೆದು ಕೊಂಡ "ಕಂಪನಿ"ಯ ಮಾಲಿಕರು ಹಾಗೂ ಸರ್ಕಾರದ ಪರವಾಗಿ ಗುತ್ತಿಗೆಗೆ ಸಹಿ ಹಾಕಿದವರು ಪರಸ್ಪರ ಹತ್ತಾರು ವರ್ಷಗಳ ಒಡನಾಟವಿದ್ದವರು, ಒಂದೇ ಸಂಸ್ಥೆಯ ಸಹೋದ್ಯೋಗಿಗಳು. ಈ ವ್ಯವಹಾರದಲ್ಲಿನ ಮಸಲತ್ತನ್ನು ಅರಿಯಲು ಬಹುಶಃ ಈ ಒಂದು ಅಂಶವೇ ಸಾಕಾಗಬಹುದು. ಆದರೂ ನಾವು ಇಷ್ಟಕ್ಕೇ 'ಪೂರ್ವಗ್ರಹಪೀಡಿತ'ರಾಗಬೇಕಿಲ್ಲ, ಮುಂದಿನ ವಿವರಗಳಿಗೆ ಹೋಗೋಣ.

ಅಂತರಿಕ್ಷ್-ದೇವಾಸ್ ಒಪ್ಪಂದದ ಪ್ರಕಾರ ಇಸ್ರೋ ಸಂಸ್ಥೆಯು ಎರಡು ಹೊಸ ದೂರಸಂವೇದಿ ಉಪಗ್ರಹಗಳನ್ನು ನಿರ್ಮಾಣ ಮಾಡಿ, ಅವುಗಳನ್ನು ಸೂಕ್ತ ಕಕ್ಷೆಗೆ ಹಾರಿಸಿ ಅವುಗಳನ್ನು ದೇವಾಸ್‌ಗಾಗಿ ನಿರ್ವಹಣೆ ಮಾಡಬೇಕು. ಈ ಕರಾರಿನಂತೆ ಇಸ್ರೋ ಸಂಸ್ಥೆಯು GSAT-6 ಮತ್ತು GSAT-6A ಎಂದು ಕರೆಯಲಾಗುವ ಈ ಎರಡು ಉಪಗ್ರಹಗಳ ಟ್ರಾನ್ಸ್‌ಪಾಂಡರ್‌ಗಳಲ್ಲಿ ಶೇಕಡ 90 ಭಾಗವನ್ನು ದೇವಾಸ್ ಕಂಪನಿಗೆ ಮೀಸಲಿರಿಸಲಾಗಿದೆ. ಈ ಗುತ್ತಿಗೆ ಅವಧಿ 12 ವರ್ಷಗಳು ಹಾಗೂ ಅಗತ್ಯವಿದ್ದಲ್ಲಿ ಇನ್ನೂ 12 ವರ್ಷಗಳಿಗೆ ಅವಧಿಯನ್ನು ವಿಸ್ತರಿಸಬಹುದು. ಸಾಮಾನ್ಯವಾಗಿ ಇಂಥ ಉಪಗ್ರಹಗಳ ಜೀವಿತಾವಧಿ ಸರಾಸರಿ 12 ವರ್ಷಗಳು. ಆದ್ದರಿಂದ ಈ ಒಪ್ಪಂದದ ಅವಧಿಯನ್ನು ಮೀರಿ ಅವು ದೇಶದ ಸೇವೆಗೆ ಲಭ್ಯವಾಗುವಂಥ ಯಾವ ಸಾಧ್ಯತೆಯೂ ಇಲ್ಲ.

ಈ ಎರಡು ಉಪಗ್ರಹಗಳನ್ನು ನಿರ್ಮಿಸಲು ಭಾರತದ ತೆರಿಗೆದಾರರು ತಮ್ಮ ಜೇಬಿನಿಂದ ಸುಮಾರು 700 ರಿಂದ 800 ಕೋಟಿ ರೂಪಾಯಿಗಳನ್ನು ತೆರಬೇಕು. ಯೋಜನೆಯ ನಿರ್ವಹಣೆ, ಬೆಲೆಯೇರಿಕೆ ಇನ್ನಿತರ ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ ಈ ಮೊತ್ತ ಮತ್ತಷ್ಟು ಹೆಚ್ಚಾಗಬಹುದು ಎಂಬುದು ಒಂದು ಅಂದಾಜು. ಒಟ್ಟಾರೆ ಯೋಜನೆಯ ಅನುಷ್ಠಾನದ ಯಾವುದೇ ಹಂತದಲ್ಲಿ ಏನಾದರೂ ಅವಘಡಗಳು ಸಂಭವಿಸಿದಲ್ಲಿ ಇಸ್ರೋ ಸಂಸ್ಥೆಯೇ ನೇರ ಹೊಣೆಯಾಗಬೇಕು ಮತ್ತು ಸರ್ಕಾರದ ಬೊಕ್ಕಸದಿಂದ ಹಣ ಸುರಿದು ದೇವಾಸ್‌ಗೆ ಬದಲಿ ಉಪಗ್ರಹ ಸೇವೆ ಒದಗಿಸಬೇಕು. ಇವು ಅಲ್ಲಿ ಇಲ್ಲಿ ಉದುರಿಬಿದ್ದ ಒಪ್ಪಂದದ ಕೆಲವು ತುಣುಕುಗಳಷ್ಟೆ. ಒಪ್ಪಂದದ ಬಹಳಷ್ಟು ವಾಣಿಜ್ಯ ವಿಷಯಗಳನ್ನು ಇನ್ನೂ ಬಹಿರಂಗಗೊಳಿಸಿಲ್ಲ.

ಒಟ್ಟಾರೆಯಾಗಿ ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ ದೇವಾಸ್ ಎಂಬ ಕಂಪನಿಯ ಕರ್ತೃಗಳು ಈ ತೆರೆಮರೆಯ ವ್ಯವಹಾರದಲ್ಲಿ ಭಾರೀ ಹಣ ದೋಚುವ ಲೆಕ್ಕಾಚಾರದಲ್ಲಿದ್ದರು. ಅದು ಹಾಗಿರಲಿ, ಈ ಗುತ್ತಿಗೆ ಪಡೆಯಲು ದೇವಾಸ್ ಕಂಪನಿ ಸರ್ಕಾರಕ್ಕೆ ಸಲ್ಲಿಸುವ ಒಟ್ಟು ಮೊತ್ತವೆಷ್ಟು? ಒಟ್ಟು 12 ವರ್ಷಗಳ ಅವಧಿಗೆ 300 ಮಿಲಿಯನ್ ಡಾಲರ್ ಅಂದರೆ ಸುಮಾರು 1500 ಕೋಟಿಗಳು




ಲಾಭದ ಬೆನ್ನತ್ತಿರುವ ದೇವಾಸ್

ಅದೃಷ್ಟಶಾಲಿ ದೇವಾಸ್ ಕಂಪನಿಯ ಅಧ್ಯಕ್ಷರಾಗಿರುವ ಡಾ. ಎಂ.ಜಿ.ಚಂದ್ರಶೇಖರ್ (ಇವರು ಈ ಹಿಂದೆ ಇಸ್ರೋದಲ್ಲಿ 'ವೈಜ್ಞಾನಿಕ ಕಾರ್ಯದರ್ಶಿ'ಯೆಂಬ ಪ್ರಮುಖವಾದ ಹುದ್ದೆಯಲ್ಲಿದ್ದರು) ಹೇಳಿ ಕೇಳಿ ವಿಜ್ಞಾನಿ. ವೃಥಾಕಾಲಹರಣ ಮಾಡುತ್ತಾ ಕೂರುವ ಜಾಯಮಾನದವರಲ್ಲ. ಆದ್ದರಿಂದ ಈಗಾಗಲೇ ಈ ಹಕ್ಕಿನ ಮಾರಾಟದ ಕಾಯಕ ಶುರು ಮಾಡಿದ್ದಾರೆ. 2008ರಲ್ಲಿ ಡೂಯಿಷ್ ಟೆಲಿಕಾಮ್ ಎಜಿ ಎಂಬ ವಿದೇಶಿ ಕಂಪನಿಗೆ ಶೇಕಡ 17ರಷ್ಟು ಷೇರುಗಳನ್ನು 75 ಮಿಲಿಯನ್ ಡಾಲರ್ ಬೆಲೆಗೆ, ಅಂದರೆ ಈಗಿನ ರೂಪಾಯಿ ಮೌಲ್ಯ ಸುಮಾರು 375 ಕೋಟಿಗಳಿಗೆ ಮಾರಾಟ ಮಾಡಿದ್ದಾರೆ. ಕೊಲಂಬಿಯಾ ಕ್ಯಾಪಿಟಲ್ ಮತ್ತು ಟೆಲಿಕಾಮ್ ವೆಂಚರ್ಸ್ ಎಂಬ ಕಂಪನಿಗಳಿಗೆ ಶೇಕಡ 49ರಷ್ಟು ಪಾಲನ್ನು ಮಾರಿಕೊಂಡ ಬಗ್ಗೆ ವರದಿಗಳು ಬಂದಿವೆಯಾದರೂ ಅದರ ವಿವರಗಳು ಹೊರಬಂದಿಲ್ಲ.

ದೇವಾಸ್ ಈ ಎಲ್ಲಾ ವಹಿವಾಟುಗಳನ್ನು ನಡೆಸಲು ಕಾರಣವಾಗಿರುವುದೇ ಎಸ್-ಬ್ಯಾಂಡ್ ತರಂಗಾಂತರದ ಗುತ್ತಿಗೆ ಪಡೆದುಕೊಂಡಿರುವುದರಿಂದ ಮಾತ್ರ. ಏಕೆಂದರೆ ಇದಕ್ಕೆ ಮುಂಚೆ ಈ ಕಂಪನಿಗೆ ಹೇಳಿಕೊಳ್ಳುವಂಥ ಯಾವ ವ್ಯವಹಾರವೂ ಇರಲಿಲ್ಲವೆಂಬುದು ಒಂದು ಓಪನ್ ಟ್ರೂತ್. ಹೀಗೆ ಇನ್ನೂ ಈ ಹೊಸ ತಂತ್ರಜ್ಞಾನದ ಸೇವೆ ಪ್ರಾರಂಭಿಸುವ ಮುನ್ನವೇ ಷೇರು ಮಾರಾಟದಲ್ಲಿ ಬಂಪರ್ ಲಾಭವನ್ನು ಗಳಿಸುತ್ತದೆಂದರೆ ಇನ್ನು ಯೋಜನೆ ಪೂರ್ಣಪ್ರಮಾಣದಲ್ಲಿ ಜಾರಿಗೆ ಬಂದಿದ್ದರೆ...? ಲಾಭದ ಲೆಕ್ಕಾಚಾರ ಊಹೆಗೂ ನಿಲುಕದ್ದು. ಅದೂ ಸಹ ಒಂದಷ್ಟು ಪುಡಿಗಾಸನ್ನು ಬಿಟ್ಟರೆ ಅಂಥಾ ಯಾವ ಬಂಡವಾಳವನ್ನೂ ಹೂಡದೆ ಸಾವಿರಾರು ಕೋಟಿಗಳ ಸಾರ್ವಜನಿಕ ಸಂಪತ್ತನ್ನು ಲೂಟಿ ಹೊಡೆಯುವ ಹುನ್ನಾರ 2 ಜಿ ಹಗರಣವನ್ನೂ ಮೀರಿಸಿದ್ದು. ಈ ಅವ್ಯವಹಾರವನ್ನು ಇದೇ ಕ್ಷೇತ್ರದಲ್ಲಿರುವ ಹಲವರು ಪ್ರಶ್ನಿಸಿದ್ದಾರೆ. ರಿಲಯನ್ಸ್ ಅಡಾಗ್, ಟಾಟಾ ಸ್ಕೈ, ಸನ್, ಭಾರ್ತಿ ಮುಂತಾದ ಹತ್ತುಹಲವು ಸಂಸ್ಥೆಗಳು ಪೈಪೋಟಿಯಲ್ಲಿದ್ದ ಸಂದರ್ಭದಲ್ಲಿ ಅವರನ್ನೆಲ್ಲಾ ಕಡೆಗಣಿಸಿ ಯಾವುದೇ ಮಾನದಂಡಗಳನ್ನು ಅಳವಡಿಸದೆ ಏಕಪಕ್ಷೀಯವಾಗಿ ಗುತ್ತಿಗೆ ಕರಾರು ಮಾಡಿಕೊಂಡ ಇಸ್ರೋದ ಕ್ರಮವನ್ನು ಇದೇ ಉದ್ಯಮದಲ್ಲಿರುವ ಹಲವರು ಪ್ರಶ್ನಿಸುತ್ತಿದ್ದಾರೆ. ಉದ್ಯಮ ಕ್ಷೇತ್ರದ ಒಬ್ಬ ಪ್ರಮುಖರೇ ಹೇಳುವಂತೆ 3ಜಿ ಲೈಸೆನ್ಸ್‌ನಿಂದ ಕನಿಷ್ಠ ಪಕ್ಷ 70000 ಕೋಟಿ ಆದಾಯ ಬರುವ ನಿರೀಕ್ಷೆ ಇದೆ. ಸರ್ಕಾರದ ಬೊಕ್ಕಸ ಸೇರಬೇಕಾದ ಹಣವನ್ನು ಲಪಟಾಯಿಸಲು ಒಳಸಂಚು ನಡೆಸಿದ ಈ ವಿಜ್ಞಾನಿಗಳ ಕೂಟದ ಕರಾಮತ್ತಿಗೆ ಏನನ್ನಬೇಕು?

ದೇಶ ಸೇವೆಯೆಂದರೇನು?



ಪ್ರಮುಖ ವಿಜ್ಞಾನಿಗಳಿಗೆ ಈ ಹಗರಣದ ಬಿಸಿ ಮುಟ್ಟಲು ಪ್ರಾರಂಭಿಸಿದ ನಂತರ ತಿಪ್ಪೆ ಸಾರಿಸಿ ಇದನ್ನು ಮುಚ್ಚಿಹಾಕಲು ದೇಶದ ಹಲವು ಗಣ್ಯಾತಿಗಣ್ಯರು ಹೆಣಗುತ್ತಿದ್ದಾರೆ. ಇಸ್ರೋದ ಮಾಜಿ ಮುಖ್ಯಸ್ಥರಾಗಿದ್ದ ಕಸ್ತೂರಿ ರಂಗನ್ ಅವರ ಪ್ರಕಾರ 'ದೇಶಕ್ಕೋಸ್ಕರ ಸುಮಾರು ಮೂರು ದಶಕಗಳ ಕಾಲ ದುಡಿದ ವಿಜ್ಞಾನಿಗಳಿಗೆ ಸರ್ಕಾರ ಅವಮಾನಿಸುತ್ತಿದೆ?' ಯು.ಆರ್.ರಾವ್ ಸಹಾ ಇದೇ ಅರ್ಥದ ಮಾತನ್ನಾಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಹಗರಣವನ್ನು ರಾಜಕೀಯ ದಾಳವಾಗಿಸಿಕೊಂಡು ಕಾಂಗ್ರೆಸ್ ಮೇಲೆ ದಾಳಿ ಮಾಡುತ್ತಿದ್ದ ಪ್ರಮುಖ ವಿರೋಧ ಪಕ್ಷವಾಗಿರುವ ಬಿಜೆಪಿ ಈಗ ರಾಗ ಬದಲಾವಣೆ ಮಾಡಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ ಎಂಬುದಕ್ಕಿಂತ ವಿಜ್ಞಾನಿಗಳ ಗೌರವ ರಕ್ಷಣೆಯ ಬಗ್ಗೆ ಕಾಳಜಿ ತೋರಿಸುತ್ತಿದೆ.

ಈ ರೀತಿ ವಿಜ್ಞಾನಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿದರೆ ವಿಜ್ಞಾನಿಗಳ ನೈತಿಕತೆ ಕುಸಿದು ದೇಶದ ವಿಜ್ಞಾನ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬುದು ಈ ವಾದಗಳ ಸಾರಾಂಶ. ಸರಿ, ಅವರ ವಾದವನ್ನು ನಾವು ಒಂದುಕ್ಷಣ ಒಪ್ಪಿಕೊಳ್ಳೋಣ. ಹಾಗಾದರೆ ವಿಜ್ಞಾನಿಗಳೆನಿಸಿಕೊಂಡವರು ಇಂಥಾ ಹಗಲು ದರೋಡೆಯಲ್ಲಿ ತೊಡಗಿಸಿಕೊಂಡರೆ ವಿಜ್ಞಾನ ಕ್ಷೇತ್ರ ಯಾವ ರೀತಿ ಉದ್ಧಾರವಾಗುತ್ತದೆ ಎಂಬ ಪ್ರಶ್ನೆಗೆ ಉತ್ತರಿಸುವವರಾರು? ಕರ್ನಾಟಕ ಮುಖ್ಯಮಂತ್ರಿ ಸದಾನಂದಗೌಡ ಈ ವಿವಾದಕ್ಕೆ ಆದಷ್ಟು ಬೇಗ ತೆರೆ ಎಳೆಯಲು ಅಬ್ದುಲ್ ಕಲಾಂ ಅವರು ಮಧ್ಯೆ ಪ್ರವೇಶಿಸಬೇಕೆಂದು ಕೋರಿದ್ದಾರೆ. ದೇಶದ ಸಂಪತ್ತು ಹಾಡುಹಗಲೇ ಲೂಟಿಯಾಗುತ್ತಿರುವುದರ ಬಗ್ಗೆ ಸ್ವಲ್ಪವೂ ತಲೆಕೆಡಿಸಿಕೊಳ್ಳದ ಇವರಿಗೆ ಈ ಗಣ್ಯವ್ಯಕ್ತಿಗಳನ್ನು ರಕ್ಷಿಸಲು ಎಷ್ಟೊಂದು ಕಾಳಜಿ? ಬಾಹ್ಯಾಕಾಶ ವಿಜ್ಞಾನಿಗಳೆಂದರೆ ಅವರೇನು ಬಾಹ್ಯಾಕಾಶದಿಂದಲೇ ಉದ್ಭವಿಸಿ ಬಂದವರೇನಲ್ಲ, ಅವರಿಗೂ ಈ ನೆಲದ ಕಾನೂನು ಅನ್ವಯವಾಗುತ್ತದೆ ಎಂದು ಈ ಹುಸಿ ದೇಶಪ್ರೇಮಿಗಳಿಗೆ ತಿಳಿಸಿ ಹೇಳುವವರ್‍ಯಾರು?

ತ್ರ. ಈ ಯೋಜನೆಗೆ ತೊಡಗಿಸುವ ಸರ್ಕಾರದ ಹಣದ ಸರಳ ಬಡ್ಡಿ ಕ್ಕೂ ಸಮವಾಗುವುದಿಲ್ಲ. ಹಾಗಾದರೆ ಇದರ ನಿಜವಾದ ಮಾರುಕಟ್ಟೆ ಮೌಲ್ಯ ರ ಬಹುದು? ಅದು ನಮ್ಮ ಊಹೆಗೂ ನಿಲುಕದ್ದು. ಈ ಪ್ರಕರಣದ ಟೆ ಕೈಗೊಂಡಿರುವ ಸಿಎಜಿ ಕಳೆದ ವರ್ಷ ಅಂದಾಜು ಮಾಡಿದಂತೆ ಭಾರೀ ಡಿಕೆಯಲ್ಲಿರುವ ಈ ತಂತ್ರಜ್ಞಾನ ಸೇವೆಯಿಂದ ಸಾರ್ವಜನಿಕ ಬೊಕ್ಕಸಕ್ಕೆ ಮಾರು 2 ಲಕ್ಷ ಕೋಟಿಗಳ ನಷ್ಟವುಂಟಾಗಿದೆ. ಹಾಗಾದರೆ ಮೋಸದ ಮಾಣ ಎಷ್ಟು? "ದೇಶೋದ್ಧಾರಕ" ವಿಜ್ಞಾನಿಗಳಿಂದ ಇಂಥ ಘನಂದಾರಿ ೋಸ ನಡೆಯುತ್ತದೆಂದರೆ ನಂಬುವುದು ಕಷ್ಟ. ಆದರೇನು ಮಾಡುವುದು ಯಾವಾಗಲೂ ಕಹಿಯಾಗಿರುತ್ತೆ, ಇತ್ತೀಚಿನ ದಿನಗಳಲ್ಲಿ ಪದೇಪದೇ ಇಂಥ ಉಣ್ಣಬೇಕಾದ ದೌರ್ಭಾಗ್ಯ ನಮ್ಮದು.

ತಮಗೆ ಬೇಕಾದ ಒಂದು ಖಾಸಗಿ ಕಂಪನಿಗಾಗಿಯೇ ಎರಡು ಗ್ರಹಗಳನ್ನು ನಿರ್ಮಿಸಲು ಅಗತ್ಯ ಅನುಮತಿ ಪಡೆದುಕೊಂಡ ಇಸ್ರೋದ ಮತ್ತಷ್ಟು ಒಳಮರ್ಮಗಳಿಂದ ಕೂಡಿತ್ತು. ಯಾವುದೇ ಪ್ರಮುಖ ಯೋಜನೆ ಗೊಳ್ಳುವ ಮುನ್ನ ಕೇಂದ್ರ ಸಚಿವ ಸಂಪುಟಕ್ಕೆ ಹಾಗೂ ಇಸ್ರೋದ ನೀತಿ ರೂಪಣೆಗೆಂದೇ ರಚಿಸಲ್ಪಟ್ಟಿರುವ ಬಾಹ್ಯಾಕಾಶ ಆಯೋಗಕ್ಕೆ ವಿವರವಾದ ಮಾಹಿತಿ ಡಬೇಕೆಂಬುದು ನಿಯಮ. ಹಾಗೆ ನೋಡಿದರೆ ಔಪಚಾರಿಕವಾಗಿ ಈ ಯಮವನ್ನೇನೋ ಪಾಲಿಸಲಾಗಿತ್ತು. ಆದರೆ ಈ ಯೋಜನೆಗೆ ಮೂಲಪ್ರೇರಣೆಯಾಗಿದ್ದ ಅಂತರಿಕ್ಷ್-ದೇವಾಸ್ ಒಪ್ಪಂದದ ಸಣ್ಣ ಸುಳಿವೂ ಸಹ ರ್ಕಾರಕ್ಕೆ ನೀಡಿರಲಿಲ್ಲ. ಕಳೆದ ಫೆಬ್ರವರಿಯಲ್ಲಿ ಇಸ್ರೋದಿಂದ ಹೊರಬಿದ್ದ ಹೇಳಿಕೆಯ ಕಾರವೇ "ದೇವಾಸ್ ಕಂಪನಿಯೊಂದಿಗೆ ಆಗಿದ್ದ ಒಪ್ಪಂದದ ಬಗ್ಗೆ ಕನಿಷ್ಠ ಒಂದು ಲ್ಲೇಖವೂ ಇರಲಿಲ್ಲ." ಅದೃಷ್ಟವಶಾತ್ ಪತ್ರಿಕೆಯೊಂದರ ತನಿಖಾ ವರದಿಯ ಮೂಲಕ ಈ ಹಗರಣ ಬೆಳಕಿಗೆ ಬಂತು. ನಂತರ ವ್ಯಾಪಕ ಟೀಕೆಗೆ ಗುರಿಯಾದ ರ್ಕಾರ ಕೆಲವು ಕ್ರಮಗಳಿಗೆ ಮುಂದಾಯಿತು. ಈ ಬಗ್ಗೆ 2010 ರ ಜುಲೈನಲ್ಲಿ 3 ಸೇರಿದ್ದ ಬಾಹ್ಯಾಕಾಶ ಆಯೋಗವು ಈ ಒಪ್ಪಂದವನ್ನು ರದ್ದುಪಡಿಸಲು ಫಾರಸ್ಸು ಮಾಡಿತು. ದೇವಾಸ್ ಕಂಪನಿಯ ಒಪ್ಪಂದದ ಬಗ್ಗೆ ಪ್ರಪ್ರಥಮ ಬಾರಿಗೆ ಯೋಗದ ಗಮನಕ್ಕೆ ಬಂದಿದ್ದು ಆ ಸಭೆಯಲ್ಲಿಯೇ.

ಇನ್ನು ಈ ಗುತ್ತಿಗೆ ಒಪ್ಪಂದಕ್ಕೆ ದೇವಾಸ್ ಕಂಪನಿಯನ್ನು ಆರಿಸಿದ್ದು ಹೇಗೆ ಂಬ ಪ್ರಶ್ನೆಗೆ ಯಾರ ಬಳಿಯೂ ಸಮರ್ಪಕ ಉತ್ತರವಿಲ್ಲ. ಪಾರದರ್ಶಕವಾದ ರ್ಧಾತ್ಮಕವಾದ ಯಾವ ವಿಧಾನವನ್ನೂ ಅಳವಡಿಸಿಲ್ಲವೆಂಬುದು ಮೇಲುನೋಟಕ್ಕೆ ದ್ದು ಕಾಣುವ ವಿಚಾರ. ಸರಿಯಾದ ಯೋಜನೆಯಿದ್ದ ಕಂಪನಿ ಇದೊಂದೇ ಎಂಬ ಂಡ ವಾದ ಮುಂದಿಟ್ಟು ನಮ್ಮನ್ನು ನಂಬಿಸಲು ಇಸ್ರೋ ವಿಜ್ಞಾನಿಗಳು ಯತ್ನಿಸುತ್ತಿದ್ದಾರೆ. ದೇಶದ ಹಿತಾಸಕ್ತಿಯನ್ನು ಕಾಪಾಡಬೇಕಿದ್ದ ಅಂತಾರಾಷ್ಟ್ರೀಯ ನ್ನಣೆ ಗಳಿಸಿರುವ ಇಸ್ರೋನಂಥ ಸಂಸ್ಥೆ ಈ ಮಟ್ಟಕ್ಕಿಳಿಯುತ್ತದೆಂದು ಯಾರೂ ರೀಕ್ಷಿಸಿರಲಿಲ್ಲ. ಬಾಹ್ಯಾಕಾಶ ತಂತ್ರಜ್ಞಾನ ಹೇಗೂ ಎಲ್ಲರಿಗೂ ಗೊತ್ತಿಲ್ಲ. ಆದ್ದರಿಂದ ದಕ್ಕೆ ಸಂಬಂಧಿಸಿದ ಅವ್ಯವಹಾರವೂ ಅರ್ಥವಾಗುವುದಿಲ್ಲ ಎಂಬುದು ಈ ಹಾನುಭಾವರ ತರ್ಕವಾಗಿದ್ದಿರಬೇಕು. ಹಾಡುಹಗಲೆ ಇಂಥಾ ನಾಚಿಕೆಗೇಡಿನ ಂಧೆಗಿಳಿದ ವಿಜ್ಞಾನಿ ಮಹಾಶಯರ ಅಪಾರ ಜ್ಞಾನಮತ್ತೆಗೆ ಯಾರಾದರೂ ಲೆದೂಗಲೇಬೇಕು.

ಈ ಎಲ್ಲಾ ಅವಾಂತರಗಳು ಹೊರಬಿದ್ದು ವಿರೋಧ ಪಕ್ಷಗಳ ಮತ್ತು ಮಾಧ್ಯಮಗಳ ವ್ಯಾಪಕ ಟೀಕೆಗೆ ಗುರಿಯಾದ ನಂತರ ಸದಾ ಸಮಾಧಾನ ಚಿತ್ತರಾಗಿರುವ ನಮ್ಮ ಮುತ್ಸದ್ದಿ ಪ್ರಧಾನಿಯವರು ಎಂದಿನಂತೆ ಸಾವಕಾಶವಾಗಿ ಣ್ಣುತೆರೆದು ಕೆಲವು ಕ್ರಮಗಳಿಗೆ ಮುಂದಾಗಿದ್ದಾರೆ. ಅದರ ಭಾಗವಾಗಿ ದ್ಮವಿಭೂಷಣ ಡಾ.ಮಾಧವನ್ ನಾಯರ್ ಮತ್ತು ಇತರ ಮೂವರು ಜ್ಞಾನಿಗಳನ್ನು ಸರ್ಕಾರಿ ಹುದ್ದೆ, ಸಲಹಾ ಮಂಡಳಿ, ಆಯೋಗ ಇನ್ನಿತರ ಯಾವುದೇ ುದ್ದೆಗಳ ಹತ್ತಿರ ಸುಳಿಯದಂತೆ ನಿಷೇಧಾಜ್ಞೆ ಹೊರಡಿಸಲಾಗಿದೆ. ಈ ಆದೇಶ ಹೊರಬಿದ್ದಿದ್ದು ತೀರಾ ಇತ್ತೀಚೆಗೆ, ಇದೇ ಜನವರಿ 13ರಂದು. ಇದರ ಭಾಗವಾಗಿ ಸ್ರೋ ಸಂಸ್ಥೆಯ ಹಾಲಿ ಅಧ್ಯಕ್ಷರಾಗಿರುವ ಡಾ.ಕೆ.ರಾಧಾಕೃಷ್ಣನ್ ಸಹ ದೇವಾಸ್ ಒಪ್ಪಂದದಲ್ಲಿರುವ ಸಮಸ್ಯೆಗಳ ಬಗ್ಗೆ ಬಹಿರಂಗವಾಗಿ ಟೀಕೆ ಮಾಡಿದ್ದಾರೆ.

ಈಗ ಈ ಬಗ್ಗೆ ಆರೋಪ - ಪ್ರತ್ಯಾರೋಪಗಳ ಜಂಗಿ ಕುಸ್ತಿ ನಡೆಯುತ್ತಿದೆ. ತಮ್ಮನ್ನು ಟೀಕಿಸಿದ "ಇಸ್ರೋನ ಹಾಲಿ ಅಧ್ಯಕ್ಷ ರಾಧಾಕೃಷ್ಣನ್ ಅವರಿಗೆ ಈ ತಂತ್ರಜ್ಞಾನದ ಬಗ್ಗೆ ಏನೇನೂ ಗೊತ್ತಿಲ್ಲ" ಎಂದು ಕನಿಷ್ಠ ಸ್ಯಾಟಲೈಟ್ ಮತ್ತು ಟ್ರಾನ್ಸ್‌ಪಾಂಡರ್‌ಗಳ ನಡುವಿನ ವ್ಯತ್ಯಾಸವೂ ಗೊತ್ತಿಲ್ಲ."ವೆಂದು ಪದ್ಮವಿಭೂಷಣ ನಾಯರ್ ಅವರು ಕೆಂಡಕಾರಿದ್ದಾರೆ. ಆದರೆ ತಾವು ಅಧಿಕಾರದಿಂದ ನಿರ್ಗಮಿಸಿದಾಗ ಇಂಥ "ಅಜ್ಞಾನಿ"ಗೆ ಅಧಿಕಾರ ಯಾಕೆ ಹಸ್ತಾಂತರಿಸಿದರು? ಹೋಗಲಿ, ಸುಮಾರು ಏರು ವರ್ಷಗಳ ಕಾಲ ಆ ಬಗ್ಗೆ ಯಾಕೆ ಬಾಯಿಮುಚ್ಚಿ ಕೂತಿದ್ದರು? ತಮ್ಮ ಅವ್ಯವಹಾರ ಬಯಲಾಗದಂತೆ ತಡೆಯಲಿಕ್ಕಾಗಿಯೇ, ತಮ್ಮ ಟೀಕಾಕಾರರ ಬಾಯಿ ಮುಚ್ಚಿಸಲು ಇಂಥ ದಾಳಿಗೆ ಇಳಿದಿದ್ದಾರೆಂಬುದು ಪಾಮರರಿಗೂ ಸುಲಭವಾಗಿ ಹೊಳೆಯುವ ತರ್ಕ. ಇವರು ಪ್ರಧಾನಿಗೆ ಒಡ್ಡಿದ ಸವಾಲನ್ನು ಕೂಡ ನಾವು ಇದೇ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು. ಮಾಧವನ್ ನಾಯರ್ ಮತ್ತು ಸಂಗಡಿಗರ ಈ ತಂತ್ರವನ್ನು ಅರ್ಥಮಾಡಿಕೊಳ್ಳಲು ಖಗೋಳ ಶಾಸ್ತ್ರ ತಿಳಿದಿರಬೇಕಿಲ್ಲ, ಕೇವಲ ಸಾಮಾನ್ಯ ಜ್ಞಾನವಿದ್ದರೆ ಸಾಕಾಗುತ್ತದೆ.

"ನನ್ನ ಮರ್ಯಾದೆ ಹಾಳಾಗಿದೆ, ನನ್ನ ಹುದ್ದೆಯಲ್ಲಿ ನನ್ನನ್ನು ಮುಂದುವರೆಸಿದರಷ್ಟೆ ಸಾಲದು, ನನ್ನಲ್ಲಿ ಕ್ಷಮಾಪಣೆ ಕೇಳಬೇಕು", "ಈ ಸುದ್ದಿ ತಿಳಿದಾಗಿನಿಂದ ನನಗೆ ನಿದ್ದೆಯೇ ಬರುತ್ತಿಲ್ಲ, ನನ್ನ ವಿಶ್ರಾಂತ ಜೀವನದ ನೆಮ್ಮದಿ ಹಾಳಾಗಿದೆ", "37 ವರ್ಷಗಳ ಕಾಲ ದೇಶಕ್ಕೋಸ್ಕರ ದುಡಿದಿದ್ದೇನೆ." ಮುಂತಾಗಿ ಮಾಧ್ಯಮಗಳ ಮೂಲಕ ನಿತ್ಯವೂ ಈ ಆರೋಪಿಗಳು ಪ್ರಲಾಪಿಸುತ್ತಿದ್ದಾರೆ. ಈ ಎಮೋಷನಲ್ ಬ್ಲಾಕ್‌ಮೇಲ್ ತಂತ್ರಕ್ಕೆ ಬಹಳಷ್ಟು ಜನರು ಮರುಳಾಗುತ್ತಲೂ ಇದ್ದಾರೆ.

ಆದರೆ ಒಂದು ಸರಳ ಸತ್ಯವನ್ನು ನಾವು ಮರೆತುಬಿಡಬಾರದು. ಒಬ್ಬ ವ್ಯಕ್ತಿ ಅದೆಷ್ಟೇ ದೊಡ್ಡವನಿದ್ದರೂ ದೇಶ ಅವರಿಗಿಂತ ಬಹಳ ದೊಡ್ಡದು. ಒಬ್ಬ ಮನುಷ್ಯನ ಮರ್ಯಾದೆ ರಕ್ಷಿಸಲು ದೇಶದ ಬೊಕ್ಕಸಕ್ಕೆ ಲಕ್ಷಾಂತರ ಕೋಟಿಗಳನ್ನು ನಷ್ಟಮಾಡಿ ಕೊಳ್ಳಬೇಕು ಎಂಬ ವಾದಗಳಿಗೆ ನಾವು ಕಿಮ್ಮತ್ತು ನೀಡಬೇಕಿಲ್ಲ. ಅಷ್ಟೊಂದು ಭಾರೀ ಮೊತ್ತ ಸರ್ಕಾರಕ್ಕೆ ದಕ್ಕುವುದಾದರೆ ಆತ್ಮಹತ್ಯೆಯ ಹಾದಿಯಲ್ಲಿರುವ ಈ ದೇಶದ ಕೋಟ್ಯಾನುಕೋಟಿ ರೈತರನ್ನು ಸಾಲದ ಸುಳಿಯಿಂದ ಬಿಡಿಸಬಹುದು. ಕೋಟ್ಯಾಂತರ ಭಾರತೀಯರ ಬದುಕನ್ನು ಹಸನುಮಾಡುವಂಥ ಯೋಜನೆಗಳನ್ನು ರೂಪಿಸಬಹುದು. ಕೆಲವರ "ಮರ್ಯಾದೆ"ಗಿಂತ ಕೋಟ್ಯಾನುಕೋಟಿ ಪ್ರಜೆಗಳ ಬದುಕು ಹಸನಾಗುವುದು ಮುಖ್ಯ ತಾನೆ? ಆದ್ದರಿಂದ ತನಿಖೆ ನಿಷ್ಪಕ್ಷಪಾತವಾಗಿ ನಡೆಯಲಿ ಎಂಬುದೇ ನಮ್ಮೆಲ್ಲರ ಆಗ್ರಹ.

ಸತ್ತ ಮಗಳ ಫೋಟೋವನ್ನೇ ದಂಧೆಗೆ ಬಳಸಿದ ಫರ್‌ವಾಲಿ ಸರೋಜಾ


ಸರೋಜಾ ಮತ್ತು ಕೃಷ್ಣಮೂರ್ತಿ

ಮಗಳು ಸತ್ತು ಹತ್ತು ವರ್ಷಗಳೇ ಆಗಿದ್ದರೂ ಆಕೆ ಇನ್ನೂ ತನ್ನ ತಂದೆ ತಾಯಿಯ ಕೆಟ್ಟ ದಂಧೆಗೆ 'ಪ್ರಯೋಜನ' ಆಗುತ್ತಿದ್ದ ಅಪರೂಪದ ಕಥೆಯಿದು.

ಆ ಹುಡುಗಿಯ ಹೆಸರು ಸ್ಪರ್ಶಾ.

ಕನ್ನಡದ ಸುಮಾರು ಇಪ್ಪತ್ತು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಸ್ಪರ್ಶಾ ನಟಿಸಿದ್ದಳು. ಆದರೆ ಆಕೆಯನ್ನು ಹೇಗಾದರೂ ಮಾಡಿ ನಾಯಕ ನಟಿಯನ್ನಾಗಿಸಬೇಕು ಎಂಬುದು ಆಕೆಯ ತಾಯಿಯ ಸರೋಜಾಳ ಹಟ. ಆ ನಿಟ್ಟಿನಲ್ಲಿ ತನ್ನ ಮಗಳನ್ನು ಕರೆದುಕೊಂಡು ಗಾಂಧಿನಗರದ ಹತ್ತು ಹಲವು ನಿರ್ದೇಶಕರ ಮನೆಬಾಗಿಲು ತಟ್ಟಿಬಂದಿದ್ದಳು. ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಹೀಗಿದ್ದಾಗ ಒಮ್ಮೆ ಸ್ಪರ್ಶಾ ಅವಕಾಶವನ್ನು ಅರಸಿ ಚೆನ್ನೈಗೆ ಹೋದಳು. ಆದರೆ ಆಕೆ ಅಲ್ಲಿಂದ ಬೆಂಗಳೂರಿಗೆ ವಾಪಸ್ ಬರಲೇ ಇಲ್ಲ. ಸುಮಾರು ಒಂದು ದಶಕದ ಹಿಂದೆಯೇ ರಸ್ತೆ ಅಪಘಾತದಲ್ಲಿ ಸ್ಪರ್ಶಾ ಕೊನೆಯುಸಿರೆಳೆದಳು.

ಸುಂದರವಾಗಿದ್ದ ಮಗಳು ಪ್ರಾಣಬಿಟ್ಟ ಮೇಲೆ ಆಕೆಯ ತಾಯಿ ಸರೋಜಾ ಮತ್ತು ತಂದೆ ಕೃಷ್ಣಮೂರ್ತಿ ಸ್ಪರ್ಶಾಳ ಒಂದು ಫೋಟೋವನ್ನೇ ಬಂಡವಾಳ ಮಾಡಿಕೊಂಡರು. ಅದೂ ಯಾವ ಕೆಲಸಕ್ಕೆ ಅಂತೀರಾ? ಶುದ್ಧಾನುಶುದ್ಧ ವೇಶ್ಯಾವಾಟಿಕೆಗೆ.

ಹೌದು. ಇತ್ತೀಚೆಗಷ್ಟೇ ಬೆಂಗಳೂರು ಸಿಸಿಬಿ ಪೊಲೀಸರಿಗೆ ಸಿಕ್ಕಿಬಿದ್ದ ಸರೋಜಾ ಮತ್ತು ಕೃಷ್ಣಮೂರ್ತಿ ಆಕರ್ಷಕವಾಗಿದ್ದ ತಮ್ಮ ದಿವಂಗತ ಮಗಳ ಫೋಟೋವನ್ನು ಗಿರಾಕಿಗಳಿಗೆ ತೋರಿಸಿ ಬಿಜಿನೆಸ್ಸು ಕುದುರಿಸುತ್ತಿದ್ದದ್ದು ಗೊತ್ತಾಗಿದೆ.

ಸರೋಜಾ ಎಂಬ ನಟೋರಿಯಸ್ ಹೆಂಗಸು

ಈ ಸರೋಜಾ ಪಕ್ಕಾ ನಟೋರಿಯಸ್ ಹೆಂಗಸು. ತನ್ನ ಮಗಳು ಸ್ಪರ್ಶಾ ಸತ್ತ ಮೇಲೆ ಈಕೆ ಕಿರುತೆರೆಗೆ ಮತ್ತು ಹಿರಿತೆರೆಗೆ ಜೂನಿಯರ್ ಆರ್ಟಿಸ್ಟ್‌ಗಳನ್ನು ಸಪ್ಲೈ ಮಾಡುವ ಕಾಯಕ ಆರಂಭಿಸಿದಳು. ಜೊತೆಗೆ ಸರೋಜಾ ಕೂಡಾ ಹಲವು ಕನ್ನಡ ಚಿತ್ರಗಳಲ್ಲಿ ಸಣ್ಣಪುಟ್ಟ ಪತ್ರಗಳಲ್ಲಿ ನಟಿಸಿದ್ದಾಳೆ. ಉದಾಹರಣೆಗೆ ಸುದೀಪ್ ನಟಿಸಿದ್ದ 'ಮುಸ್ಸಂಜೆ ಮಾತು' ಚಿತ್ರದಲ್ಲಿ ಹೀರೋ ಹಿಂದೆ ಹಾಡು ಹೇಳಿಕೊಂಡು ತಿರುಗುವ ಪಾತ್ರದಲ್ಲಿ ಸರೋಜ ಕಾಣಿಸಿಕೊಂಡಿದ್ದಳು.


ಸಿಕ್ಕಿ ಬಿದ್ದಿರುವ ಅನಿತಾ ಮತ್ತು ದೀಕ್ಷಿತಾ

ಆದರೆ ನಟನೆಯಿಂದ, ಜೂನಿಯರ್ ಆರ್ಟಿಸ್ಟ್‌ಗಳನ್ನು ಸಪ್ಲೈ ಮಾಡುವುದರಿಂದ ಸರೋಜಾಳಿಗೆ ಬೇಕಾದಷ್ಟು ಹಣ ಹುಟ್ಟುತ್ತಿರಲಿಲ್ಲ. ಆಕೆ ಮತ್ತು ಆಕೆಯ ಗಂಡ ಕೈಹಾಕಿದ್ದೇ ವೇಶ್ಯಾವಾಟಿಕೆ ದಂಧೆಗೆ. ಎಚ್‌ಎಸ್‌ಆರ್ ಲೇಔಟಿನಲ್ಲಿನ ಬಾಡಿಗೆ ಮನೆಯಲ್ಲಿ ಸರೋಜ ಮತ್ತು ಆಕೆಯ ಗಂಡ ಕೃಷ್ಣಮೂರ್ತಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದಾರೆ ಎಂಬ ವಿಚಾರ ಮಡಿವಾಳ, ಮೈಕೋ ಲೇಔಟ್ ಪೊಲೀಸರು ಸೇರಿದಂತೆ ಅಕ್ಕಪಕ್ಕದ ಎಲ್ಲ ಪೊಲೀಸ್ ಠಾಣೆಯ ಅಧಿಕಾರಿಗಳಿಗೆ ಗೊತ್ತಿಲ್ಲದ ವಿಚಾರವೇನೂ ಆಗಿರಲಿಲ್ಲ. ಆದರೆ ಬಹಳಷ್ಟು ಪೊಲೀಸರು ಸರೋಜಳಿಂದ ಮಾಮೂಲು ಪಡೆದು ಸುಮ್ಮನಾಗಿದ್ದರು. ಹೀಗೆ ಪೊಲೀಸರ 'ರಕ್ಷಣೆ' ಪಡೆದ ಸರೋಜ ಎಚ್‌ಎಸ್‌ಆರ್ ಲೇಔಟ್‌ನಿಂದ ಗಾಂಧಿನಗರದ ತನಕ ತನ್ನ ದಂಧೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದಳು. ಅಧಿಕಾರಿಗಳಿಗೆ ಮತ್ತು ರಾಜಕಾರಣಿಗಳಿಗೆ ಹುಡುಗಿಯರನ್ನು ಒದಗಿಸುವ ಕಾಯಕದಿಂದಲೇ ಗಳಿಸಿದ ಹಣದಿಂದ ಸರೋಜ ಬಿಟಿಎಂ ಬಡಾವಣೆಯಲ್ಲಿ ಮೂರಂತಸ್ತಿನ ಮನೆ ಕಟ್ಟಿಸಿದ್ದಾಳೆ.

ಮಕ್ಕಳನ್ನೇ ಬಲಿ ಪಡೆದ ದಂಧೆ

ಈ ಕೊಳಕು ದಂಧೆಯಿಂದ ಸರೋಜಾ ಆಸ್ತಿಪಾಸ್ತಿಗಳನ್ನು ಗಳಿಸಿದ್ದಿರಬಹುದು. ಆದರೆ ಆ ದಂಧೆಯಿಂದ ಆಕೆ ಹೆತ್ತ ಮಕ್ಕಳನ್ನೇ ಕಳೆದುಕೊಂಡಿದ್ದಾಳೆ.

ಈಕೆಯ ಹಿರಿಯ ಮಗ ಐದು ವರ್ಷಗಳ ಹಿಂದೆ ನಿಗೂಢವಾಗಿ ಸಾವನ್ನಪ್ಪಿದ್ದ. ಕಿರಿಯ ಮಗ ಹೈಕೋರ್ಟ್‌ನಲ್ಲಿ ಅಟೆಂಡರ್ ಆಗಿದ್ದ. ವರದಕ್ಷಿಣೆ ಆಸೆಗಾಗಿ ಸರೋಜ ಮತ್ತು ಕೃಷ್ಣಮೂರ್ತಿ ತಮ್ಮ ಚಿಕ್ಕಮಗನಿಗೆ ಬರೋಬ್ಬರಿ ಮೂರು ಮದುವೆ ಮಾಡಿಸಿದ್ದರು. ತಂದೆತಾಯಿಯ ದಂಧೆಯನ್ನು ಕಣ್ಣಾರೆ ಕಂಡು ರೋಸತ್ತು ಹೋಗಿದ್ದ ಆತ ಐದು ತಿಂಗಳ ಹಿಂದಷ್ಟೇ ಗಾಜು ಪುಡಿ ಮಾಡಿ ಕುಡಿದು ಪ್ರಾಣ ಬಿಟ್ಟ. ಆತನ ಮೂರನೇ ಪತ್ನಿ ಭಾಗ್ಯ ಈಗ ಎಲೆಕ್ಟ್ರಾನಿಕ್ ಸಿಟಿಯ ಗೋವಿಂದ ಶೆಟ್ಟಿ ಪಾಳ್ಯದಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿದ್ದಾಳೆ.

ನಟಿ ಎಂದರೆ ಬೆಲೆ ಜಾಸ್ತಿ

ಬೆಂಗಳೂರಿನಲ್ಲಿ ಸರೋಜಳಂತಹವರು ನಡೆಸುವ ದಂಧೆಯಲ್ಲಿ ಸಿನಿಮಾ ಹಾಗೂ ಧಾರಾವಾಹಿ ನಟಿಯರಿಗೆ ಇನ್ನಿಲ್ಲದ ಬೇಡಿಕೆ. ಅದೇನು ವಿಕೃತವೋ ಗೊತ್ತಿಲ್ಲ, ಕೆಲ ಶ್ರೀಮಂತ ಶೋಕಿವಾಲರಿಗೆ ಪರದೆಯ ಮೇಲೆ ಕಾಣಿಸಿಕೊಳ್ಳುವ ನಟಿಯರೊಂದಿಗೆ ಕಾಲಕಳೆಯಬೇಕೆಂಬ ಚಪಲ. ಅದಕ್ಕೆಂದು ಅವರು ಕೈತುಂಬ ಕಾಸು ಕೊಡುತ್ತಾರೆ. ಸುಲಭವಾಗಿ ಹಣಗಳಿಸುವ ಆಸೆಯಿಂದ ಒಂದಷ್ಟು ಮಾಜಿ ಮತ್ತು ಹಾಲಿ ಮಹಿಳಾ ಕಲಾವಿದೆಯರು ಚರ್ಮೋದ್ಯಮದಲ್ಲಿ ಸಕ್ರಿಯರಾಗಿದ್ದಾರೆ. ಕಳೆದ ವರ್ಷ ಇಂತಹದ್ದೇ ದಂಧೆಯಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದ ಯಮುನಾ ಎಂಬ ನಟಿ ಇಂತಹ ಒಂದು ದುಷ್ಟ ಬೆಳವಣಿಗೆಗೆ ಸಾಕ್ಷಿ...

ಸದ್ಯ ಕಿರುತೆರೆಯಲ್ಲಿ ನಟಿಸುವ ಸಣ್ಣಪುಟ್ಟ ನಟಿಯರು ದಿನಕ್ಕೆ ಐನೂರರಿಂದ ಸಾವಿರದೈನೂರು ರೂಪಾಯಿಗಳ ತನಕ ಸಂಭಾವನೆ ಪಡೆಯುತ್ತಾರೆ. ಆದರೆ ಒಮ್ಮೆ ಮುಖಕ್ಕೆ ಬಣ್ಣ ಹಚ್ಚಿದ ಮೇಲೆ ಕೆಲ ಹುಡುಗಿಯರು ವಿಪರೀತ ಶೋಕಿಗೆ ಬೀಳುತ್ತಾರೆ. ಆರಂಭದಲ್ಲಿ ಬಸ್ಸು, ಆಟೋಗಳಲ್ಲಿ ಓಡಾಡುತ್ತಿದ್ದವರು ಬಹುಬೇಗ ವಿಲಾಸಿ ಕಾರುಗಳ ಮೊರೆ ಹೋಗುತ್ತಾರೆ. ಸಣ್ಣಪುಟ್ಟ ಮನೆಯಲ್ಲಿ ವಾಸಿಸುತ್ತಿದ್ದವರನ್ನು ಫ್ಲಾಟುಗಳು ಕೈಬೀಸಿ ಕರೆಯುತ್ತವೆ. ಕ್ರಮೇಣ ತಮ್ಮ ಐಶಾರಾಮಿ ಜೀವನಕ್ಕೆ ಬೇಕಾದಷ್ಟು ಹಣ ಗಳಿಸುವುದು ಕಷ್ಟವಾಗುತ್ತದೆ. ಆಗ ಅವರು ಈ ದಂಧೆಗೆ ಎಂಟ್ರಿ ಕೊಡುತ್ತಾರೆ. ನಟಿ ಎಂದು ಗಿರಾಕಿಗಳಲ್ಲಿ ಆಶೆ ಹುಟ್ಟಿಸಿ ಅವರಿಂದ ಇಪ್ಪತ್ತು ಮೂವತ್ತು ಸಾವಿರ ರೂಪಾಯಿಗಳನ್ನು ಪಡೆದು ಹುಡುಗಿಯರಿಗೆ ಐದೋ ಹತ್ತೋ ಸಾವಿರವನ್ನು ಕೊಡುವ ಸರೋಜಳಂತಹ ದುಷ್ಟರು ಬೆಂಗಳೂರಿನಲ್ಲಿ ಬೇಕಾದಷ್ಟು ಇದ್ದಾರೆ.

ಗಿರಾಕಿಗಳಿಗೆ ಸತ್ತ ಮಗಳ ಫೋಟೋ ತೋರಿಸುತ್ತಿದ್ದಳು


ಸರೋಜ ಇತರೆ ದಂಧೆಕೋರರಿಗಿಂತ ಅಸಹ್ಯ ಹಾದಿಯೊಂದನ್ನು ಹಿಡಿದಿದ್ದಳು. ಅದೇನೆಂದರೆ ನಟಿಯಾಗಿದ್ದ ತನ್ನ ಸುಂದರ ಮಗಳ ಫೋಟೋ ಅನ್ನು ಗಿರಾಕಿಗಳಿಗೆ ತೋರಿಸಿ ಆಕೆಯೊಂದಿಗೆ 'ಸೆಟ್ ಅಪ್' ಮಾಡುವುದಾಗಿ ಗಿರಾಕಿಗಳನ್ನು ನಂಬಿಸುತ್ತಿದ್ದಳು. ಅವರು ಕೂಡ ಸ್ಪರ್ಶಾಳ ಸೌಂದರ್ಯಕ್ಕೆ ಮಾರುಹೋಗಿ ಒಪ್ಪುತ್ತಿದ್ದರು.

ಆದರೆ ಗಿರಾಕಿಗಳಿಗೆ ಸ್ಪರ್ಶಾಳ ಬದಲಿಗೆ ಬೇರೆ ಹುಡುಗಿಯರನ್ನು ಸರೋಜ ಸರಬರಾಜು ಮಾಡುತ್ತಿದ್ದಳು. "ಅರೆ, ಈಕೆ ಫೋಟೋದಲ್ಲಿದ್ದ ಹುಡುಗಿ ಅಲ್ಲ, ಆಕೆ ಎಲ್ಲಿ" ಎಂದು ಗಿರಾಕಿ ಕೇಳಿದರೆ "ಆಕೆ ಈಗ ಬೇರೆಯವರೊಂದಿಗೆ ಬ್ಯುಸಿ ಆಗಿದ್ದಾಳೆ. ಇವಳೂ ಟಿವಿ ನಟಿ" ಎಂದು ಹೇಳುತ್ತಿದ್ದಳು. ವಿಧಿ ಇಲ್ಲದೆಯೋ, ತಾವು ಯಾಮಾರಿದ್ದೇವೆ ಎಂದು ಒಪ್ಪಿಕೊಳ್ಳಲಾರದೆಯೋ ಗಿರಾಕಿಗಳೂ ಸುಮ್ಮನಾಗುತ್ತಿದ್ದರು.

ವಾಸ್ತವವಾಗಿ ಮೊನ್ನೆ ಸರೋಜಳೊಂದಿಗೆ ಸಿಕ್ಕಿ ಬಿದ್ದಿರುವ ಅನಿತಾ ಮತ್ತು ದೀಕ್ಷಿತಾ ಎಂಬಿಬ್ಬರು ಹುಡುಗಿಯರು ಅಸಲಿಗೆ ನಟಿಯರೇ ಅಲ್ಲ. ಇಡೀ ಕಿರಿತೆರೆ ಲೋಕವನ್ನು ದುರ್ಬೀನು ಹಾಕಿ ಹುಡುಕಿದರೂ ಇವರಿಬ್ಬರನ್ನು ಕುರಿತು ಯಾವ ಮಾಹಿತಿಯೂ ಸಿಗುವುದಿಲ್ಲ. ಇವರ ಮುಖ ಪರಿಚಯವೂ ಯಾರಿಗೂ ಇಲ್ಲ.

ಎಂದೋ ಸತ್ತಿರುವ ಮುಗ್ಧ ಮಗಳ ಫೋಟೋವನ್ನೇ ವೇಶ್ಯಾವಾಟಿಕೆಗೆ ತಂದೆ-ತಾಯಿ ಬಳಸಿಕೊಳ್ಳುವುದು, ಇವರಿಬ್ಬರನ್ನು ನಂಬಿ ಸಾವಿರಾರು ರೂಪಾಯಿಗಳನ್ನು ಕೊಡಲು ಹಲವು ಪುರುಷರು ಸಿದ್ಧರಿರುವುದು... ಇವೆರಡೂ ನಮ್ಮ ಸಮಾಜ ಇವತ್ತು ಎಂತಹ ವಿಕೃತ ಮನುಷ್ಯರಿಂದ ಕೂಡಿದೆ ಎಂದು ಮತ್ತೊಮ್ಮೆ ತೋರಿಸುತ್ತಿದೆ....

• ಅರುಣ್



ನನ್ನ ದೀರ್ಘಾಯುಷ್ಯದ ಗುಟ್ಟು

ಆದಾಗಲೇ ನನಗೆ 98 ತುಂಬಿಯಾಗಿದೆ. ಈ ಮುದಿತನದಲ್ಲೂ ನಾನು ನನ್ನ ಯೌವ್ವನಕ್ಕಿಂತಲೂ ಹೆಚ್ಚು ದುಡಿಯುತ್ತಿರುವುದನ್ನ ಕಂಡ ಜನ ಇದನ್ನೆಲ್ಲ ನಾನು ಹೇಗೆ ನಿಭಾಯಿಸ್ತೇನೆ ಎಂದು ಕೇಳುವುದುಂಟು. ಅವರೆಲ್ಲರ ಪ್ರಕಾರ ನಾನು ದೀರ್ಘಾಯುಷ್ಯದ ಪರಿಣಿತ. ಅಂತವರಿಗೆ ಈ ವಿಚಾರವನ್ನು ನಾನು ಈಗಾಗಲೇ ಅನೇಕ ಬಾರಿ ಸ್ಪಷ್ಟಪಡಿಸಿ ಯಾಗಿದೆ, ಆದರೂ ಕಳೆದೆರಡು ವರ್ಷದಲ್ಲಿ ನಾ ಕಂಡ ಅನುಭವಗಳನ್ನು ಆಧರಿಸಿ ಒಂದೆರಡು ಸೂಕ್ತ ತಿದ್ದುಪಡಿ ಸಮೇತ ಮತ್ತದನ್ನೇ ಹೇಳುವೆನು.

ವ್ಯಕ್ತಿಯ ದೀರ್ಘಾಯುಷ್ಯ ಆತನ ಜೀನ್‌ನಲ್ಲಿಯೇ ಅಡಗಿರುತ್ತೆ ಎಂಬುದನ್ನು ನಾನು ಈಗಾಗಲೇ ಅನೇಕ ಬಾರಿ ಬರೆದಾಗಿದೆ. ಅಂದರೆ ದೀರ್ಘಾಯುಷ್ಯದ ಅಪ್ಪ ಅಮ್ಮಂದಿ ರಿಗೆ ಹುಟ್ಟುವ ಮಕ್ಕಳು ಅಲ್ಪಾಯುಷಿ ಪೋಷಕರ ಮಕ್ಕಳಿ ಗಿಂತ ಜಾಸ್ತಿಯೇ ಬದುಕುತ್ತಾರೆ. ಆದರಿದು ನನ್ನ ಕುಟುಂಬಕ್ಕೆ ಅನ್ವಯಿಸಲೇ ಇಲ್ಲ, ತಮ್ಮ 90, 94ನೇ ವಯಸ್ಸಿನಲ್ಲಿ ತೀರಿ ಕೊಂಡ ನನ್ನಪ್ಪ, ಅಮ್ಮನಿಗೆ ಐದು ಜನ ಮಕ್ಕಳು, ಅದರಲ್ಲಿ ನಾಲ್ಕು ಗಂಡು ಸಂತಾನವಾದರೆ ಒಬ್ಬಾಕೆ ಹೆಣ್ಣು ಮಗಳು.

ಅದರಲ್ಲಿ ಮೊದಲು ಹೊರಟಿದ್ದೇ ಕಟ್ಟ ಕಡೆಯ ತಮ್ಮ. ನಂತರ ಸತ್ತದ್ದು ನಾಲ್ಕನೆಯವಳಾಗಿದ್ದ ನನ್ನ ತಂಗಿ. ಕೆಲ ವರ್ಷಗಳ ಮುಂಚೆ ನನಗಿಂತ ಮೂರು ವರ್ಷ ದೊಡ್ಡವನಿದ್ದ ನನ್ನಣ್ಣನೂ ಸತ್ತು ಹೋದ. ಈಗಲೂ ಇರುವವರೆಂದರೆ 98ರಲ್ಲಿರುವ ನಾನು ಮತ್ತು ನನಗಿಂತ ಮೂರು ವರ್ಷ ಚಿಕ್ಕವನಾದ, ಉತ್ತಮ ಆರೋಗ್ಯದಿಂದಿರುವ ನನ್ನ ರಿಟೈರ್ಡ್ ಬ್ರಿಗೇಡಿಯರ್ ತಮ್ಮ. ಈಗಾತ ನಮ್ಮ ಪೂರ್ವಿಕರ ಆಸ್ತಿ ಯನ್ನು ನೋಡಿಕೊಂಡಿದ್ದಾನೆ. ಅದೇನೇ ಇರಲಿ, ವ್ಯಕ್ತಿಯ ಆಯುಷ್ಯವನ್ನು ನಿರ್ಧರಿಸುವಲ್ಲಿ ಜೀನ್ ಪ್ರಮುಖ ಅಂಶ ಎಂಬುದನ್ನು ಮಾತ್ರ ನಾನೀಗಲೂ ನಂಬುತ್ತೇನೆ.

ದಾರಿ ಹುಡುಕಿಕೊಳ್ಳಿ

ದೀರ್ಘಾಯುಷ್ಯವನ್ನು ಅಳೆದು ತೂಗುವುದಕ್ಕಿಂತ ವೃದ್ಧಾಪ್ಯದೊಂದಿಗೆ ಹೊಂದಿಕೊಳ್ಳುವುದು ಮತ್ತು ಅದರೊಂದಿಗೆ ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದೇ ಮುಖ್ಯ ನಮಗೆ ವಯಸ್ಸಾದಂತೆ ನಮ್ಮ ಕೈಕಾಲುಗಳಲ್ಲಿ ಶಕ್ತಿ ಕಡಿಮೆಯಾಗುತ್ತಾ ಹೋಗುತ್ತದೆ. ಅವನ್ನು ಲವಲವಿಕೆಯಿಂದಿಡಲು ನಾವೇ ಕೆಲವೊಂದು ದಾರಿ ಕಂಡುಕೊಳ್ಳಬೇಕಾಗುತ್ತೆ. ನನ್ನ ಎಂಬತ್ತನೇ ದಶಕದ ಮಧ್ಯದ ದಿನಗಳಲ್ಲಿ ಪ್ರತಿ ಬೆಳಗ್ಗೆ ಟೆನಿಸ್ ಆಡುತ್ತಿದ್ದೆ, ಚಳಿಗಾಲದಲ್ಲಿ ಲೋಧಿ ಗಾರ್ಡನ್‌ನಲ್ಲಿ ರೌಂಡ್ ಹಾಕಿ ಬರುತ್ತಿದ್ದೆ, ಬೇಸಿಗೆಯಲ್ಲಿ ಸ್ವಿಮ್ಮಿಂಗ್ ಪೂಲ್‌ನಲ್ಲಿ ಗಂಟೆಗಟ್ಟಲೆ ಕಳೆಯುತ್ತಿದ್ದೆ. ಆದರೀಗ ನನ್ನಿಂದ ಅವ್ಯಾವುವನ್ನು ಮಾಡಲಾಗುತ್ತಿಲ್ಲ.

ಒಂದು ರೀತಿಯ ಅಂಗವೈಕಲ್ಯದಂತಿರುವ ಈ ಊನತೆಯನ್ನು ಮೀರಲು ನಿಯಮಿತವಾದ ಮಸಾಜ್‌ಗಳೇ ಒಳ್ಳೆಯ ಮಾರ್ಗ. ಹತ್ತಾರು ಬಗೆಯ ಮಸಾಜ್‌ಗಳನ್ನು ನಾನು ಬಳಸಿ ನೋಡಿದ್ದೇನೆ, ಅವುಗಳಲ್ಲಿ ಆಯಿಲ್ ಡ್ರಿಪ್ ಮತ್ತು ಮೈಯಿಗೆ ಎಣ್ಣೆ ಮೆತ್ತಿಸಿಕೊಳ್ಳುವ ಮಸಾಜ್‌ಗಳು ನನಗಷ್ಟು ಸರಿ ಬಂದಿಲ್ಲ. ವ್ಯಕ್ತಿಯ ಶಿರದಿಂದ ಅಂಗುಷ್ಠದವರೆಗೆ ಇಡೀ ದೇಹದ ತುಂಬೆಲ್ಲ ಬಲಿಷ್ಠವಾದ ಕೈಗಳು ಹರಿದಾಡಿ ಬಂದರೆ ಮಾತ್ರ ಅದು ಬೆಸ್ಟ್ ಮಸಾಜ್ ಅನ್ನಿಸಿಕೊಳ್ಳುತ್ತೆ. ಇಂತಹ ಮಸಾಜ್ ಎಂದರೆ ನನಗಿಷ್ಟ. ಏನಿಲ್ಲವೆಂದರು ದಿನಕ್ಕೆ ಒಂದು, ಕೆಲವೊಮ್ಮೆ ದಿನಕ್ಕೆ ಎರಡು ಬಾರಿ ನಾನಿಂತ ಮಸಾಜ್ ಮಾಡಿಸಿಕೊಳ್ತೇನೆ. ಇದೇ ನನ್ನ ದೀರ್ಘಾಯುಷ್ಯಕ್ಕೆ ಕಾರಣ ಎಂಬ ನಂಬಿಕೆ ನನ್ನದು.

ಇಷ್ಟೇ ಮುಖ್ಯವಾದ ಇನ್ನೊಂದು ವಿಚಾರವೆಂದರೆ ನಮ್ಮ ಆಹಾರ ಮತ್ತು ಕುಡಿತಗಳನ್ನು ಪ್ರಚಂಡವಾಗಿ ಕಡಿತಗೊಳಿಸ ಬೇಕಾದ ಅವಶ್ಯಕತೆ. ನಾನು ನನ್ನ ಬೆಳಗನ್ನು ಆರಂಭಿಸುವುದೇ ಸೀಬೆಹಣ್ಣಿನ ಜ್ಯೂಸ್‌ನೊಂದಿಗೆ. ಕಿತ್ತಳೆ ಅಥವಾ ಮತ್ತಾವುದೇ ಹಣ್ಣಿನ ಜ್ಯೂಸ್‌ಗಿಂತ ಇದು ರುಚಿಯಾಗಿರುತ್ತೆ ಮಾತ್ರವಲ್ಲ ಆರೋಗ್ಯಕ್ಕೂ ಹೆಚ್ಚು ಉಪಯುಕ್ತ ಇನ್ನು ನನ್ನ ನಾಷ್ಟವೆಂದರೆ ಬ್ರೆಡ್ ಟೋಸ್ಟ್ ಮೇಲೆ ಮೊಟ್ಟೆಯಷ್ಟೆ. ಒಂದಷ್ಟು ಮೊಸರು ಇಲ್ಲವೇ ತರಕಾರಿಯೊಟ್ಟಿಗೆ ಪತ್ಲೀ ಕಿಚ್ರಿ ತಿಂದರೆ ನನ್ನ ಮಧ್ಯಾಹ್ನದ ಊಟವೂ ಮುಗಿದಂತೆ. ಮಧ್ಯಾಹ್ನದೊತ್ತು ಚಹಾ ಕುಡಿಯುವುದನ್ನಂತು ನಾನು ಬಿಟ್ಟಾಗಿದೆ, ಆದರೆ ಸಂಜೆಗೆ ಒಂದು ಪೆಗ್ ಸಿಂಗಲ್ ಮಾಲ್ಟ್ ವಿಸ್ಕಿ ಸೇವಿಸುವುದನ್ನು ಮರೆಯುವುದಿಲ್ಲ, ಯಾಕೆಂದರೆ ಇದು ನನಗೆ ಕಳ್ಳ ಹಸಿವನ್ನು ನೀಡುತ್ತೆ! ಇನ್ನು ರಾತ್ರಿ ಊಟಕ್ಕೆ ಕೂರುವುದಕ್ಕೂ ಮುನ್ನ 'ಅತಿಯಾಗಿ ತಿನ್ನಬೇಡ' ಎಂದು ನನಗೆ ನಾನೇ ಹೇಳಿಕೊಂಡು ಬಿಡುತ್ತೇನೆ.

ಅಸಲಿಗೆ ಊಟ ಅಂತಂದರೆ ಒಂದಷ್ಟು ತರಕಾರಿಯೋ, ಮಾಂಸವೋ ಮಾತ್ರ. ಕೊನೆಗೆ ಒಂದು ಚಿಟಿಕೆ ಚೂರನ್ (ದಾಳಿಂಬೆ ಬೀಜದಿಂದ ಮಾಡಿರುವಂತಹದ್ದು) ತಿನ್ನುತ್ತೇನೆ. ಏಕಾಂತದಲ್ಲಿ ಮಾತಿಲ್ಲದೆ ಮೌನವಾಗಿ ಊಟ ಮುಗಿಸುವುದೇ ಬೆಸ್ಟ್. ಊಟದ ನಡುವೆ ಮಾತನಾಡುವುದೆಂದರೆ ಅದು ಊಟಕ್ಕೆ ಗೌರವ ತೋರಿದಂತಾಗುವುದಿಲ್ಲ, ಮಾತ್ರವಲ್ಲ ಮಾತಿನ ಭರಾಟೆಯಲ್ಲಿ ಅರಿವಿಲ್ಲದಂತೆ ವಿಪರೀತ ತಿಂದು ಬಿಡುತ್ತೇವೆ. ನನಗೀಗ ಪಂಜಾಬಿ ಭೋಜನ ಒಗ್ಗುವುದಿಲ್ಲ ಹಾಗಾಗಿ ಅರಗಿಸಿಕೊಳ್ಳಲು ಸುಲಭವಾದ ಮತ್ತು ಆರೋಗ್ಯಕ್ಕೂ ಅನುಕೂಲವಾದ ಇಡ್ಲಿ ಸಾಂಬಾರ್, ಕಾಯಿ ಚಟ್ನಿ ತರಹದ ಸೌತ್ ಇಂಡಿಯನ್ ಆಹಾರಗಳನ್ನು ಕಂಡುಕೊಂಡಿದ್ದೇನೆ.

ಬಲವಂತವಾಗಿ ಮಲಮೂತ್ರಗಳನ್ನು ಯಾವತ್ತೂ ತಡೆ ಹಿಡಿಯುವುದಕ್ಕೋಗಬೇಡಿ. ಈ ಜಠರ ಎನ್ನುವುದು ಸರ್ವ ವ್ಯಾಧಿಗಳ ಉಗ್ರಾಣವಿದ್ದಂತೆ. ಜಡತೆಯ ಜೀವನದಿಂದಾಗಿ ನಾವಿಂದು ಮಲಬದ್ಧತೆಗೆ ತುತ್ತಾಗಬೇಕಿದೆ. ಲ್ಯಾಕ್ಸೇಟಿವ್, ಎನಿಮಾ, ಗ್ಲಿಸರೀನ್, ಸಪ್ಪೋಸಿಟರೀಸ್ ಹೀಗೆ ನಿಮಗೆ ಯಾವುದು ಲಭ್ಯವೋ ಅದರಿಂದ ನಿಮ್ಮ ಕರಳು ಮಾಲೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವ ಪ್ರಯತ್ನ ಮಾಡುವುದು ಒಳ್ಳೆಯದು. ಇದರ ಮಹತ್ವವನ್ನು ಬಾಪು ಗಾಂಧಿ ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಪ್ರತಿ ದಿನ ತಾನೇ ಸ್ವತಃ ಎನಿಮಾ ಮಾಡಿಸಿಕೊಳ್ಳುತ್ತಿದ್ದುದಲ್ಲದೆ, ತನ್ನ ಶಿಷ್ಯೆಯರಿಗೆ ಆತನೇ ಎನಿಮಾ ನೀಡುತ್ತಿದ್ದ.

ನಿಮ್ಮ ದಿನನಿತ್ಯದ ಜೀವನದಲ್ಲಿ ನಿಷ್ಠುರವಾದ ಶಿಸ್ತನ್ನು ಪಾಲಿಸುವುದೂ ಅಷ್ಟೇ ಮುಖ್ಯ. ಸಾಧ್ಯವಾದಲ್ಲಿ ಇದಕ್ಕೆಂದು ಒಂದು ಸ್ಟಾಪ್-ವಾಚ್ ಗೊತ್ತುಪಡಿಸಿಕೊಂಡರೂ ತಪ್ಪಿಲ್ಲ. ನಾನಂತು ಬೆಳಗ್ಗೆ ಆರು ಮೂವತ್ತಕ್ಕೆ ತಿಂಡಿ, ಮಧ್ಯಾಹ್ನ ಊಟ, ಸಂಜೆ ಏಳಕ್ಕೆ ಚೂರು ಡ್ರಿಂಕ್ಸ್, ರಾತ್ರಿ ಎಂಟಕ್ಕೆ ಊಟ ಎಂಬುದನ್ನು ಕರಾರುವಾಕ್ಕಾಗಿ ರೂಢಿಸಿಕೊಂಡಿದ್ದೇನೆ.

ಶಾಂತ ಚಿತ್ತದ ನೆಮ್ಮದಿಯ ಮನಸ್ಸು ನಿಮ್ಮದಾಗಿರಲಿ. ಇದು ನಿಮ್ಮದಾಗಬೇಕೆಂದರೆ ನಿಮ್ಮ ಬ್ಯಾಂಕ್ ಬ್ಯಾಲೆನ್ಸ್ ಗಟ್ಟಿಯಾಗಿರಬೇಕು. ಕಾಸು ಕಡಿಮೆಯಿದ್ದಷ್ಟು ನಮ್ಮ ವಿಶ್ವಾಸ, ಧೈರ್ಯಗಳೂ ಕಡಿಮೆಯಾಗುತ್ತವೆ. ಹಾಗಂತ ಅದೇನು ಕೋಟಿಗಟ್ಟಲೆಯ ನಿಧಿಯಾಗಿರಬೇಕೆಂದೇನು ಇಲ್ಲ, ನಮ್ಮ ಭವಿಷ್ಯದ ಅವಶ್ಯಕತೆಗಳನ್ನ, ಅಕಸ್ಮಾತ್ತಾಗಿ ಎರಗಬಹುದಾದ ಕಾಯಿಲೆಗಳನ್ನು ನಿಭಾಯಿಸುವಷ್ಟಿದ್ದರೂ ಸಾಕು. ಸುಖಾಸುಮ್ಮನೆ ನಮ್ಮ ತಾಳ್ಮೆಯನ್ನು ಕಳೆದುಕೊಳ್ಳಬಾರದು, ಯಾಕೆಂದರೆ ಅದಕ್ಕೆ ದುಬಾರಿ ಬೆಲೆಯನ್ನೇ ತೆರಬೇಕಾಗುತ್ತೆ ಮತ್ತು ನಮ್ಮ ನರಗಳನ್ನದು ಅನಗತ್ಯವಾಗಿ ಕೆರಳಿಸುತ್ತೆ. ಯಾವತ್ತಿಗೂ ಸುಳ್ಳು ಹೇಳದಿರುವುದು ಉತ್ತಮ. ಈ ನಿಟ್ಟನಲ್ಲಿ ಸತ್ಯಮೇವ ಜಯತೆ ಅರ್ಥಾತ್ ಸತ್ಯಕ್ಕೆ ಸದಾಕಾಲ ಜಯ ಎಂಬ ನಮ್ಮ ರಾಷ್ಟ್ರೀಯ ಧ್ಯೇಯ ನಿಮ್ಮ ನೆನಪಲ್ಲಿರಲಿ.

ನೀವು ಕೊಡುವುದನ್ನೆಲ್ಲ ವಿಶಾಲ ಮನಸ್ಸಿನಿಂದಲೇ ನೀಡಿ. ನಿಮ್ಮೊಟ್ಟಿಗೆ ನೀವು ಏನನ್ನೂ ತೆಗೆದುಕೊಂಡು ಹೋಗಲಾರಿರಿ ಎಂಬುದು ತಿಳಿದಿರಲಿ. ನಿನ್ನದನ್ನು ನಿನ್ನ ಮಕ್ಕಳಿಗೋ, ನಿನ್ನ ಸೇವಕರಿಗೋ ಅಥವಾ ಯಾವುದೇ ಸೇವಾಶ್ರಮಕ್ಕೋ ನೀಡಬಹುದು. ಆ ನಿನ್ನ ನೀಡುವಿಕೆ ಮನಸ್ಸಿಗೆ ನೆಮ್ಮದಿಯನ್ನು ನೀಡುತ್ತೆ, ಕೊಡುವುದರಲ್ಲೂ ಒಂದು ತೆರನಾದ ಖುಷಿಯಿರುತ್ತೆ.

ಜೀವನದಲ್ಲಿ ನಿನಗಿಂತ ಉತ್ತಮ ಸ್ಥಿತಿಯಲ್ಲಿರು ವವರನ್ನು ಕಂಡು ಕರುಬುವ ಗುಣದಿಂದ ಮೊದಲು ನೀ ಹೊರಗೆ ಬಾ. ಪಂಜಾಬಿಯಲ್ಲಿ ಹೀಗೊಂದು ದೋಹಾವಿದೆ;

> ರೂಖಿ ಸೂಖಿ ಖಾಯ್ ಕೇ ತಂಡಾ ಪಾನಿ
> ಪೀ/ನಾ ವೇಖ್, ಪರಾಯೀ ಚೋಪ್‌ಪರಿಯಾನ್
> ನಾ ತರ್ಸ್ಯೆನ್ ಜೀ.
>
> ಇದರರ್ಥ, ನೀನು ಒಣಗಿದ ರೋಟಿ ತಿನ್ನು ಅಥವಾ ತಣ್ಣೀರನ್ನು ಕುಡಿ. ಆದರೆ ತಮ್ಮ ಚಪಾತಿಯನ್ನು ತುಪ್ಪದೊಂದಿಗೆ ನೆಂಚಿಕೊಂಡು ತಿನ್ನುವವರನ್ನು ಕಂಡು ಕರುಬದಿರು.

ಜಪದಲ್ಲೋ ಆರಾಧನೆಯಲ್ಲೋ ತಮ್ಮ ಸಮಯವನ್ನು ಸಾಯಿಸಿಕೊಳ್ಳುವ ಬಹುಪಾಲು ಮುದಿಜೀವಿಗಳ ಸಂಪ್ರದಾಯವನ್ನು ಮಾತ್ರ ಪಾಲಿಸಲೇಬೇಡಿ. ವೃದ್ಧಾಪ್ಯವನ್ನು ಸೋಲೆಂದು ಭಾವಿಸಿ, ಆ ಸೋಲನ್ನು ಒಪ್ಪಿಕೊಂಡಂತಿರುತ್ತದೆ ಆ ಸಂಪ್ರದಾಯ. ಅದರ ಬದಲು ನಿಮ್ಮ ಮನೆ ಮುಂದಿನ ಕೈತೋಟದಲ್ಲಿ ಸಮಯ ಕಳೆಯುವ, ಬೋನ್ಸಾಯ್ ಗಿಡಗಳ ಪಾಲನೆ ಮಾಡುವ, ನಿಮ್ಮ ನೆರೆಯವರ ಮಕ್ಕಳ ಹೋಮ್‌ವರ್ಕ್ ಮಾಡಿಸುವಂತಹ ಹವ್ಯಾಸಗಳನ್ನು ನಿಮ್ಮದಾಗಿಸಿಕೊಳ್ಳಿ.

ನಾ ಕಂಡುಕೊಂಡ ಬಲು ಪರಿಣಾಮಕಾರಿ ಐಡಿಯಾವೊಂದಿದೆ. ಗೊಂದಲ ತಾಕಲಾಟಗಳಿಂದ ಮುಕ್ತವಾದ ಮನಸ್ಸಿನಲ್ಲಿ ಓಂ ಶಾಂತಿ, ಓಂ ಶಾಂತಿ, ಓಂ ಶಾಂತಿ ಮಂತ್ರ ವನ್ನು ಪುನರಾವರ್ತಿಸುತ್ತ ನನ್ನ ದೃಷ್ಟಿಯನ್ನು ದೀಪದ ಮಂದ ಜ್ವಾಲೆಯ ಮೇಲೆ ನೆಟ್ಟು ಕೂತುಬಿಡುತ್ತೇನೆ. ಇದು ನಿಜಕ್ಕೂ ಕೆಲಸ ಮಾಡಿದೆ. ನಾನೀಗ ಜನರೊಂದಿಗೆ ಶಾಂತಿ ಯಿಂದ ವ್ಯವಹರಿಸುವುದನ್ನು ಕಲಿತುಕೊಂಡಿದ್ದೇನೆ. ಪ್ರತಿಯೊಬ್ಬರೂ, ಈಗಲೂ ಮ್ಯಾರಾಥಾನ್ ಓಡುವ ಶತಾಯುಷಿ ಫೌಜಾ ಸಿಂಗ್ ಆಗಲು ಸಾಧ್ಯವಿಲ್ಲ, ಆದರೆ ದೀರ್ಘಾಯುಷ್ಯ ಕ್ರಿಯಾಶೀಲತೆಯಲ್ಲಿ ನಾವೆಲ್ಲ ಆತನಿಗೆ ಸಾಟಿಯಾಗಿ ನಿಲ್ಲಬಹುದು. ನನ್ನೆಲ್ಲ ಓದುಗರಿಗೆ ಸಂತಸ ತುಂಬಿದ ಆರೋಗ್ಯವಂತ ಬದುಕು ಲಭಿಸಲೆಂದು ಆಶಿಸುತ್ತೇನೆ.

•ಖುಷ್ವಂತ್ ಸಿಂಗ್

ಕೃಪೆ : ಹಿಂದೂಸ್ಥಾನ್ ಟೈಮ್ಸ್
ಕನ್ನಡಕ್ಕೆ : ಗಿರೀಶ್ ತಾಳಿಕಟ್ಟೆ

ಹುಬ್ಬಳ್ಳಿ 'ಅನಾಥಾಲಯ' ಕಬಳಿಸಿದ ಬಿಜೆಪಿ ಕಳ್ಳರು

ರಾಜ್ಯ ಬಿಜೆಪಿಯ ಶಾಸಕ-ಮಂತ್ರಿಗಳ ಭೂಕಬಳಿಕೆಯ ಕತೆಗಳಲ್ಲಾ ಈಗಾಗಲೇ ಜನಜನಿತವಾಗಿದೆ. ಅದರ ಮುಂದುವರೆದ ಭಾಗವಾಗಿ ಈ ಭೂಗಳ್ಳರೆಲ್ಲಾ ಸೇರಿಕೊಂಡು ತಮ್ಮ ಬಿಜೆಪಿ ಪಾರ್ಟಿಗೆ ಸಿಕ್ಕ ಸಿಕ್ಕಲ್ಲಿ ಆಫೀಸಿಗೆಂದು ಜಾಗ ಕಬಳಿಸಲು ಶುರು ಮಾಡಿದ್ದಾರೆ.


ಹುಬ್ಬಳ್ಳಿಯಲ್ಲೀಗ ಅಂಥದೊಂದು ಪ್ರಕರಣ ನಡೆದಿದೆ. ಈ ನಕಲಿ ದೇಶಭಕ್ತರು ಈ ಬಾರಿ ನಿರ್ಗತಿಕರಿಗೆ, ಅನಾಥರಿಗೆಂದು ಮೀಸಲಿಟ್ಟಿದ್ದ ದೊಡ್ಡ ಜಾಗವನ್ನೇ ನುಂಗಲು ಹೊರಟಿದ್ದಾರೆ.

ಕಳೆದ ವಾರ ಹುಬ್ಬಳ್ಳಿ ಮಹಾನಗರ ಪಾಲಿಕೆಯ ಮೀಟಿಂಗ್ ನಡೆಯುತ್ತಿದ್ದಾಗ ಮೇಯರ್ ಪೂರ್ಣ ಸುಧೀರ್ ಪಾಟೀಲ್ ಏಕಾಏಕಿ 500 ಚದರ ಮೀಟರ್ ವಿಸ್ತೀರ್ಣದ ಈ ಜಾಗವನ್ನು ಹುಬ್ಬಳ್ಳಿಯ ಜಿಲ್ಲಾ ಬಿಜೆಪಿ ಪಕ್ಷದ ಕಚೇರಿ ನಿರ್ಮಾಣಕ್ಕೆಂದು ಮಂಜೂರು ಮಾಡಿದ್ದೇನೆಂದು ಘೋಷಿಸಿ ತಕ್ಷಣ ಸೀಟ್ ಬಿಟ್ಟು ಪರಾರಿಯಾಗಿದ್ದಾಳೆ. ವಿರೋಧ ಪಕ್ಷದ ಕಾರ್ಪೊರೇಟರ್‌ಗಳಾದ ದೀಪಕ್ ಚಿಂಚೋರೆ, ರಾಜಣ್ಣ ಕೊರವಿ, ಮಾಜಿ ವಿರೋಧ ಪಕ್ಷದ ನಾಯಕ ಗಣೇಶ್ ತಗರಗುಂಟಿ ಮುಂತಾದವರು ತಕ್ಷಣ ಇದನ್ನು ಪ್ರತಿಭಟಿಸಿ ಮೇಯರ್ ಕಾರಿಗೆ ಅಡ್ಡ ನಿಂತಾಗ ಆಕೆ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದ ಕಳ್ಳಿಯ ತರ ಹಿಂಬಾಗಿಲಿನಿಂದ ಓಡಿಹೋಗಿದ್ದಾಳೆ.



ಪೂರ್ಣ

ಹಾಗೆ ಹೇಳಬೇಕೆಂದರೆ ಸರ್ಕಾರಿ ಜಾಗ ಕದಿಯುವ ಚಾಳಿ ಈ ಬಿಜೆಪಿಗಳಿಗೆ ಹೊಸದೇನಲ್ಲ, ಬೆಂಗಳೂರಿನಲ್ಲೂ ಸಹ ಬಿಜೆಪಿ ರಾಜ್ಯ ಕಚೇರಿಗೆಂದು ಮಲ್ಲೇಶ್ವರದಲ್ಲಿ ಆಯಕಟ್ಟಾದ ದೊಡ್ಡ ಜಾಗವನ್ನೇ ಕಬಳಿಸಿದ್ದಾರೆ. ಗಾಂಧಿಬಜಾರಿನಲ್ಲಿ ಮಹಾನಗರ ಪಾಲಿಕೆ ಕಚೇರಿಯನ್ನೇ ವಶಪಡಿಸಿಕೊಂಡು ಆರ್‌ಎಸ್‌ಎಸ್‌ನ ಹಾಗೂ ಯೋಗ ಇತ್ಯಾದಿಗೆ ಬಳಸುತ್ತಿದ್ದಾರೆ. ಈಗ ನೋಡಿದರೆ ಹುಬ್ಬಳ್ಳಿಯಲ್ಲೂ ಈ ಭೂಕಬಳಿಕೆ ಮುಂದುವರೆದಿದೆ.




ತ್ರಿಲೋಕ ಚಂದ್ರ

ವಾಸ್ತವವಾಗಿ ಈ ಸ್ಥಳ ಬಸಪ್ಪ ಶೆಟ್ಟರ್ ಎಂಬುವರಿಗೆ ಸೇರಿತ್ತು. ಹುಬ್ಬಳ್ಳಿ ನವನಗರ ನಿರ್ಮಾತೃ ಎಂದೇ ಹೆಸರಾಗಿರುವ ಬಸಪ್ಪ ಶೆಟ್ಟರ್‌ರಿಂದ 1939 ನವೆಂಬರ್ 16 ರಂದು ಆಗಿನ ಮುನಿಸಿಪಾಲಿಟಿಯು 916 ರೂಪಾಯಿ ತೆತ್ತು ಈ ಜಾಗವನ್ನು ಖರೀದಿಸಿತ್ತು, ಅಂದಾಜು 510.87 ಚದರ ಮೀಟರ್ ವಿಸ್ತೀರ್ಣದ ಈ ಜಾಗದಲ್ಲಿ ನಿರ್ಗತಿಕರಿಗೆ ಹಾಗೂ ಅನಾಥರಿಗೆಂದು ಒಂದು ಧರ್ಮಶಾಲೆ ಕಟ್ಟುವ ಯೋಚನೆ ಆಗ ಇತ್ತು, ಆದರೆ ಅದೇಕೊ ಏನೋ ಈ ಧರ್ಮಶಾಲೆ ತಲೆ ಎತ್ತಲಿಲ್ಲ. ಖಾಲಿ ಜಾಗ ಮಾತ್ರ ಹಾಗೇ ಇತ್ತು, ಅದೀಗ ಹುಬ್ಬಳ್ಳಿ ಬಿಜೆಪಿಗಳ ಕಾಗೆಕಣ್ಣಿಗೆ ಬಿದ್ದಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರ ಏನೆಂದರೆ ನಗರಪಾಲಿಕೆ ಕಮಿಷನರ್ ತ್ರಿಲೋಕ ಚಂದ್ರನ ವರ್ತನೆ.

ರಾಜಕಾರಣಿಗಳು ಬಿಡಿ, ಅವರಿಗೆ ಕಾಯ್ದೆ ಕಾನೂನುಗಳ ಪರಿವೆಯೂ ಇರುವುದಿಲ್ಲ, ಏನನ್ನಾದರೂ ಕದಿಯುವಾಗ ಮೈಮೇಲೆ ಎಚ್ಚರವೂ ಇರುವುದಿಲ್ಲ, ಆದರೆ ಕಮಿಷನರ್ ಡಾ. ಕೆ.ವಿ. ತ್ರಿಲೋಕ್ ಚಂದ್ರ ಈ ಜಾಗ ಮಂಜೂರಿಯ ಪ್ರಸ್ತಾವನೆಯನ್ನು ತನ್ನ ಹಂತದಲ್ಲೇ ತಿರಸ್ಕರಿಸುವ ಬದಲಾಗಿ ಕೌನ್ಸಿಲ್ ಸಭೆಗೆ ಕಳುಹಿಸಿ ಕಾನೂನು ಉಲ್ಲಂಘಿಸಿದ್ದಾನೆ. ಈ ಅವಿವೇಕಿಯ ಅಧಿಕಾರದ ದುರುಪಯೋಗದ ವಿರುದ್ಧ ಜನ ದನಿ ಎತ್ತಬೇಕಿದೆ.

ಸಚಿನ್ ಒಬ್ಬ ದುರಾಶಪೀಡಿತ ವ್ಯಕ್ತಿ ಮಾತ್ರವಲ್ಲ, ತನ್ನ ಕಾರ್ಯಗಳನ್ನು ಈಡೇರಿಸಿಕೊಳ್ಳಲು ಆತ ಎಂಥಾ ರಾಜಕೀಯ ಪಾತಕಿಗಳನ್ನಾದರೂ ಬಳಸುತ್ತಾನೆ. ತನ್ನ ಇಮೇಜನ್ನು ಹೆಚ್ಚಿಸಿಕೊಳ್ಳಲು ಮ್ಯಾನುಪುಲೇಷನ್ ಕೂಡ ಮಾಡಬಲ್ಲ. ಆತನಿಗೆ ಬಹುಶಃ ಹಣವೇ ದೊಡ್ಡ ಮೌಲ್ಯ. ಅದು ಬಿಟ್ಟರೆ ದೇಶಕ್ಕಾಗಿ, ಸಮಾಜದ ಒಳಿತಿಗಾಗಿ ಆತ ಮಾಡಿದ್ದು ಶೂನ್ಯ. ಇಂಥ ಸಚಿನ್ ಭಾರತ ರತ್ನಕ್ಕೆ ಅರ್ಹನಾಗುವುದಾದರೂ ಹೇಗೆ? ಬ್ಯಾಟು ಬೀಸುವುದೊಂದನ್ನು ಬಿಟ್ಟು ಈತನಲ್ಲಿ ನಾವು ಬೇರೆ ಯಾವ ಆದರ್ಶವನ್ನು ಕಾಣಬಹುದು? ಅಥವಾ 'ಭಾರತ ರತ್ನಗಳು' ನಮ್ಮ ಮುಂದಿನ ಪೀಳಿಗೆಗೆ ಆದರ್ಶಪ್ರಾಯರಾಗಬೇಕಿಲ್ಲವೆ?



ಸಚಿನ್‌ಗೆ ಭಾರತರತ್ನ ಬೇಕೆ?



• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಭಾರತ ...ತ್ನ ...ಪ್ರಶಸ್ತಿಯು ...ನಮ್ಮ ದೇಶದಲ್ಲಿ ...ನೀಡಲಾಗುವ ಅತ್ಯುನ್ನತ ...ನಾಗರಿಕ ಪ್ರಶಸ್ತಿ. ಈ ಪ್ರಶಸ್ತಿ ...ಪಡೆದ ಭಾರತದ ಕೆಲವು ಮಹಾನ್ ...ಚೇತನಗಳ ಸಾಲಿನಲ್ಲಿ ನಮ್ಮ ಸಂವಿಧಾನ ...ಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಪ್ರಮುಖರು. ...ಇಂಥ ಮಹನೀಯರ ವಿಚಾರಗಳು ಹಾಗೂ ...ಕೊಡುಗೆಗಳು ಇಂದಿಗೂ ಬಹಳ ಪ್ರಸ್ತುತವಾಗಿವೆ. ಆದ್ದರಿಂದ ...ಅವರು ಸದಾ ನಮ್ಮ ಸ್ಮರಣೆಯಲ್ಲಿರುತ್ತಾರೆ. ಅಂಥಾ ...ಮಹಾಚೇತನಗಳ ನೆನಪಿನ ಜೊತೆಯಲ್ಲಿ ಅವರಿಗೆ ಸಂದ ಭಾರತ ರತ್ನ ...ಪ್ರಶಸ್ತಿಯೂ ಆಗಾಗ ನಮಗೆ ನೆನಪಾಗುತ್ತಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಸಚಿನ್ ತೆಂಡೂಲ್ಕರ್ ಅವರಿಗೆ ಭಾರತ ರತ್ನ ಕೊಡಬೇಕೆಂದು ದೇಶಾದ್ಯಂತ ಒಂದು ಕೂಗು ಕೇಳಿಬರುತ್ತಿದೆ. ಹಲವು ಮಾಧ್ಯಮಗಳು ಈ ವಿಷಯವನ್ನು ಮತ್ತಷ್ಟು ಉತ್ಪ್ರೇಕ್ಷಿಸಿ ಇದನ್ನೊಂದು ರಾಷ್ಟ್ರೀಯ ಸಮಸ್ಯೆಯ ಮಟ್ಟಕ್ಕೇರಿಸುವ ಪ್ರಯತ್ನ ನಡೆಸಿವೆ. ಆದರೆ ಆ ಸಂದರ್ಭದ ಚರ್ಚೆಗಳಲ್ಲಿ ಹೊರಬಂದ ಮತ್ತೊಂದು ಅಂಶವೆಂದರೆ ಆಗಿನ ನಿಯಮಾವಳಿಯ ಪ್ರಕಾರ ಕ್ರೀಡಾ ಕ್ಷೇತ್ರದವರಿಗೆ ಭಾರತರತ್ನ ಕೊಡುವುದು ಸಾಧ್ಯವಿಲ್ಲ ಎಂಬುದು. ಈ ಪ್ರಕ್ರಿಯೆಯ ಮುಂದುವರೆದ ಭಾಗವಾಗಿ ಕೇಂದ್ರ ಕ್ರೀಡಾ ಸಚಿವರು ಪ್ರಶಸ್ತಿಯ ಮಾನದಂಡದಲ್ಲಿ ಬದಲಾವಣೆ ತಂದು ಕ್ರೀಡಾಕ್ಷೇತ್ರವನ್ನು ಒಳಗೊಳ್ಳಬೇಕೆಂಬ ಪ್ರಸ್ತಾಪವನ್ನು ಸರ್ಕಾರಕ್ಕೆ ಕಳಿಸಿದರು. ಅದರ ಫಲಶ್ರುತಿಯೆಂಬಂತೆ "ಮಾನವ ಜೀವನದ ಯಾವುದೇ ಕ್ಷೇತ್ರದಲ್ಲಿ ಅಸಾಧಾರಣ ಸೇವೆ ಸಲ್ಲಿಸಿದ/ಉತ್ತಮ ಸಾಧನೆಗೈದವರನ್ನು ಗುರುತಿಸಿ" ಈ ಪ್ರಶಸ್ತಿಯನ್ನು ನೀಡಬಹುದು ಎಂಬ ತಿದ್ದುಪಡಿಯನ್ನು ಕಳೆದ ಡಿಸೆಂಬರ್‌ನಲ್ಲಿ ತರಲಾಗಿದೆ.

ಈ ಎಲ್ಲಾ ಕಸರತ್ತು ನಡೆಯಲು ಸಚಿನ್ ತೆಂಡೂಲ್ಕರ್ ಎಂಬ ಕ್ರಿಕೆಟ್ ಮಾಂತ್ರಿಕನ ನಿಮಿತ್ತ ಹೊರತುಪಡಿಸಿ ಬೇರೆ ಯಾವ ಪ್ರಬಲ ಕಾರಣಗಳೂ ಇರಲಿಲ್ಲ. ಇನ್ನೇನು ಸಚಿನ್‌ಗೆ ಭಾರತ ರತ್ನ ಕಿರೀಟ ದೊರೆತಂತೆಯೇ ಎಂದುಕೊಂಡು ಹಲವರು ಸಂಭ್ರಮಿಸಿದ್ದರು. ಆದರೆ ಇತ್ತೀಚೆಗೆ ಪ್ರಧಾನಮಂತ್ರಿಗಳ ಕಾರ್ಯಾಲಯ ಸ್ಪಷ್ಟನೆ ನೀಡಿದ್ದು ಈ ವರ್ಷ ಭಾರತ ರತ್ನ ಪ್ರಶಸ್ತಿಗೆ ಯಾರನ್ನೂ ಆಯ್ಕೆ ಮಾಡುವುದಿಲ್ಲವೆಂದು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಈ ಪ್ರಸ್ತಾಪದ ಬಗ್ಗೆ ಒಂದಷ್ಟು ಜಿಜ್ಞಾಸೆಯ ಅಗತ್ಯವಿದೆ.

ಸಚಿನ್ ಎಂದರೆ ಆಬಾಲವೃದ್ಧರಾದಿಯಾಗಿ ಇಡೀ ಭರತ ಖಂಡಕ್ಕೆ ಚಿರಪರಿಚಿತ ವ್ಯಕ್ತಿ.ಕ್ರಿಕೆಟ್ ಲೋಕದ ಅಸಾಧಾರಣ ಪ್ರತಿಭೆ. ದಾಖಲೆಗಳಿರುವುದೇ ಮುರಿಯಲಿಕ್ಕಾಗಿ ಎಂಬಂತೆ ಹತ್ತು ಹಲವು ದಾಖಲೆಗಳನ್ನು ಮೀರಿ ಬೆಳೆದ ಬ್ಯಾಟ್ಸ್‌ಮನ್. ಅವರ ಆಟದ ವೈಖರಿಯನ್ನು ಬಣ್ಣಿಸುತ್ತಾ ಸಂಭ್ರಮಿಸುವವರಿಗೆ ಲೆಕ್ಕವಿಲ್ಲ. ಆದ್ದರಿಂದಲೇ ಆ ಪ್ರತಿಭೆಗೆ ಸೂಕ್ತ ಗೌರವ ಸಲ್ಲಲೇಬೇಕು. ಇದರಲ್ಲಿ ಬಹುಶಃ ಯಾರಿಗೂ ಅಷ್ಟೊಂದು ಅಭ್ಯಂತರವಿರಲಿಕ್ಕಿಲ್ಲ. ಆದರೆ ಭಾರತ ರತ್ನ ಪ್ರಶಸ್ತಿಗೆ ಸಚಿನ್ ಅರ್ಹರೆ? ಅಥವಾ ಭಾರತ ರತ್ನ ಅಷ್ಟು ಮೌಲ್ಯ ಕಳೆದುಕೊಂಡಿದೆಯೇ ಎಂಬ ಪ್ರಶ್ನೆಗಳಿಗೆ ನಾವು ಮೊದಲು ಉತ್ತರ ಕಂಡುಕೊಳ್ಳಬೇಕು.


ಮೊದಲಿಗೆ ಸಚಿನ್‌ರ ಪ್ರಶ್ನೆಯನ್ನೇ ತೆಗೆದುಕೊಳ್ಳಿ. ನರ್ಸರಿ ಮಕ್ಕಳಿಗೂ ತಿಳಿದಿರುವಂತೆ ಸಚಿನ್ ಉತ್ತಮ ಬ್ಯಾಟ್ಸ್‌ಮನ್. ಕಠಾರುವಾಕ್ಕಾಗಿ ಬ್ಯಾಟನ್ನು ಬೀಸುವುದರಲ್ಲಿ ನಿಷ್ಣಾತ. ಕೆಲವೊಮ್ಮೆ ಆ ಕುಳ್ಳ ಎಷ್ಟು ಬಲವಾಗಿ ಬ್ಯಾಟು ಬೀಸುತ್ತಾನೆಂದರೆ ಆ ಹೊಡೆತಕ್ಕೆ ಚೆಂಡು ಪೆವಿಲಿಯನ್ ಆಚೆಗೆ ದಾಟಿ ಕಣ್ಮರೆಯಾಗಿಬಿಡುತ್ತದೆ. ಆತ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಹೊಂದಿರುವ ಹಲವು ಬೌಲರ್‌ಗಳಿಗೆ ನೀರು ಕುಡಿಸಿದ್ದಾನೆ. 99 ಶತಕಗಳನ್ನು ಬಾರಿಸಿರುವ ಈತನ ನೂರನೇ ಶತಕಕ್ಕಾಗಿ ಇಡೀ ಜಗತ್ತಿನ ಕ್ರೀಡಾಪ್ರೇಮಿಗಳು ನಿರೀಕ್ಷಿಸುತ್ತಿದ್ದಾರೆ. ಎಲ್ಲವೂ ಪರಮ ಸತ್ಯ. ಆದರೆ ಅದರಾಚೆಗೆ? ಹೌದು. ಅದರಾಚೆಗಿನ ವಿಷಯಗಳು ತುಂಬಾ ಮುಖ್ಯ. ಏಕೆಂದರೆ ನಾವು ಭಾರತ ರತ್ನದ ಬಗ್ಗೆ ಮಾತಾಡುತ್ತಿದ್ದೇವೆ.

ತೆಂಡೂಲ್ಕರ್ ಕ್ರಿಕೆಟ್‌ನಲ್ಲಿ ವೈಯಕ್ತಿಕ ಸಾಧನೆಯನ್ನೇನೋ ಮಾಡಿದ್ದಾರೆ ನಿಜ. ಆ ಕಾರಣದಿಂದ ಹಲವು ಕಂಪನಿಗಳ ಅಧಿಕೃತ ಬ್ರಾಂಡ್ ಅಂಬಾಸಿಡರ್ ಆಗಿದ್ದಾರೆಂಬುದೂ ನಿಜ. ಹೀಗೆ ಹಲವಾರು ಕಂಪನಿಗಳ ಉತ್ಪನ್ನಗಳ ಜಾಹೀರಾತಿನ ಬಾಬ್ತಿನಲ್ಲಿ ನೂರಾರು ಕೋಟಿಗಳನ್ನು ಬಾಚಿರುವುದೂ ನಿಜವೇ. ಆದರೆ ಅವರ ನಾಯಕತ್ವದಲ್ಲಿ ಆಡಿದ ಪಂದ್ಯಗಳಲ್ಲಿ ಭಾರತ ತಂಡ ಸೋತಿದ್ದೇ ಹೆಚ್ಚು. ಆತನ ನಾಯಕತ್ವದಲ್ಲಿ ಭಾರತ ತಂಡ 9 ಟೆಸ್ಟ್‌ಗಳಲ್ಲಿ ಸೋತಿದ್ದರೆ ಗೆದ್ದಿದ್ದು ಕೇವಲ ನಾಲ್ಕು ಮಾತ್ರ.ಏಕದಿನ ಪಂದ್ಯಗಳಲ್ಲಿ ಗೆದ್ದಿದ್ದು 23 ಆದರೆ ಸೋತಿದ್ದು ಹೆಚ್ಚುಕಮ್ಮಿ ಅದರ ಎರಡು ಪಟ್ಟು 43. ಹಾಗೆ ಅಂತಾರಾಷ್ಟ್ರೀಯ ಟೆಸ್ಟ್ ಸರಾಸರಿಯಲ್ಲಿ ಆತನಿಗೆ 16 ನೇ ಸ್ಥಾನ, ಏಕದಿನದ ಸರಾಸರಿಯಲ್ಲಿ 14 ನೇ ಸ್ಥಾನ. ಕ್ರೀಡಾ ಜಗತ್ತಿಗೆ ಸಂಬಂಧಿಸಿದ ಈ ಅಂಶಗಳನ್ನು ಸಹ ಗಣನೆಗೆ ತೆಗೆದುಕೊಳ್ಳಬಹುದಾದರೂ ನಮಗೆ ಅದಕ್ಕಿಂತ ಮುಖ್ಯವಾದ ಅಂಶಗಳಿವೆ.

ಕ್ರಿಕೆಟ್ ಮೈದಾನದಾಚೆಗಿರುವ ಸಚಿನ್‌ರ ಪರಿಚಯ ಮಾಡಿಕೊಳ್ಳದೆ ಹೋದರೆ ನಾವು ಅವರ ರನ್ನುಗಳ ಮಳೆಯಲ್ಲಿ ಕೊಚ್ಚಿ ಹೋಗುತ್ತೇವೆ. ಸ್ಥಳಾಭಾವದಿಂದ ಇಲ್ಲಿ ಕೆಲವೇ ಘಟನೆಗಳನ್ನು ಮಾತ್ರ ನೋಡೋಣ.

2002ರಲ್ಲಿ ಸಚಿನ್ ಡಾನ್ ಬ್ರಾಡ್‌ಮನ್‌ರ ದಾಖಲೆಯನ್ನು ಮುರಿದಿದ್ದಕ್ಕಾಗಿ ವಿದೇಶಿ ಕಂಪನಿಯೊಂದು ಸಚಿನ್‌ರಿಗೆ ದುಬಾರಿ ಬೆಲೆಬಾಳುವ ಫೆರಾರಿ ಕಾರೊಂದನ್ನು ಉಡುಗೊರೆಯಾಗಿ ನೀಡಿತು. ಆದರೆ ಆ ಕಾರನ್ನು ವಿದೇಶದಿಂದ ಭಾರತಕ್ಕೆ ತರಬೇಕಾದರೆ ಆಮದು ಸುಂಕ ಕಟ್ಟಬೇಕು. ಆದರೆ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಕಾರನ್ನು ಪುಗಸಟ್ಟೆ ಪಡೆದಿದ್ದ ಸಚಿನ್ ಆಮದು ಸುಂಕ ಕಟ್ಟಲು ಒಪ್ಪಲಿಲ್ಲ. ಅದನ್ನು ಹಾಗೆ ದೇಶದೊಳಕ್ಕೆ ಬಿಡಲು ಅಧಿಕಾರಿಗಳು ಅನುಮತಿಸಲಿಲ್ಲ.





ಕೊನೆಗೆ ಸಚಿನ್ ಕೋರ್ಟ್ ಮೆಟ್ಟಿಲೇರಿದರು. ಆದರೆ ಕೋರ್ಟ್ ಸಚಿನ್‌ರ ವಾದವನ್ನು ತಳ್ಳಿಹಾಕಿ ಸುಂಕ ಕಟ್ಟುವಂತೆ ಸೂಚಿಸಿತು. ಸಚಿನ್ ಸುಂಕ ಕಟ್ಟಲಾಗದ ದೈನೇಸಿ ಸ್ಥಿತಿಯಲ್ಲಿರಲಿಲ್ಲ. ಅವರು ನೂರಾರು ಕೋಟಿಗಳ ಒಡೆಯನಾಗಿದ್ದಾನೆಂಬುದು ಎಲ್ಲರಿಗೂ ತಿಳಿದಿರುವ ಸತ್ಯ. ಕೋರ್ಟಿನಿಂದ ಮುಖಭಂಗ ಅನುಭವಿಸಿದ ನಮ್ಮ ಕ್ರಿಕೆಟ್ ಕಣ್ಮಣಿ ನಂತರ ಉಡುಗೊರೆ ನೀಡಿದ ಕಂಪನಿಯ ಬೆನ್ನುಹತ್ತಿ ಸುಂಕವನ್ನು ಅವರೇ ಸಲ್ಲಿಸುವಂತೆ ಮಾಡಿದರು. ಇಲ್ಲಿಗೆ ಮೊದಲನೇ ದೃಶ್ಯ ಮುಗಿಯಿತು.

2010ರ ಏಪ್ರಿಲ್‌ನಲ್ಲಿ ಈ ದುಬಾರಿ ಫೆರಾರಿ ಕಾರು ಸಚಿನ್‌ರ ವಿವಿಐಪಿ ಏರಿಯಾದ ಬಂಗಲೆಯಿಂದ "ಕಳುವಾಗಿ ಬಿಟ್ಟಿತು". ಈ ಕೆಟ್ಟ ಸುದ್ದಿಯನ್ನು ಎಲ್ಲಾ ಪ್ರಮುಖ ಪತ್ರಿಕೆಗಳು ಹಾಗೂ ಟಿವಿ ಮಾಧ್ಯಮಗಳು ಬಿತ್ತರಿಸಿದವು. ಮುಂಬೈ ಪೊಲೀಸರು ಗಣ್ಯರ ಏರಿಯಾಗೆ ಮತ್ತಷ್ಟು ಭದ್ರತೆಯನ್ನು ಹೆಚ್ಚಿಸಿದರು. ಆದರೆ ಈ ಬಗ್ಗೆ ಸಚಿನ್ ಮಾತ್ರ ಬಾಯಿ ಬಿಚ್ಚಲಿಲ್ಲ. ಇದು ದೃಶ್ಯ ಎರಡು.

ಇನ್ನು ಮೂರನೇ ದೃಶ್ಯ 2011ರ ಜುಲೈನಲ್ಲಿ ನಡೆದದ್ದು. ಅದೇ ಬಿಟ್ಟಿ ಉಡುಗೊರೆಯಾಗಿದ್ದ ಕೆಂಪು ಬಣ್ಣದ ಫೆರಾರಿ ಕಾರು ಸೂರತ್‌ನ ಉದ್ಯಮಿಯೊಬ್ಬರ ಬಳಿ ಪತ್ತೆಯಾಯಿತು. ಅಂದರೆ ಕಾರು ಕಳ್ಳ ಸಿಕ್ಕನೆಂದು ಭಾವಿಸಬೇಡಿ. ವಾಸ್ತವದಲ್ಲಿ ಆ ಉದ್ಯಮಿ ಒಂದೂವರೆ ಕೋಟಿ ರೂಪಾಯಿ ಕೊಟ್ಟು ಆ ಕಾರನ್ನು ಖರೀದಿಸಿದ್ದ. ಅದರ ಮಾಲಿಕತ್ವವನ್ನು ರುಜುವಾತುಪಡಿಸುವ ಎಲ್ಲಾ ದಾಖಲೆಗಳೂ ಆತನ ಬಳಿಯಿದ್ದವು. ಹಾಗಾದರೆ ನಿಜವಾಗಿಯೂ ಆ ಕಾರು ಕಳ್ಳ ಯಾರು? ವಾಸ್ತವವಾಗಿ ಪುಕ್ಕಟೆಯಾಗಿ ಸಿಕ್ಕಿದ ಈ ವಿದೇಶಿ ಕಾರನ್ನು ಸಚಿನ್ ಮಾರಿ ಅದರಿಂದ ಬಂದ ಹಣವನ್ನು ತಮ್ಮ ಜೇಬಿಗಿಳಿಸಿಕೊಂಡಿದ್ದರು!

ಮತ್ತೊಂದು ನಿದರ್ಶನವನ್ನು ನೋಡೋಣ. 1999ರಲ್ಲಿ ಸಚಿನ್ ಇದ್ದ ಕಾರು, ಮಾರುತಿ 800 ಕಾರೊಂದಕ್ಕೆ ಡಿಕ್ಕಿ ಹೊಡೆಯಿತು. ಯಾರಿಗೂ ಅಂಥಾ ತೊಂದರೆಯೇನೂ ಆಗಿರಲಿಲ್ಲ. ಈ ಸುದ್ದಿ ಪತ್ರಿಕೆಗಳಲ್ಲಿ ಇನ್ನೇನು ಅಚ್ಚಿಗೆ ಹೋಗುವುದರಲ್ಲಿತ್ತು, ಅಷ್ಟರಲ್ಲಿ ಪತ್ರಿಕಾ ಕಚೇರಿಗಳಿಗೆ ಇಡೀ ಮುಂಬೈನ ರಾಜಕೀಯ ಡಾನ್ ಆಗಿ ಮೆರೆಯುತ್ತಿದ್ದ ರಾಜ್ ಠಾಕ್ರೆಯಿಂದ ಫೋನ್‌ಕಾಲ್ ಬಂತು. ಅಲ್ಲಿಗೆ ಆ ಸುದ್ದಿ ಸತ್ತುಹೋಯಿತು. ನಮ್ಮ ಕ್ರಿಕೆಟ್ ಲೋಕದ ದೇವರು ತಮ್ಮ ವಿರುದ್ಧ ಸಣ್ಣ ಸುದ್ದಿಯೂ ಬರದಂತೆ ನೋಡಿಕೊಳ್ಳಲು ತಮ್ಮ ಮಿತ್ರ ರಾಜ್ ಠಾಕ್ರೆಯ ಮೊರೆ ಹೊಕ್ಕಿದ್ದರು.

ಇನ್ನೊಂದು ಉದಾಹರಣೆ ನೋಡಿ. ಆತ ಹೊಸದಾಗಿ ಕಟ್ಟಿಸಿರುವ ಭಾರೀ ಬಂಗಲೆಯ ಮೇಲೆ ಮತ್ತೊಂದು ಅಂತಸ್ತು ನಿರ್ಮಿಸಲು ನಿಯಮಗಳ ಪ್ರಕಾರ ಅವಕಾಶವಿಲ್ಲ. ಆದರೂ ಅದನ್ನು ಹೇಗಾದರೂ ಮಾಡಿ ಸಾಧಿಸಲು ಆತ ಹಟ ಹಿಡಿದು ಇದೇ ರೀತಿಯ ಪ್ರಭಾವಳಿಯನ್ನು ಬಳಸುತ್ತಿದ್ದಾನೆ. ಅಧಿಕಾರಿಗಳು ಈತನಿಗಾಗಿ ಮಹಾನಗರ ಪಾಲಿಕೆಯ ನಿಯಮಗಳನ್ನು ಬದಲಾಯಿಸಿದರೂ ಆಶ್ಚರ್ಯವಿಲ್ಲ.

ಈ ಎಲ್ಲಾ ಉದಾಹರಣೆಗಳಿಂದ ನಮಗೆ ಸ್ಪಷ್ಟವಾಗುವ ಒಂದು ವಿಷಯವೆಂದರೆ ಸಚಿನ್ ಒಬ್ಬ ದುರಾಶಪೀಡಿತ ವ್ಯಕ್ತಿ ಮಾತ್ರವಲ್ಲ, ತನ್ನ ಕಾರ್ಯಗಳನ್ನು ಈಡೇರಿಸಿಕೊಳ್ಳಲು ಆತ ಎಂಥಾ ರಾಜಕೀಯ ಪಾತಕಿಗಳನ್ನಾದರೂ ಬಳಸುತ್ತಾನೆ. ತನ್ನ ಇಮೇಜನ್ನು ಹೆಚ್ಚಿಸಿಕೊಳ್ಳಲು ಮ್ಯಾನುಪುಲೇಷನ್ ಕೂಡ ಮಾಡಬಲ್ಲ. ಆತನಿಗೆ ಬಹುಶಃ ಹಣವೇ ದೊಡ್ಡ ಮೌಲ್ಯ. ಅದು ಬಿಟ್ಟರೆ ದೇಶಕ್ಕಾಗಿ, ಸಮಾಜದ ಒಳಿತಿಗಾಗಿ ಆತ ಮಾಡಿದ್ದು ಶೂನ್ಯ. ಇಂಥ ಸಚಿನ್ ಭಾರತ ರತ್ನಕ್ಕೆ ಅರ್ಹನಾಗುವುದಾದರೂ ಹೇಗೆ? ಬ್ಯಾಟು ಬೀಸುವುದೊಂದನ್ನು ಬಿಟ್ಟು ಈತನಲ್ಲಿ ನಾವು ಬೇರೆ ಯಾವ ಆದರ್ಶವನ್ನು ಕಾಣಬಹುದು? ಅಥವಾ 'ಭಾರತ ರತ್ನಗಳು' ನಮ್ಮ ಮುಂದಿನ ಪೀಳಿಗೆಗೆ ಆದರ್ಶಪ್ರಾಯರಾಗಬೇಕಿಲ್ಲವೆ? ಈ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡರೆ ಯಾವ ಕಾರಣಕ್ಕೂ ಸಚಿನ್‌ಗೆ ಭಾರತ ರತ್ನ ಕೊಡಬಾರದೆಂದು ಖಡಾಖಂಡಿತವಾಗಿ ಹೇಳಬಹುದು.

ಆದರೆ ಈ ಹಿಂದೆ ಕೆಲವು ಅಯೋಗ್ಯರಿಗೂ ಈ ಪ್ರಶಸ್ತಿಯನ್ನು ಕೊಟ್ಟಿರುವ ಉದಾಹರಣೆಗಳಿವೆ. ನಿಜ. ಹಾಗೆಂದು ಈ ಪ್ರಸ್ತಾಪವನ್ನು ನಾವು ಬೆಂಬಲಿಸಲಾಗದು. ದೇಶವೊಂದರ ಅತ್ಯುನ್ನತ ಪ್ರಶಸ್ತಿಯ ಘನತೆಯನ್ನು ನಾವು ಕಾಪಾಡಬೇಕು. ಆದರೆ ಸರ್ಕಾರ ನಿಯಮಾವಳಿಗಳನ್ನೆ ಬದಲಾಯಿಸಿರುವುದನ್ನು ನೋಡಿದರೆ ಇಂದಲ್ಲ ನಾಳೆ ಇದನ್ನು ತೆಂಡೂಲ್ಕರ್‌ರ ಕೊರಳಿಗೆ ಹಾಕುವ ಸಾಧ್ಯತೆ ನಿಚ್ಚಳವಾಗಿದೆ. ಅಂಬೇಡ್ಕರ್‌ರಂಥವರಿಗೆ ಸಂದ ಈ ಪ್ರಶಸ್ತಿಯ ಗೌರವ ಮಾರುಕಟ್ಟೆಯ ಸರಕಿನಂತಾಗಬಾರದು ಎಂಬುದು ನಮ್ಮೆಲ್ಲರ ಕಾಳಜಿಯಾಗಬೇಕು.

ಎತ್ತಣ ಅಂಬೇಡ್ಕರ್ ಎತ್ತಣ ತೆಂಡೂಲ್ಕರ್ ಎತ್ತಣಿಂದೆತ್ತಣ ಸಂಬಂಧವಯ್ಯಾ?



ತನಿಖಾ ವರದಿ

ಪಾಕ್ ಧ್ವಜಹಾರಿಸಿದ್ದು RSS ನೀಚರು

• ರಾ. ಸೋಮನಾಥ್

ಸಿಂಧಗಿಯಲ್ಲಿ ಪಾಕಿಸ್ತಾನದ ಬಾವುಟ ಹಾರಿಸಿದ್ದು ನಿಜಕ್ಕೂ ಶ್ರೀರಾಮ ಸೇನೆಯ ಸೈನಿಕರೇ ಅಥವಾ ಆರೆಸ್ಸೆಸ್ ಸಂಘ ಪರಿವಾರದ ಕಟ್ಟಾಳುಗಳೇ? ಬಿಜೆಪಿ ಸರ್ಕಾರದ ಗೃಹಮಂತ್ರಿ ಅಶೋಕ್ 'ಶ್ರೀರಾಮ ಸೇನೆಯನ್ನು ನಿಷೇಧಿಸಲು ಚಿಂತನೆ ನಡೆದಿದೆ' ಎಂದು ಹೇಳಿದ್ದರ ಹಿಂದಿನ ಉದ್ದೇಶವೇನು? ಪಾಕ್ ಧ್ವಜ ಹಾರಿಸಿದ್ದು ಸಂಘ ಪರಿವಾರದ ಕಟ್ಟಾಳುಗಳೆಂದು ಗೊತ್ತಿದ್ದೂ ಪೊಲೀಸರು ಅದನ್ನು ಶ್ರೀರಾಮ ಸೇನೆಯ ಮೂತಿಗೆ ಒರಿಸಿದ್ದೇಕೆ? ಯಾವ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಸರ್ಕಾರ ಪಾಕ್ ಧ್ವಜ ಪ್ರಕರಣದ ಆರೋಪಿಗಳು ಮುತಾಲಿಕ್‌ನ ಶ್ರೀರಾಮ ಸೇನೆಯ ಸೈನಿಕರೆಂದು ಸಾಬೀತು ಮಾಡುತ್ತದೆ?


ಇಂಥ ಅನೇಕ ಪ್ರಶ್ನೆಗಳು ಏಕಾಏಕಿ ಹುಟ್ಟಿಕೊಳ್ಳುವುದಕ್ಕೆ ಇರುವ ಕಾರಣಗಳು ಒಂದೆರಡಲ್ಲ. ಹೊಸ ವರ್ಷಾಚರಣೆಯ ಹಿಂದಿನ ರಾತ್ರಿ ಅಂದರೆ 2011 ರ ಡಿಸೆಂಬರ್ 31 ರಾತ್ರಿ ಬಿಜಾಪುರ ಜಿಲ್ಲೆಯ ಸಿಂಧಗಿಯ ತಹಶೀಲ್ದಾರ್ ಕಚೇರಿಯ ಮೇಲೆ ಪಾಕಿಸ್ತಾನದ ಧ್ವಜವನ್ನು ಹಾರಿಸಿದ್ದರ ಹಿಂದೆ ಮುಸ್ಲಿಂ ಉಗ್ರರ ಕೈವಾಡವಿದೆಯೆಂದೂ, ಮುಸ್ಲಿಮರೇ ದೇಶದ್ರೋಹಿಗಳೆಂದು ಬೊಬ್ಬೆಯಿಟ್ಟು ಹಲವು ಹಿಂದೂತ್ವವಾದಿಗಳು ಪ್ರತಿಭಟಿಸಿದವು. ಜನವರಿ 1 ರ ಬೆಳ್ಳಂ ಬೆಳಗ್ಗೆಯೇ ಹಾರಿಸಿದ್ದು ಪಾಕ್ ಧ್ವಜವೆಂದೇ ಕರಾರುವಾಕ್ಕಾಗಿ ಪತ್ತೆ ಹಚ್ಚಿದ ಆರೆಸ್ಸೆಸ್ ಮತ್ತು ಭಜರಂಗದಳ ಇತ್ಯಾದಿಗಳು ಇಡೀ ಸಿಂಧಗಿಯನ್ನು ಅಘೋಷಿತ ಬಂದ್‌ಗೆ ಈಡು ಮಾಡಿದವು.

ಇದರ ಬೆನ್ನಲ್ಲೇ ಬಿಜಾಪುರ, ಇಂಡಿ ಮತ್ತು ಸುತ್ತಮುತ್ತಲ ಊರು, ಜಿಲ್ಲೆಗಳಲ್ಲಿ ಪ್ರತಿಭಟನೆಗಳಾದವು. ಜೊತೆಗೆ ಕೆಲ ಕನ್ನಡ ಪರ ಸಂಘಟನೆಗಳೂ ಪರಿವಾರದ ವೀರಾವೇಶಕ್ಕೆ ಕೈಜೋಡಿಸಿದವು. ತಹಶೀಲ್ದಾರ್ ಕಚೇರಿ ಅಂದರೆ ತಾಲ್ಲೂಕು ದಂಡಾಧಿಕಾರಿಗಳ ಕಚೇರಿ ಮೇಲೆ ಪಾಕ್ ಧ್ವಜ ಹಾರಿಸಿದ್ದು ಕರ್ನಾಟಕದ ಉದ್ವೇಗಲಕ್ಕೂ, ಕೋಮು ವೈಷಮ್ಯಕ್ಕೆ ಕಾರಣವಾಗಿ ರಾಜ್ಯಾದ್ಯಂತ ಸಂಘಪರಿವಾರ ಪಾಕ್ ಧ್ವಜ ಪ್ರಕರಣದ ಆರೋಪಿಗಳು-ಅಂದರೆ ಅವರೇ ಭಾವಿಸಿರುವಂತೆ ಮುಸ್ಲಿಂ ಕಿಡಿಗೇಡಿಗಳನ್ನು- ಪೊಲೀಸರು ಬಂಧಿಸಬೇಕೆಂದು ಹಾರಾಡಿದ್ದೇ ಹಾರಾಡಿದ್ದು!

ಆದರೆ ಜನವರಿ ನಾಲ್ಕರ ಹೊತ್ತಿಗೆ ಇಡೀ ಕೇಸರಿ ಪಡೆಗೇ ಮುಟ್ಟನೋಡಿಕೊಳ್ಳುವಂಥ ಪೆಟ್ಟು ಕೊಟ್ಟಿದ್ದು ಬಿಜಾಪುರದ ಎಸ್ಪಿ ಡಿ.ಸಿ. ರಾಜಪ್ಪ. ನಾಲ್ಕೇ ದಿನಕ್ಕೆ ಏಳು ಮಂದಿ ಆರೆಸ್ಸೆಸ್ ಕಟ್ಟಾಳುಗಳನ್ನು ಅನಾಯಾಸವಾಗಿ ಹಿಡಿದು ಹಾಕಿದ ಡಿ.ಸಿ. ರಾಜಪ್ಪ ಇಡೀ ಕರ್ನಾಟಕವೇ ಹೆಮ್ಮೆ ಪಡುವಂತೆ ಇಡೀ ಮುಸ್ಲಿಂ ಜನಾಂಗವನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಷಡ್ಯಂತ್ರವೊಂದನ್ನು ವಿಫಲಗೊಳಿಸಿದ್ದರು.

ಸಿಂಧಗಿ ಪಾಕ್ ಧ್ವಜದ ಆರೋಪಿಗಳ ಪೈಕಿ ಮೊದಲನೆಯವನು ಸಿಂಧಗಿ ಬಸವ ನಗರದ ಸುನೀಲ ಶ್ರೀರಾಮ ಸೋಲಂಕರ್ ಎಂಬ 18ರ ಪೋರ. ಈತನ ಜೊತೆಗೆ ಜ್ಯೋತಿನಗರದ ಶಿಕ್ಷಕ ಸಿದ್ಧರಾಮಯ್ಯನವರ ಮಗ 17ರ ಹರೆಯದ ರಾಕೇಶ್ ಮಠ ಎಂಬ ಮತ್ತೊಬ್ಬ ಪೋರನೂ ಸೇರಿ ಪಾಕ್ ಧ್ವಜದ ಹುನ್ನಾರ ನಡೆಸಿದ್ದ. ಇವರಲ್ಲದೇ ಮಲ್ಲನ ಗೌಡ, ವಿಜಯ್ ಕುಮಾರ್ ಪಾಟೀಲ್(18) ಪರಶುರಾಮ ಅಶೋಕ್ ವಾಗ್ಮೋರೆ (20), ಎಂಬಾತ ಮಸೀದಿ ಬಳಿಯ ರೋಹಿತ್ ಈಶ್ವರ್ ನಾವಿ, ಸುನೀಲ್ ಮಡಿವಾಳಪ್ಪ ಅಗಸರ್ ಎಂಬ ಆರು ಮಂದಿ ಪಡ್ಡೆ ಹುಡುಗರನ್ನು ಪೊಲೀಸರು ಬಂಧಿಸಿದ್ದರು. ಅರುಣ್ ಶಶಿಧರ್ ವಾಗ್ಮೋರೆ ಎಂಬ ಮತ್ತೊಬ್ಬ 18 ರ ಪೋರ ಪರಾರಿಯಾಗಿದ್ದ.

ಇವರ್‍ಯಾರು 20 ರ ವಯಸ್ಸನ್ನು ಮೀರದ, ಇನ್ನೂ ಮೀಸೆ ಬಲಿಯದ ಪಡ್ಡೆಗಳು. 2012 ರ ಜನವರಿ ಬೆಳ್ಳಂಬೆಳಗ್ಗೆಯೇ ಭಜರಂಗದಳ, ಶ್ರೀರಾಮ ಸೇನೆ, ವಿಶ್ವ ಹಿಂದೂ ಪರಿಷತ್ ಇತ್ಯಾದಿ ಆರೆಸ್ಸೆಸ್ ಮರಿ ಸಂಘಟನೆಗಳೆಲ್ಲ ರಕ್ಷಣಾ ವೇದಿಕೆ ಮತ್ತು ಜಯ ಕರ್ನಾಟಕದಂಥ ಅರೆ ಚಡ್ಡಿ ಸಂಘಟನೆಗಳ ಜೊತೆ ಸೇರಿ ಸಿಂಧಗಿಯಲ್ಲಿ ಬೀದಿಗಿಳಿದು ಬೊಬ್ಬೆಯಿಟ್ಟವು. ಆರೋಪಿಗಳ ಪತ್ತೆಗೆಂದೇ ಎಸ್ಪಿ ರಾಜಪ್ಪ ಸಿಂಧಗಿ ಡಿವೈಎಸ್ಪಿ ಮುತ್ತುರಾಜ್, ಸಿಂಧಗಿ ಸಿಪಿಐ ಚಿದಂಬರ್, ಪಿಎಸ್‌ಐ ಪಟ್ಟ, ಎಎಸ್‌ಐಗಳಾದ ಬಾಬಾ ಗೌಡ ಮತ್ತು ಸಿದ್ದೇಶ್ವರರನ್ನು ಸೇರಿಸಿ ವಿಶೇಷ ತನಿಖಾ ತಂಡ ರಚಿಸಿದ್ದರು. ಜನವರಿ ನಾಲ್ಕರ ಸಂಜೆಯೇ ಸತ್ಯ ಬಯಲಾಗಿತ್ತು.



ಆರೆಸ್ಸೆಸ್ ಬೈಠಕ್‌ನ ಗುರುತು ಚೀಟಿ

ಪಾಕ್ ಧ್ವಜ ಹಾರಿಸಿದ್ದು ಶ್ರೀರಾಮ ಸೈನಿಕರು

ಪೊಲೀಸರೇನೋ ಬಂಧಿತರೆಲ್ಲ ಶ್ರೀರಾಮ ಸೇನೆಯವರೆಂದು ಹೇಳಿಕೆ ಕೊಟ್ಟರೆ ಪತ್ರಿಕೆಗಳೆಲ್ಲ ಅದನ್ನೇ ಸತ್ಯವೆಂದು ಭಾವಿಸಿ ಇಡೀ ಪ್ರಕರಣವನ್ನು ಮುತಾಲಿಕ್‌ನ ಶ್ರೀರಾಮ ಸೇನೆಯ ಹೆಗಲಿಗೆ ಹಾಕಿ ಆರೆಸ್ಸೆಸ್, ಬಿಜೆಪಿ, ಭಜರಂಗದಳ, ಹಿಂದೂ ಜಾಗರಣ ವೇದಿಕೆ, ವಿಶ್ವ ಹಿಂದೂ ಪರಿಷತ್ ಇತ್ಯಾದಿ ಸಂಘ ಪರಿವಾರಕ್ಕೆ ಕ್ಲೀನ್‌ಚೀಟ್ ಕೊಟ್ಟು ಬಿಟ್ಟರು. ಇದರ ಬೆನ್ನಲ್ಲೇ ಮುತಾಲಿಕ್ ಹೇಳಿಕೆ ಕೊಟ್ಟು ಬಂಧಿತರ್‍ಯಾರೂ ಶ್ರೀರಾಮ ಸೇನೆಯ ಕಾರ್ಯಕರ್ತರಲ್ಲ, ಶ್ರೀರಾಮ ಸೇನೆಗೂ ಸಿಂಧಗಿ ಪಾಕ್ ಧ್ವಜಾರೋಹಣಕ್ಕೂ ಸಂಬಂಧವಿಲ್ಲ ಎಂಬ ವಿರೋಧಾಭಾಸದ ಹೇಳಿಕೆ ಕೊಟ್ಟಿದ್ದ.

ಹಾಗೇ ನೋಡಿದರೆ ಶ್ರೀರಾಮ ಸೇನೆ ಮತ್ತು ಭಜರಂಗದಳ ತಾಂತ್ರಿಕವಾಗಿ ಬೇರೆ ಬೇರೆ ಸಂಘಟನೆಗಳಾದರೂ ತಾತ್ವಿಕವಾಗಿ ಒಂದೇ ತಾಯಿಯ ಮಕ್ಕಳು. ಭಜರಂಗದಳದ ಘಾಟು ಕಮ್ಮಿಯಾದರೆ ಶ್ರೀರಾಮ ಸೇನೆ ಸ್ಟ್ರಾಂಗ್ ಅಫೀಮಿದ್ದಂತೆ. ಕಠೋರತೆಯ ಪ್ರಮಾಣದ ಹೊರತಾಗಿ ಎರಡೂ ಒಂದೇ ಜಾತಿಯ, ಒಂದೇ ರಕ್ತದ, ಒಂದೇ ತಾಯಿಯ ಮಕ್ಕಳು. ಆದರೆ ಅಧಿಕಾರ ಮತ್ತು ಫಲಾನುಭವದ ಹಂಚಿಕೆಯ ವಿಷಯವಾಗಿ ಮುತಾಲಿಕ್ ಸೇನೆ ಸದ್ಯ ಆರೆಸ್ಸೆಸ್ ವಿರುದ್ಧ ಮುನಿಸಿಕೊಂಡಿದೆ. ಸೇನೆಯ ತೀವ್ರಗಾಮಿ ಧೋರಣೆಯಿಂದಾಗಿ ಆಡಳಿತಾರೂಢ ಬಿಜೆಪಿಗೆ ಪದೇಪದೇ ಮುಜುಗರ, ಮುಖಭಂಗವಾಗುತ್ತಿದೆ. ಹೀಗಾಗಿ ಬಿಜೆಪಿ ಶ್ರೀರಾಮ ಸೇನೆ ವಿರುದ್ಧ ಕಿಡಿಕಾರುತ್ತಿದೆ. ಯಾವತ್ತು ಯಡಿಯೂರಪ್ಪ ಮುಖ್ಯ ಮಂತ್ರಿ ಗಾದಿಯಿಂದ ಇಳಿದು ಮುಖ್ಯಮಂತ್ರಿ ಸೇರಿದಂತೆ ಒಬ್ಬೊಬ್ಬರೇ ಬಿಜೆಪಿ ಮಂತ್ರಿಗಳು ಜೈಲು ಪಾಲಾಗತೊಡಗಿದರೋ ಬಿಜೆಪಿಗೆ ಅಧಿಕಾರಚ್ಯುತಿಯ ಭಯ ಕಾಡಲಾರಂಭಿಸಿತು.

ಒಂದೆಡೆ ಯಡ್ಡಿ ನೇತೃತ್ವದಲ್ಲಿ ಲಿಂಗಾಯತರು, ಇನ್ನೊಂದೆಡೆ ಬಳ್ಳಾರಿ ಗಣಿ ಗ್ಯಾಂಗಿನ ಶ್ರೀರಾಮುಲು ನೇತೃತ್ವದಲ್ಲಿ ಹಿಂದುಳಿದವರು ಬಿಜೆಪಿಗೆ ಕೈಕೊಟ್ಟರೆಂದರೆ ಮತ್ತೆ ಅಧಿಕಾರಕ್ಕೆ ಬರುವುದು ಕಷ್ಟವೆನಿಸಿದೆ. ಈ ನಷ್ಟವನ್ನು ಕೋಮುಗಲಭೆಗಳ ಮೂಲಕ ಹಿಂದೂ ಓಟ್‌ಬ್ಯಾಂಕ್ ವೃದ್ಧಿಸುವಂತೆ ಮಾಡುವ ಷಡ್ಯಂತ್ರವನ್ನು ಸಂಘ ಪರಿವಾರ ಹೆಣೆದಿದೆ. ಇದರ ಫಲವೇ ಹುಬ್ಬಳ್ಳಿಯ ಹಿಂದೂ ಶಕ್ತಿ ಸಮಾವೇಶ ಮತ್ತು ಇತ್ತೀಚೆಗೆ ಕರಾವಳಿಯುದ್ದಕ್ಕೂ ಸಂಭವಿಸಿದ ಕೋಮುದಳ್ಳುರಿ.

ಹುಬ್ಬಳ್ಳಿಯ ಹಿಂದೂ ಶಕ್ತಿ ಸಂಗಮಕ್ಕೆ ಪೂರ್ವಭಾವಿಯಾಗಿ ಬಿಸಿ ಹುಟ್ಟಿಸಲೆಂದೇ ರಚಿಸಿದ ಷಡ್ಯಂತ್ರದ ಫಲವಾಗೇ ಸಿಂಧಗಿಯಲ್ಲಿ ಪಾಕ್ ಧ್ವಜ ಹಾರಿಸಲಾಯಿತು. ಆದರೆ ಸರ್ಕಾರಕ್ಕೆ ಮುಜುಗರವಾಗಬಾರದಲ್ಲ, ಅದಕ್ಕೆ ಇಡೀ ಪ್ರಕರಣದ ಹೊಣೆಯನ್ನು ಶ್ರೀರಾಮ ಸೇನೆಯ ತಲೆಗೆ ಕಟ್ಟಲಾಯ್ತು.

ವಾಸ್ತವವಾಗಿ ಪಾಕ್ ಧ್ವಜ ಪ್ರಕರಣದ ಆರೋಪಿಗಳೆಲ್ಲರೂ ಆರೆಸ್ಸೆಸ್ ಕಾರ್ಯಕರ್ತರು. ಇವರಿಗೂ ಆರೆಸ್ಸೆಸ್‌ಗೂ ಇರುವ ನಂಟಿಗೆ ಒಂದಲ್ಲ ಹತ್ತು ಸಾಕ್ಷ್ಯಾಧಾರಗಳಿವೆ. ಪತ್ರಿಕೆ ಈ ಬಗ್ಗೆ ಕಳೆದೊಂದು ವಾರದಿಂದ ನಡೆಸಿದ ಸುವಿಸ್ತಾರ ತನಿಖೆಯ ವಿವರಗಳು ಈ ರೀತಿ ಇವೆ.

ಬಂಧಿಸಲ್ಪಟ್ಟ ಏಳು ಮಂದಿಯ ಪೈಕಿ ಆರು ಮಂದಿ ಹುಟ್ಟಾ ಆರೆಸ್ಸೆಸ್ ಕಾರ್ಯಕರ್ತರೆಂಬುದಕ್ಕೆ ಮೊದಲ ದಾಖಲೆಯಾಗಿ ಸಿಗುವುದು 2011 ರಲ್ಲಿ ಬಳ್ಳಾರಿಯ ಹಗರಿಬೊಮ್ಮನಹಳ್ಳಿಯಲ್ಲಿ ನಡೆದ ಆರೆಸ್ಸೆಸ್ ಐಟಿಸಿ ಕ್ಯಾಂಪಿನ ಐಡೆಂಟಿಟಿ ಕಾರ್ಡುಗಳು. 3 ನೇ ಆರೋಪಿ ರಾಕೇಶ್ ಮಠ ಮತ್ತು ಆರನೇ ಆರೋಪಿ ಸುನೀಲ್ ಅಗಸರ್ ಇಬ್ಬರೂ ಈ ಐಟಿಸಿ ಕ್ಯಾಂಪ್ ಅಂದರೆ ಪ್ರಾಥಮಿಕ ಶಿಕ್ಷಣ ವರ್ಗದಲ್ಲಿ ಭಾಗವಹಿಸುವುದಕ್ಕೆ ಐಡೆಂಟಿಟಿ ಕಾರ್ಡುಗಳನ್ನು ಪಡೆದಿದ್ದಾರೆ. ಹೀಗೆ ಪಡೆದ ಐಡೆಂಟಿಟಿ ಕಾರ್ಡಿನ 701 ನೇ ನಂಬರ್ ಸುನೀಲ್ ಅಗಸರ್‌ನದಾದರೆ 702 ನೇ ನಂಬರ್, ರಾಕೇಶ್ ಮಠನದ್ದು!

ಹೀಗೆ ಆರೆಸ್ಸೆಸ್ ಮೇಲಾಧಿಕಾರಿಗಳು ನೀಡಿದ ಗುರುತುಚೀಟಿಗೆ ಕ್ಯಾಂಪಿನ ಶಾಖಾಧಿಕಾರಿಯ ಸಹಿ ಕೂಡ ಇದೆ.

ಇದಕ್ಕಿಂತಲೂ ತಾಜಾ ಸಾಕ್ಷಿಯಂತಿರುವುದು ಮೊನ್ನೆ ಹುಬ್ಬಳ್ಳಿಯಲ್ಲಿ ನಡೆದ ಹಿಂದೂ ಶಕ್ತಿ ಸಂಗಮಕ್ಕೆ ಬಂಧಿತರ ಪೈಕಿ ನಾಲ್ವರು ಪಡೆದಿದ್ದ ಕೂಪನ್ನುಗಳು. ಹುಬ್ಬಳ್ಳಿಯ ಆರೆಸ್ಸೆಸ್ ಸಮಾವೇಶಕ್ಕೆ ಸರಸಂಘ ಚಾಲಕ ಮೋಹನ್ ಭಾಗವತ್, ಸರಕಾರ್ಯವಾಹ ಸುರೇಶ್ ಭಯ್ಯಾ ಭೇಂಡೆ ಮುಂತಾದ ಉನ್ನತ ಆರೆಸ್ಸೆಸ್ ನಾಯಕರು ಬರುವುದು ನಿಶ್ಚಿತವಾಗಿತ್ತು. ಇಂಥದೊಂದು ಕಾರ್ಯಕ್ರಮಕ್ಕೆಂದು 6 ತಿಂಗಳುಗಳ ಹಿಂದೆಯೇ ಶಿಬಿರಾರ್ಥಿಗಳಿಂದ ತಲಾ ನೂರು ರೂಪಾಯಿ ಪಡೆದು ಕೂಪನ್ನುಗಳನ್ನು ವಿತರಿಸಲಾಗಿತ್ತು. ಜನವರಿ 27, 28 ಮತ್ತು 29 ರಂದು ಹುಬ್ಬಳ್ಳಿಯಲ್ಲಿ ನಡೆಯಲಿರುವ ಹಿಂದೂ ಶಕ್ತಿ ಸಂಗಮಕ್ಕೆಂದು ಈ ರೀತಿ ಕೂಪನ್ ಪಡೆದಿದ್ದವರ ಪೈಕಿ ಈಗ ಬಂಧಿತರಾಗಿರುವ ಮೊದಲ ಆರೋಪಿ ಸುನೀಲ್ ಸೋಲಂಕರ್, 2 ನೇ ಆರೋಪಿ ರಾಕೇಶ್ ಮಠ, 5 ನೇ ಆರೋಪಿ ರೋಹಿತ್ ನಾವಿ ಮತ್ತು 6 ನೇ ಆರೋಪಿ ಸುನೀಲ್ ಅಗಸರ್ ಪ್ರಮುಖರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಹೆಸರಲ್ಲಿ ಈ ನಾಲ್ವರಿಗೂ ಹುಬ್ಬಳ್ಳಿ ಸಮಾವೇಶದ ಕೂಪನ್ನುಗಳನ್ನು ವಿತರಿಸಲಾಗಿತ್ತು.

ಪಾಕ್ ಧ್ವಜದ ಕಾರಣಕರ್ತರು ಆರೆಸ್ಸೆಸ್ ಕಾರ್ಯಕರ್ತರೆಂಬುದಕ್ಕೆ ಇದಕ್ಕಿಂತ ಬೇಕೆ? ಶ್ರೀರಾಮಸೇನೆ ಅಸ್ತಿತ್ವಕ್ಕೆ ಬಂದಿದ್ದು 2007 ರಲ್ಲಿ. ಹಾಗೊಮ್ಮೆ ಇವರೆಲ್ಲ ಶ್ರೀರಾಮಸೇನೆಯವರೇ ಆಗಿದ್ದರೆ ಮೊನ್ನೆ ನಡೆದ ಹುಬ್ಬಳ್ಳಿ ಆರೆಸ್ಸೆಸ್ ಸಮಾವೇಶ ಮತ್ತು 2011 ರಂದು ಹಗರಿಬೊಮ್ಮನಹಳ್ಳಿಯಲ್ಲಿ ನಡೆದ ಆರೆಸ್ಸೆಸ್ ಪ್ರಾಥಮಿಕ ಶಿಕ್ಷಾ ವರ್ಗದಲ್ಲಿ ಹೇಗೆ ಮತ್ತು ಏಕೆ ಭಾಗವಹಿಸುತ್ತಿದ್ದರು?

ಇದಕ್ಕೂ ಮುನ್ನ 2010 ರ ಮೇ 28 ರಂದು ಶುಕ್ರವಾರ ಬೆಳಗ್ಗೆ 10 ಕ್ಕೆ ಬಿಜಾಪುರದ ಶ್ರೀಜ್ಞಾನ ಯೋಗ ಮಂದಿರದಲ್ಲಿ ನಡೆದ ಆರೆಸ್ಸೆಸ್ ಬೈಠಕ್‌ಗೆ 'ನೀವು ಅಪೇಕ್ಷಿತರು ತಪ್ಪದೇ ಬರಬೇಕು' ಎಂದು ಸಂಪರ್ಕಕ್ಕೆ ಕೆಲವು ಫೋನ್ ನಂಬರುಗಳನ್ನು ನಮೂದಿಸಿದ ಆರೆಸ್ಸೆಸ್ ನಾಯಕರೊಬ್ಬರ ಸಹಿಯುಳ್ಳ ಪತ್ರವೊಂದು ರಾಕೇಶ್ ಮಠ ಮತ್ತು ಮೊದಲ ಆರೋಪಿ ಸುನೀಲ ಸೋಲಂಕರ್‌ಗೆ ಬಂದಿದೆ. ಹೀಗೆ ನೀಡಿದ ಫೋನ್ ನಂಬರ್‌ಗಳೆಲ್ಲವೂ ಆರೆಸ್ಸೆಸ್ ನಾಯಕರ ಖಾಸಗಿ ನಂಬರುಗಳೇ. ಅನಂತರ 2011 ರ ಅಕ್ಟೋಬರ್ 8 ರಿಂದ 16 ರವರೆಗೆ ಬಿಜಾಪುರ ಸಮೀಪದ ಗೊಳಸಂಗಿಯಲ್ಲಿ ಮತ್ತೊಂದು ಆರೆಸ್ಸೆಸ್ ITC ಕ್ಯಾಂಪ್ ನಡೆಯುತ್ತದೆ. ಈಗಾಗಲೇ ಪ್ರಾಥಮಿಕ ಶಿಕ್ಷಾವರ್ಗ ಮುಗಿಸಿದ ರಾಕೇಶ್ ಮಠ ಮತ್ತು ಸುನೀಲ್ ಅಗಸರ್ ಈ ಕ್ಯಾಂಪಿನಲ್ಲಿ ಪ್ರಬಂಧಕರಾಗಿ ಅಂದರೆ ಸೇವಾ ಕಾರ್ಯಕರ್ತರಾಗಿ ಭಾಗವಹಿಸಿದ ಬಗ್ಗೆ ದಾಖಲೆಗಳಿವೆ.

ಇನ್ನೂ ಹೇಳಬೇಕೆಂದರೆ ಪ್ರಮುಖ ರಾಕೇಶ್ ಮಠ ಸಿಂಧಗಿ ಆರೆಸ್ಸೆಸ್ ಶಾಖೆಗೆ ಮುಖ್ಯ ಶಿಕ್ಷಕನಾಗಿದ್ದ. ಅಗಸರ್ ಪ್ರತಿನಿತ್ಯ ಪ್ರಾರ್ಥನೆ ಹೇಳಿಕೊಡುವ ಪ್ರಾರ್ಥನಾ ಪ್ರಮುಖನಾಗಿದ್ದ. ಮೊದಲ ಆರೋಪಿ ಸುನೀಲ್ ಸೋಲಂಕರ್ ಭಾಗ ಪ್ರಮುಖ್ ಅರ್ಥಾತ್ ಮಂಡಲ ಪ್ರಮುಖ ಅಂದರೆ ಯಾವುದೇ ಆರೆಸ್ಸೆಸ್ ಬೈಠಕ್‌ಗಳಿಗೆ ಸುತ್ತಮುತ್ತಲ ಹಳ್ಳಿಗಳಿಂದ ಜನರನ್ನು ಹೊರಡಿಸುವ ಕಾರ್ಯ ನಿರ್ವಹಿಸುತ್ತಿದ್ದ!

ಇವೆಲ್ಲ ಕಾಗದದ ದಾಖಲೆಗಳಾದರೆ ಪಾಕ್ ಧ್ವಜದ ಆರೋಪಿಗಳೆಲ್ಲರೂ ಪಕ್ಕಾ ಆರೆಸ್ಸೆಸ್ ಕಟ್ಟಾಳುಗಳೆಂಬುದಕ್ಕೆ ಫೋಟೋ ಸಹಿತ ದಾಖಲೆಗಳಿವೆ. 2011 ರ ಆಗಸ್ಟ್ 6 ರಂದು ಬಾಗಲಕೋಟೆಯಲ್ಲಿ ಹಿಂದೂ ಜಾಗರಣ ವೇದಿಕೆಗೆ 25 ವರ್ಷ ತುಂಬಿದ ಬಗ್ಗೆ ಅದ್ದೂರಿ ಸಮಾರಂಭವೊಂದನ್ನು ಆರೆಸ್ಸೆಸ್ ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಈಗ ಬಂಧಿತರಾಗಿರುವ ಸುನೀಲ್ ಸೋಲಂಕರ್, ರಾಕೇಶ್ ಮತ್ತು ಸುನೀಲ್ ಅಗಸರ್ ಮೂವರೂ ಭಾಗವಹಿಸಿದ್ದಕ್ಕೆ ಆ ಕಾರ್ಯಕ್ರಮದಲ್ಲಿ ಅವರುಗಳು ಧರಿಸಿದ್ದ ಐಡೆಂಟಿಟಿ ಕಾರ್ಡುಗಳೇ ಸಾಕ್ಷಿ ಹೇಳುತ್ತವೆ.

ಈ ಗುರುತು ಚೀಟಿಯಲ್ಲಿ ಮೂವರ ಹೆಸರುಗಳನ್ನೂ ಸ್ಪಷ್ಟವಾಗಿ ನಮೂದಿಸಲಾಗಿದೆ. ಅದಕ್ಕೆ ಕಾರ್ಯಕ್ರಮದ ವ್ಯವಸ್ಥಾಪಕರ ಸಹಿಯೂ ಇದೆ. ಇದರ ಮರುದಿನ ಅಂದರೆ 2011 ರ ಆಗಸ್ಟ್ 7 ರಂದು ಆರೆಸ್ಸೆಸ್‌ನ ತಾಲ್ಲೂಕು ಪದಾಧಿಕಾರಿಗಳು ಮತ್ತು ಅದಕ್ಕೂ ಮೇಲ್ಪಟ್ಟವರ ಬೈಠಕ್‌ನಲ್ಲಿ ರಾಕೇಶ್ ಮಠ ಭಾಗವಹಿಸಿದ್ದನೆಂಬುದಕ್ಕೆ ಇದಕ್ಕೆಂದೇ ನೀಡಿದ ಮತ್ತೊಂದು ಕೂಪನ್ ಸಾಕ್ಷಿ ಕಲ್ಪಿಸುತ್ತದೆ. ಇದರ ಪ್ರವೇಶಕ್ಕೆ ಅಂದರೆ ಐಡೆಂಟಿಟಿ ಕಾರ್ಡ್ ನಂಬರ್ 809 ರಲ್ಲಿ ರಾಕೇಶ್ ಮಠನ ಹೆಸರನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ.



ಆರೆಸ್ಸೆಸ್ ಕಾರ್ಯಕ್ರಮವೊಂದರಲ್ಲಿ ರಾಕೇಶ್ ಮಠನ ಕತ್ತಿವರಸೆ

ಪಾಕ್ ಧ್ವಜ ಪ್ರತಿಭಟಿಸಿದವರ ಮಧ್ಯೆ ರಾಕೇಶ್ ಮಠದ ಗಣವೇಶ

ಅವತ್ತು ಭಾಗಲಕೋಟೆಯ ಹಿಂದೂ ಜಾಗರಣ ವೇದಿಕೆಯ ಕಾರ್ಯಕ್ರಮದ ವೇದಿಕೆಯೇರಿದ ರಾಕೇಶ್ ಮಠ ಮುಸ್ಲಿಮರನ್ನು ಕೊಲ್ಲಲು ಶಿವಾಜಿಯಂತೆ ಯಾವ ರೀತಿ ತಲವಾರ್ ಬಳಸಬೇಕೆಂದು ಕತ್ತಿವರಸೆಯ ನೃತ್ಯವೊಂದನ್ನು ಆಡಿ ತೋರಿಸಿದ ಫೋಟೋಗಳೇ ಆತನ ಆರೆಸ್ಸೆಸ್ ಹಿನ್ನೆಲೆಯನ್ನು ಸಾರಿ ಹೇಳುತ್ತದೆ. ಹಿನ್ನೆಲೆಯಲ್ಲಿ ಶಿವಾಜಿ ಮತ್ತು ಭಗವತಿ ದೇವಿಯ ಫೋಟೋ ಮತ್ತು ಹಿಂದೂ ಜಾಗರಣ ವೇದಿಕೆಯ ಬ್ಯಾನರ್ ಸ್ಪಷ್ಟವಾಗಿ ಕಾಣಿಸುತ್ತಿದೆ.

ಇದೆಲ್ಲವೂ ಪಾಕ್ ಧ್ವಜ ಪ್ರಕರಣದ ಆರೋಪಿಗಳ ಆರೆಸ್ಸೆಸ್ ನೆಂಟಸ್ತಿಕೆಗೆ ಸ್ಪಷ್ಟ ದಾಖಲೆ ಮತ್ತು ಫೋಟೋ ಸಮೇತ ಸಾಕ್ಷಿಗಳು. ಹೀಗೆ ಪಾಕ್ ಧ್ವಜ ಹಾರಿಸಿ ಮುಸ್ಲಿಮರ ವಿರುದ್ಧ ಪುಂಡಾಟಿಕೆಗಿಳಿಯಲು ಆರೆಸ್ಸೆಸ್ ಹೂಡಿದ ಷಡ್ಯಂತ್ರದ ನಗ್ನಸಾಕ್ಷಿಯಂತಿದ್ದರೆ ಅದು 2 ನೇ ಆರೋಪಿ ರಾಕೇಶ್ ಮಠ ಆರೆಸ್ಸೆಸ್ ಚೆಡ್ಡಿ ಧರಿಸಿ ಪಾಕ್ ಧ್ವಜದ ವಿರುದ್ಧದ ಸಂಘ ಪರಿವಾರದ ಪ್ರತಿಭಟನೆಯಲ್ಲಿ ಭಾಗವಹಿಸಿರುವ ಫೋಟೋ. ರಾತ್ರಿ ತನ್ನ ನೇತೃತ್ವದಲ್ಲೇ ಪಾಕ್ ಧ್ವಜಾರೋಹಣ ಮಾಡಿದ ರಾಕೇಶ್ ಮಠ ಮರುದಿನ ಬೆಳಿಗ್ಗೆ ಮಾಮೂಲಿನಂತೆ ಖಾಕಿ ಚೆಡ್ಡಿ ಧರಿಸಿ ಶಾಖೆಗೆ ಬಂದವನು ಜೊತೆಗಿದ್ದ ಎಲ್ಲ ಚೆಡ್ಡಿಧಾರಿಗಳನ್ನು ಕರಕೊಂಡು ಪ್ರತಿಭಟನೆಯಲ್ಲಿ ಭಾಗವಹಿಸುತ್ತಾನೆ.

ಖಾಕಿ ಚೆಡ್ಡಿ ಧರಿಸಿ ಪ್ರತಿಭಟನೆಯಲ್ಲಿ ಕೂತ, ಅನಂತರ ಪಾಕ್ ಧ್ವಜ ಹಾಕಿದವರ ವಿರುದ್ಧ ಟೈರ್‌ಗೆ ಬೆಂಕಿ ಹಾಕಿ ಚೆಡ್ಡಿ ಧರಿಸಿ ನಿಂತ ರಾಕೇಶನ ಫೋಟೋಗಳು ಆತ ಶ್ರೀರಾಮ ಸೈನಿಕನಲ್ಲ ಹುಟ್ಟಾ ಆರೆಸ್ಸೆಸ್ ಕಟ್ಟಾಳು ಎಂಬುದಕ್ಕೆ ಜ್ವಲಂತ ಸಾಕ್ಷಿಗಳು. ಈ ಎಲ್ಲಾ ಫೋಟೋ ಮತ್ತು ದಾಖಲೆಗಳನ್ನು ಇಲ್ಲಿ ಯಥಾವತ್ತಾಗಿ ಮುದ್ರಿಸುತ್ತಿದ್ದೇವೆ. ಅಲ್ಲಿಗೆ ಸಿಂಧಗಿ ತಹಶೀಲ್ದಾರ್ ಕಚೇರಿಯ ಮೇಲೆ ಪಾಕ್ ಧ್ವಜ ಹಾರಿಸಿದವರೆಲ್ಲ, ಆರೆಸ್ಸೆಸ್ ಕಾರ್ಯಕರ್ತರೆಂಬುದಕ್ಕೆ ಸಣ್ಣ ಅನುಮಾನ ಕೂಡ ಬೇಕಿಲ್ಲ. ಹುಬ್ಬಳ್ಳಿಯ ಹಿಂದೂ ಶಕ್ತಿ ಸಂಗಮದಲ್ಲಿ ಮುಖ್ಯಮಂತ್ರಿ ಸದಾನಂದ ಗೌಡರೇ ಖಾಕಿ ಚೆಡ್ಡಿ ಧರಿಸುತ್ತಾರೆ. ಅವರ ಸಂಪುಟದ ಅರ್ಧ ಡಜನ್ ಮಂತ್ರಿಗಳೂ ಗಣವೇಷ ಧರಿಸಿ ಪೋಜು ಕೊಟ್ಟಿದ್ದಾರೆ. ಇದಕ್ಕೆ ಪೂರಕವಾಗೇ ಸಿಂಧಗಿಯಲ್ಲಿ ಚೆಡ್ಡಿ ಪಡ್ಡೆಗಳು ಪಾಕ್ ಧ್ವಜ ಹಾರಿಸುತ್ತಾರೆ. ಗೃಹಮಂತ್ರಿ ಅಶೋಕ್ ಏನೂ ಗೊತ್ತಿಲ್ಲ ಎಂಬಂತೆ ಶ್ರೀರಾಮಸೇನೆಯನ್ನು ನಿಷೇಧಿಸುವ ಮಾತಾಡಿಬಿಟ್ಟರೆ ಜನ ನಂಬಬೇಕೆ? ನಿಷೇಧಿಸಬೇಕಾಗಿರುವುದು ಶ್ರೀರಾಮ ಸೇನೆಯನ್ನೋ ಅಥವಾ ಸಂಘ ಪರಿವಾರವನ್ನೋ?

ಯಾರು ಸರ್ಕಾರವನ್ನು ನಡೆಸುತ್ತಿದ್ದಾರೋ ಅವರೇ ಪಾಕಿಸ್ತಾನದ ಧ್ವಜವನ್ನು ಹಾರಿಸಿದ್ದಾರೆ. ಪಾಪ, ಪೊಲೀಸರು ಇನ್ನೇನು ತಾನೇ ಮಾಡಲು ಸಾಧ್ಯ?

ಕನಿಷ್ಠ ರಾಜ್ಯಪಾಲರಾದರೂ ಇದನ್ನು ಗಮನಿಸಬೇಕಲ್ಲವೆ?



ಲೇಡಿ ಇನ್ಸ್‌ಪೆಕ್ಟರ್ ಮೇಲೆ ಹಲ್ಲೆ


ಪಾಂಡೆ ಪತ್ನಿಗೆ ಐಎಎಸ್ ಮದ



ವರ್ಷದ ನನ್ನ ಮಗನ ಮೇಲೆ ಆ ಲೇಡಿ ಹೊಡೆಯಲು ಕೈ ಎತ್ತಿದ್ದನ್ನು ನೋಡಿ ನನ್ನಿಂದ ...ಕೆ ಆಗಲಿಲ್ಲ, ಅದಕ್ಕೆ ತಾಳ್ಮೆ ಕಳೆದುಕೊಂಡು ...ಗೆರಡು ಬಾರಿಸಿಬಿಟ್ಟೆ!

...ಐಎಎಸ್ ಅಧಿಕಾರಿ ಪಂಕಜ್ ಕುಮಾರ್ ...ತ್ನಿ ಅನುಜಾ ಪಾಂಡೆ ತನ್ನ ಸೊಕ್ಕಿನ ವರ್ತನೆಗೆ ...ಮಜಾಯಿಷಿ. ಓರ್ವ ಮಹಿಳಾ ಪೊಲೀಸ್ ... ಮೇಲೆ ನೆರೆದ ನೂರಾರು ಜನರೆದುರು ...ಈ ಐಎಎಸ್ ಪತ್ನಿಯ ಹೇಳಿಕೆ, ಹೊಡೆದ ...ತರ ಪರಾರಿಯಾಗಿ ತಲೆಮರೆಸಿಕೊಂಡ ಪರಿ ... ಪೊಲೀಸರು ಕೊಟ್ಟ ಪ್ರತಿಕ್ರಿಯೆ ಎಲ್ಲವನ್ನೂ ...ದ್ದರೆ ಒಂದಂತೂ ಸ್ಪಷ್ಟವಾಗುತ್ತದೆ, ಅದು ... ಐಎಎಸ್ ಅಧಿಕಾರಿಗಳ ಐಷಾರಾಮಿ, ...ತ್ತು ಅಧಿಕಾರದ ದೌಲತ್ತು.

...ಬ್ಬಳ್ಳಿಯ ಹೆಸ್ಕಾಮ್‌ನ ಎಂ.ಡಿ.ಯಾಗಿರುವ ...ಮೂಲದ ಪಂಕಜ್ ಕುಮಾರ್ ಪಾಂಡೆ ಕರ್ನಾಟಕ ... ಕಿಲಾಡಿ ಐಎಎಸ್ ಅಧಿಕಾರಿಗಳಲ್ಲೊಬ್ಬ. ...ಲದ ಬೋವಿ ಕಾಲೋನಿಯ ಪ್ರೆಸ್ಟಿಜ್ ಸೇಂಟ್ ...ಪಾರ್ಟ್‌ಮೆಂಟ್‌ನ 604 ನೇ ಫ್ಲಾಟ್‌ನಲ್ಲಿ ಈತನ ... ಈತನ ಪತ್ನಿಯೇ ಅನುಜಾ ಪಾಂಡೆ. ಈಗ ...ಸ್ಪೆಕ್ಟರ್ ಅಂಜು ಮಾಲಾ ನಾಯಕ್‌ಗೆ ...ಚೋದ್' ಎಂದು ಬೈದು ಇಷ್ಟೆಲ್ಲಾ ...ಕಾರಣನಾದ ಎಂಟು ...ವೀರ ಅಶ್ವಿನ್ ಇದೇ ...ತ್ತು ಪಂಕಜ್ ...ಮುದ್ದಿನ ಮಗ. ...ರ್ಷದ ಪೋರನೊಬ್ಬ ...ಲೇಡಿ ಇನ್ಸ್‌ಪೆಕ್ಟರ್‌ಳನ್ನು ...ಚೋದ್ ಎಂದು ...ವೆಂದರೆ, ಹೀಗೆ ಬಯ್ದ ... ಬಾಲಕನನ್ನು ಗದರಿದ ...ಪೆಕ್ಟರ್ ಕೆನ್ನೆಗೆ ...ಪತ್ನಿಯೋರ್ವಳು ...ಕೂ ಇಲ್ಲದೆ ಬಾರಿಸುತ್ತಾಳೆಂದರೆ; ...ಅಧಿಕಾರಿಗಳ ಅಟ್ಟಹಾಸ ಮತ್ತು ಐಷಾರಾಮಿ ...ಾವ ಮಟ್ಟಕ್ಕಿರಬೇಡ?



...ಸ್ ಅಧಿಕಾರಿಗಳ ಪತ್ನಿಯರ ಕ್ಲಬ್ ಎಂಬ ...ಂಟವಿದೆ. ಅದಿರುವುದು ಇನ್‌ಫೆಂಟ್ರಿ ರಸ್ತೆಯ ...ಅಧಿಕಾರಿಗಳ ಸಂಘದ ಕಟ್ಟಡದಲ್ಲಿ. ಇಲ್ಲಿ ಪ್ರತಿನಿತ್ಯ ...ಪತ್ನಿಯರು ಸೇರಿ ಇಸ್ಪೀಟ್ ಆಡುತ್ತಾರೆ. ಆದರೆ ... ಮೂಲದ ಐಎಎಸ್ ಅಧಿಕಾರಿಗಳ ಪತ್ನಿಯರೂ ...ರುತ್ತಾದ್ದರಿಂದ ಇಂಥ ಲೋಕಲ್ ಹೆಂಗಸರ ...ಸುವುದೇ ತಮಗೆ ಅವಮಾನವೆಂದು ಭಾವಿಸಿದ ...ಡಿಯನ್ ಐಎಎಸ್‌ಗಳ ಪತ್ನಿಯರೆಲ್ಲ ಇತ್ತೀಚೆಗೆ ...ಪ್ರತ್ಯೇಕ ಕ್ಲಬ್ ಒಂದನ್ನು ಸ್ಥಾಪಿಸಿದ್ದಾರೆ. ಅದು ...ಂಗಲದ ಬೆಥನಿ ಸ್ಕೂಲ್ ಪಕ್ಕದಲ್ಲಿದೆ. ಹೀಗೆ ...ಬಿಹಾರ್, ಗುಜರಾತ್, ರಾಜಸ್ಥಾನ್ ಮೂಲದ ...ಳ ಪತ್ನಿಯರೆಲ್ಲ ಸೇರಿಕೊಂಡು ಇಸ್ಪೀಟು, ಮೋಜು, ...ರ್ಟಿಗೆಂದು ಸ್ಥಾಪಿಸಿಕೊಂಡ ಈ ಕೋರಮಂಗಲದ ... ಕ್ಲಬ್ಬಿಗೆ ಪಂಕಜ್ ಪಾಂಡೆಯ ಪತ್ನಿ ಅನುಜಾ ... ಸೆಕ್ರೆಟರಿ.

...ರ್ ಸೇಠ್, ಸುಬೀರ್ ಹರಿಸಿಂಗ್, ಅನಿಲ್ ...ಝಾ, ಸಂದೀಪ್ ದವೆ ಹಿರಿಯ ಐಎಎಸ್ ...ಜೈನ್, ಮತ್ತೊಬ್ಬ ನಾರ್ತಿ ಐಎಎಸ್ ರಾಜೀವ್ ...ಶಿಕ್ ಮುಖರ್ಜೀ, ರಾಜ್‌ಕುಮಾರ್ ಕತ್ರಿ, ... ಶ್ರೀವಾಸ್ತವ, ತುಷಾರ್ ಗಿರಿನಾಥ್, ಪ್ರಭು ...ಯೋಗೇಂದ್ರ ತ್ರಿಪಾಠಿ; ಇತ್ಯಾದಿ ಹಿಂದಿವಾಲಾ ... ಅಧಿಕಾರಿಗಳು ಕನ್ನಡಿಗರ ಪಾಲಿಗೆ ಅಕ್ಷರಶಃ ...ಗಳು. ಕೋಲಾರದಲ್ಲಿ ನಾರ್ತಿ ಐಎಎಸ್ ಓರ್ವ ...ಾಲಕನಸಹಿತ ಕೀಳಾಗಿ ಕಂಡು ಲಾಠಿ ಹಿಡಿದು ... ಮೈಸೂರಿನಲ್ಲಿ ಇನ್ನೊಬ್ಬ ಮಹಾರಾಜನಂತೆ ...ೀರಿ ಬರುತ್ತಿದ್ದ. ಮತ್ತೊಬ್ಬ ಐಎಎಸ್ ತನ್ನ ...ಸದ ಪ್ರವೇಶದ್ವಾರ ನಿಷೇಧಿಸಿದ್ದ ಯೋಗೇಂದ್ರ ...ಂಬ ಐಎಎಸ್‌ಗೆ ಆರು ತಿಂಗಳಿಗೊಂದು

ಐಷಾರಾಮಿ ಕಾರು ಕೊಳ್ಳುವ ಖಯಾಲಿ. ರಾಜೀವ್ ಚಾವ್ಲಾ ಕನ್ನಡದ ಅರ್ಜಿ ಕಂಡರೇನೇ ಹರಿದುಹಾಕುತ್ತಿದ್ದ.

ಮಂತ್ರಿ-ಶಾಸಕರುಗಳು ಐದು ವರ್ಷಕ್ಕೊಮ್ಮೆ ಬದಲಾದರೆ ಈ ಐಎಎಸ್‌ಗಳದ್ದು ಜನ್ಮಾಪಿ ರಾಜ್ಯಭಾರ. ಕೆಲಸ ಕರ್ನಾಟಕದಲ್ಲಾದರೂ ಹೊಡೆದ ಕೊಳೆಯನ್ನು ಹೂಡುವುದು ತಮ್ಮ ತಮ್ಮ ತವರು ರಾಜ್ಯದಲ್ಲಿ. ಬ್ರಿಟಿಷರನ್ನೂ ಮೀರಿಸಿದ ಐಷಾರಾಮಿ, ಅಹಂಕಾರ ಮತ್ತು ಭ್ರಷ್ಟಾಚಾರದ ಪ್ರತಿಫಲವಾಗಿ ಇಂಥ ಐಎಎಸ್ ಗಳ ಪತ್ನಿಯರು ಮತ್ತು ಮಕ್ಕಳು ಸೊಕ್ಕಿಗೆ ಬೀಳುತ್ತಾರೆ.




ಅಂಜುಮಾಲಾ

ಈಗ ಹುಬ್ಬಳ್ಳಿಯ ಹೆಸ್ಕಾಮ್ ಎಂ.ಡಿ.ಯಾಗಿರುವ ಪಂಕಜ್‌ಕುಮಾರ್ ಪಾಂಡೆಯ ಪತ್ನಿ ಅನುಜಾ ಪಾಂಡೆ ಈ ಎಲ್ಲ ಸೊಕ್ಕು, ದೌಲತ್ತನ್ನು ಮೈಗೂಡಿಸಿಕೊಂಡೇ ಬೀದಿಗಿಳಿದವಳು. ಈಕೆ ಮೂಲತಃ ಲಕ್ನೋದ ಸಂಜಯ್ ದುಬೆ ಎಂಬ ಕೋಟ್ಯಾಧಿಪತಿಯ ಮಗಳು. ಈಕೆಯ ತಮ್ಮ ನಿಖಿಲ್ ದುಬೆ ಯು.ಪಿ.ಯ ಬಿಜೆಪಿ ನಾಯಕ ಮತ್ತು ಖ್ಯಾತ ಉದ್ಯಮಿ. ಈಕೆಗೆ ಪಾಂಡೆ ಪರಿಚಯವಾಗಿದ್ದು ದೆಹಲಿಯಲ್ಲಿ. ಫ್ಯಾಷನ್ ಡಿಸೈನಿಂಗ್ ಕೋರ್ಸ್ ಮಾಡಿಕೊಂಡಿದ್ದು ಫ್ಯಾಷನ್ ಶೋ, ಮಾಡೆಲಿಂಗ್ ಎಂದೆಲ್ಲ ಓಡಾಡಿಕೊಂಡಿದ್ದ ಅನುಜಾಗೆ ಬಾಲಿವುಡ್ ನಟಿಯಾಗ ಬೇಕೆಂಬ ಆಸೆಯಿತ್ತು. ಕೆಲದಿನಗಳ ಕಾಲ ಹಿಂದಿಯ ಟೀವಿ ಚಾನಲ್‌ಗಳಲ್ಲಿ ನಿರೂಪಕಿಯಾಗಿದ್ದಳು. ಅನೇಕ ಫ್ಯಾಷನ್ ಶೋಗಳಲ್ಲೂ ಭಾಗವಹಿಸಿದ್ದಳು. ಈ ಮಧ್ಯೆಯೇ ಐಎಎಸ್ ಪಾಂಡೆಯ ಪರಿ ಚಯವಾಗಿ ಅದು ಪ್ರೀತಿಗೆ ತಿರುಗಿ ಮದುವೆಯಲ್ಲಿ ಮುಗಿಯುವ ಹೊತ್ತಿಗೆ ಪಾಂಡೆ ದಕ್ಷಿಣ ಕನ್ನಡ ಜಿಲ್ಲೆಗೆ ಅಸಿಸ್ಟೆಂಟ್ ಕಮೀಷನರ್ ಆಗಿದ್ದ.


ಅದು 2002 ರ ಕಾಲ. ಮುಂದೆ 2004 ರಲ್ಲಿ ಪಾಂಡೆ ಮೈಸೂರಿಗೆ ಅರ್ಬನ್ ಡೆವಲಪ್‌ಮೆಂಟ್ ಕಮಿಷನರ್ ಆಗಿದ್ದ. ಆಗ ಜೊತೆಗೇ ಇದ್ದ ಅನುಜಾ ಪಾಂಡೆ ಕಂಠಮಟ್ಟ ಕುಡಿದು ಪಾಂಡೆಯ ಕಾರಿನ ಡ್ರೈವರ್ ಮೇಲೆ ಹಲ್ಲೆ ನಡೆಸಿದ್ದಳು. ಆನಂತರ 2005 ರಲ್ಲಿ ಪಾಂಡೆ ಗುಲ್ಬರ್ಗಾ ಜಿಲ್ಲಾ ಪಂಚಾಯ್ತಿಗೆ ಸಿಇಓ ಆಗಿದ್ದಾಗ ಅನುಜಾ ತನಗೆ ಗುಲ್ಬರ್ಗಾದ ರಣಬಿಸಿಲು ಮತ್ತು ಧೂಳು ಒಗ್ಗಿ ಬರುವುದಿಲ್ಲ ಎಂದು ಬೆಂಗಳೂರಿನಲ್ಲೇ ಉಳಿದಳು. ಗುಲ್ಬರ್ಗದಲ್ಲಿ ಕೇವಲ ಒಂದು ವರ್ಷವಷ್ಟೇ ಇದ್ದ ಪಾಂಡೆ ತನ್ನನ್ನು ಇಲ್ಲಿಂದ ಎತ್ತಂಗಡಿ ಮಾಡಲಿ ಎಂದೇ ಖರ್ಗೆ ಮತ್ತು ಧರಂಸಿಂಗ್ ಅನುಯಾಯಿ ಗಳ ಕಾಂಟ್ರಾಕ್ಟು ಬಿಲ್ಲುಗಳಿಗೆ ಅಡ್ಡಗಾಲಿಡ ತೊಡಗಿದ್ದು ಬಯಸಿದ್ದೇ ಆಗಿತ್ತು. ಒಂದೇ ವರ್ಷಕ್ಕೆ ಅಂದರೆ 2006 ರಲ್ಲಿ ಗುಲ್ಬರ್ಗಾದಿಂದೆತ್ತಿ ಶಿವಮೊಗ್ಗದ ಜಿಲ್ಲಾಧಿಕಾರಿಯನ್ನಾಗಿ ಎತ್ತಿಹಾಕಲಾಯ್ತು.

ಪತ್ನಿಯ ದೌಲತ್ತು, ರುಬಾಬುಗಳೇನೇ ಇದ್ದರೂ ಪಾಂಡೆ ದುಷ್ಟನಲ್ಲ. ಬೇರೆಲ್ಲ ನಾರ್ಥ್ ಇಂಡಿಯನ್ ಐಎಎಸ್‌ಗಳಿಗೆ ಹೋಲಿಸಿದರೆ ಇದ್ದುದರಲ್ಲಿ ಸಜ್ಜನ. ಶಿವಮೊಗ್ಗಕ್ಕೆ ಬಂದಿದ್ದೇ ಇಡೀ ಆಡಳಿತದಲ್ಲಿ ಸುಧಾರಣೆ ತಂದು ರಸ್ತೆ ಅಗಲೀಕರಣಕ್ಕೆ ಕೈಯಿಟ್ಟು ಪ್ರಭಾವಿ ಶ್ರೀಮಂತರ ಧಮಕಿ, ಆಮಿಷವನ್ನು ಲೆಕ್ಕಿಸದೇ ರಸ್ತೆಯುದ್ದಕ್ಕೂ ಇದ್ದ ಕಟ್ಟಡಗಳನ್ನು ತಾನೇ ನಿಂತು ನೆಲಸಮ ಮಾಡಿದ. ಶಿವಮೊಗ್ಗದ ಮಟ್ಟಿಗೆ ಪಾಂಡೆ ಇವತ್ತಿಗೂ ಡೆಮಾಲಿಷನ್ ಮ್ಯಾನ್!



ಮುಖ್ಯಮಂತ್ರಿ ಯಡ್ಡಿಗೆ ಅಷ್ಟಿಷ್ಟು ಮಣೆ ಹಾಕಿದ್ದು ಬಿಟ್ಟರೆ ಪಾಂಡೆಗೆ ಶಿವಮೊಗ್ಗದಲ್ಲಿ ಇವತ್ತಿಗೂ ಒಳ್ಳೆಯ ಹೆಸರಿದೆ. ಸತತ ಮೂರು ವರ್ಷಗಳ ಕಾಲ ಶಿವಮೊಗ್ಗದ ಜಿಲ್ಲಾಧಿಕಾರಿಯಾಗಿದ್ದ ಪಾಂಡೆ ಆನಂತರ 2009-10 ರ ಸಾಲಿಗೆ ಬೀದರ್ ಜಿಲ್ಲಾಧಿಕಾರಿಯಾದರು. ಬೀದರ್ ನಲ್ಲೂ ಅದೇ ನಿಷ್ಠುರಿ ಆಳ್ವಿಕೆಗೆ ಕೈಯಿಟ್ಟು ಯಡ್ಡಿಯ ಪರಮಾಪ್ತರಾದ ಹುಮ್ನಾಬಾದ್ ಶಾಸಕ ರಾಜಶೇಖರ ಪಾಟೀಲ್, ಎಮ್ಮೆಲ್ಸಿ ಬಸವರಾಜ್ ಪಾಟೀಲ್ ಮತ್ತು ನಾಗಮಾರಪಲ್ಲಿಯ ಕೆಂಗಣ್ಣಿಗೆ ತುತ್ತಾದರು. ಒಂದೇ ವರ್ಷ ಅಲ್ಲಿಂದ ಎತ್ತಿ ಹುಬ್ಬಳ್ಳಿಯ ವಿದ್ಯುತ್ ಸರಬರಾಜು ನಿಗಮವಾದ ಹೆಸ್ಕಾಮ್‌ಗೆ ಎತ್ತಂಗಡಿ ಮಾಡಲಾಯ್ತು. ಇಲ್ಲಿ ಇನ್ನೆಷ್ಟು ದಿನವೋ ಗೊತ್ತಿಲ್ಲ!

ಇತ್ತ ಪಾಂಡೆ ತನ್ನ ನಿಷ್ಠೂರ ಮತ್ತು ಮರ್ಜಿರಹಿತ ನಿರ್ಧಾರಗಳಿಂದಾಗಿ ವರ್ಷದಿಂದ ವರ್ಷಕ್ಕೆ ದೂರದ ಜಿಲ್ಲೆಗಳಿಗೆ ಎತ್ತಂಗಡಿಯಾಗಿ ಹೈರಾಣಾದರೆ ಅತ್ತ ಪತ್ನಿ ಅನುಜಾ ಪಾಂಡೆ ಬೆಂಗಳೂರಿನ ಐಷಾರಾಮಕ್ಕೆ ಬಿದ್ದಳು. ಐಎಎಸ್ ಪತ್ನಿಯರ ಕ್ಲಬ್ಬಿನಲ್ಲಿ ಇಸ್ಪೀಟು, ಬ್ರಿಗೇಡ್ ರೋಡ್ ಶಾಪಿಂಗ್, ಪಾರ್ಟಿ, ಪಬ್ಬುಗಳಲ್ಲೇ ಶೋಕಿಗೆ ನಿಂತವಳಿಗೆ ಗಂಡನ ಕಾಳಜಿ, ಶ್ರದ್ಧೆ ಹೇಗೆ ತಾನೇ ಮೈಗೂಡಲು ಸಾಧ್ಯ?



ಇಂಥ ಶೋಕಿಲಾಲ ಐಎಎಸ್ ಪತ್ನಿಯರ ಸುತ್ತ ಅಷ್ಟೇ ಪ್ರಭಾವಿ ಲಾಬಿಗಳು ಸುತ್ತು ವರಿದಿರುತ್ತವೆ. ಇಂಥದೊಂದು ಲಾಬಿಗೆ ನೈಸ್ ಖದೀಮ ಅಶೋಕ್ ಖೇಣಿ ಕೂಡ ಇತ್ತೀಚೆಗೆ ಕೈಯಿಟ್ಟಿದ್ದಾನೆ. ಅದಕ್ಕೆಂದು ಖೇಣಿ ಬಳಸಿಕೊಳ್ಳುತ್ತಿರುವುದು ಸಿಸಿಎಲ್ ಎಂದರೆ ಸೆಲಿಬ್ರಿಟಿ ಕ್ರಿಕೆಟ್ ಲೀಗ್ ಅನ್ನು. ಜನವರಿ 29 ರಂದು ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಟ ಸುದೀಪ್ ನೇತೃತ್ವದ ಕರ್ನಾಟಕ ಬುಲ್ಡೋಜರ್ಸ್ ವಿರುದ್ಧ ಸಲ್ಮಾನ್ ಖಾನ್ ನೇತೃತ್ವದ ಮುಂಬೈ ಹಿರೋಸ್ ಕ್ರಿಕೆಟ್ ಮ್ಯಾಚ್‌ನ ಟಿಕೆಟ್ಟುಗಳನ್ನು ಖೇಣಿ ಬೆಂಗಳೂರಿನ ಪ್ರಮುಖ ರಾಜಕಾರಣಿಗಳು, ನಟರು, ರೌಡಿಗಳು, ರಿಯಲ್ ಎಸ್ಟೇಟ್ ಖದೀಮರು, ಅಧಿಕಾರಿಗಳಿಗೆ ಗಿಫ್ಟ್ ರೂಪದಲ್ಲಿ ಕೊಟ್ಟ. ಹಾಗೆಯೇ ಈ ನಾರ್ತ್ ಇಂಡಿಯನ್ ಐಎಎಸ್‌ಗಳ ಪತ್ನಿಯರ ಕ್ಲಬ್ಬಿಗೂ ಕಳಿಸಿಕೊಟ್ಟಿದ್ದಾನೆ.

ಹೀಗೆ ಬಂದ್ ಪಾಸ್‌ಗಳ ಪೈಕಿ ಒಂದನ್ನು ಹಿಡಿದು ಜನವರಿ 29 ರ ಸಂಜೆ ಚಿನ್ನಸ್ವಾಮಿ ಸ್ಟೇಡಿಯಂಗೆ ಬಂದವಳು ಅನುಜಾ ಪಾಂಡೆ. ಜೊತೆಗೊಬ್ಬಳು ಗೆಳತಿಯನ್ನೂ ಕರೆತಂದಿದ್ದಳು. ವಿವಿಐಪಿ ಗೇಟಿನಿಂದ ಎಂಟ್ರಿಯಾಗಿ ಸಲ್ಮಾನ್ ಖಾನ್‌ನನ್ನು ನೋಡುವುದು ಆಕೆಯ ಉದ್ದೇಶವಾಗಿತ್ತು. ಬರುವಾಗಲೇ ಕಂಠಮಟ್ಟ ಕುಡಿದಿದ್ದಳು. ಆವತ್ತು ವಿವಿಐಪಿ ಪ್ರವೇಶದ್ವಾರದ ಬಂದೋಬಸ್ತ್ ಡ್ಯೂಟಿಯಲ್ಲಿದ್ದದ್ದು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯ ಮಹಿಳಾ ಇನ್ಸ್‌ಪೆಕ್ಟರ್ ಅಂಜುಮಾಲಾ ನಾಯಕ್. ಒಂದೇ ಪಾಸ್‌ನಲ್ಲಿ ಇಬ್ಬರಿಗಷ್ಟೇ ಪ್ರವೇಶ. ಮಗನನ್ನೂ ಸೇರಿ ಮೂವರು ಇದ್ದದ್ದಕ್ಕೆ ಶುರುವಿನಲ್ಲೇ ಇನ್ಸ್‌ಪೆಕ್ಟರ್ ಅಂಜು ಮಾಲಾ ತಡೆದಿದ್ದಾರೆ. ಅಷ್ಟಕ್ಕೇ ಅನುಜಾ ಪಾಂಡೆ ಕೆಂಡಾ ಮಂಡಲವಾಗಿ 'ನಾನ್ಯಾರು ಗೊತ್ತಾ? ಸಸ್ಪೆಂಡ್ ಮಾಡಿಸಿ ಬಿಡ್ತೀನಿ' ಎಂದೆಲ್ಲಾ ಚೀರಾಡಿದ್ದಾಳೆ. ಕೊನೆಗೆ ಯಾರೋ ಕ್ರಿಕೆಟ್ ಅಸೋಸಿಯೇಷನ್ ಪದಾಧಿಕಾರಿಯೊಬ್ಬರು ಬಂದು ಮೂವರನ್ನೂ ಒಳಕ್ಕೆ ಕರೆದೊಯ್ದಿದ್ದಾರೆ. ಇದೆಲ್ಲ ಇದ್ದರೆ ಎಂದು ತಮ್ಮ ಪಾಡಿಗೆ ತಾವು ಬಂದೋಬಸ್ತಿನಲ್ಲಿದ್ದ ಇನ್ಸ್ ಪೆಕ್ಟರ್ ಅಂಜುಮಾಲಾರಿಗೆ ಮ್ಯಾಚ್ ಮುಗಿದು ಪ್ರೇಕ್ಷಕರೆಲ್ಲ ಹೊರಬರಲಾರಂಭಿಸಿದ್ದೇ ಆಶ್ಚರ್ಯ ಕಾದಿದೆ. ಗೇಟಿನಿಂದ ಹೊರಬಿದ್ದಿದ್ದೇ ಅನುಜಾ ಪಾಂಡೆ ಮತ್ತಾಕೆಯ ಗೆಳತಿ ಮತ್ತೆ ಇನ್ಸ್‌ಪೆಕ್ಟರ್ ಅಂಜುಮಾಲಾರನ್ನು ವಾಚಾಮಗೋಚರ ಬೈದಿದ್ದಾರೆ. ಬಹುಶಃ ಮ್ಯಾಚ್ ವೇಳೆ ಮತ್ತೆ ಬಿಯರ್ ಕುಡಿದಿರಬೇಕು.

ಇದನ್ನೆಲ್ಲ ನೋಡಿಯೂ ಸುಮ್ಮನಿದ್ದ ಅಂಜುಮಾಲಾಗೆ ಕಾದಿದ್ದ ಮತ್ತೊಂದು ಶಾಕ್ ಎಂದರೆ ಇದ್ದಕ್ಕಿದ್ದಂತೆ ಅನುಜಾ ಪಾಂಡೆಯ 8 ವರ್ಷದ ಮಗ ಏರಿ ಬಂದಿದ್ದೇ ಅಂಜುಮಾಲಾರನ್ನು ನೋಡಿ ಕ್ಯಾಕರಿಸಿ ಉಗಿದದ್ದೇ 'ಮಾದರ್‌ಚೋದ್' ಎಂದು ಬೈದುಬಿಟ್ಟ. ತಾನು ಈ ಹಿಂದೆ ಅಡ್ಡಗಟ್ಟಿದ ಜಿದ್ದಿಗೆ ಬಿದ್ದು ಆತನ ತಾಯಿ ಮಗನನ್ನು ಛೂಬಿಟ್ಟು ತನ್ನನ್ನು ಬಯ್ಯಿಸುತ್ತಿದ್ದಾಳೆಂದು ಆಕೆಗೆ ಖಚಿತವಾಗುತ್ತಿದ್ದಂತೆ, ಅಂಜುಮಾಲಾ ಗದರಿ ಬಾಲಕನನ್ನು ಸಾಗಹಾಕಲು ಯತ್ನಿಸಿದ್ದಾರೆ. ಅಷ್ಟೇ ಏಕಾಏಕಿ ಏರಿಬಂದ ಅನುಜಾ ಪಾಂಡೆ ಇನ್ಸ್‌ಪೆಕ್ಟರ್ ಕೆನ್ನೆಗೆರಡು ಬಾರಿಸಿಬಿಟ್ಟಳು.

ಅಕ್ಷರಶಃ ರಣಚಂಡಿಯಾಗಿದ್ದ ಅನುಜಾ ಹೊಡೆದ ಏಟಿಗೆ ಅಂಜುಮಾಲಾರ ಮೂಗು ಮತ್ತು ಬಾಯಿಂದ ರಕ್ತ ಸೋರುತ್ತಿತ್ತು. ತಕ್ಷಣವೇ ಅಲ್ಲಿದ್ದ ಪೊಲೀಸರು ಅಂಜುಮಾಲಾರನ್ನು ಆಸ್ಪತ್ರೆಗೆ ಸೇರಿಸಿಬಿಟ್ಟರು. ರಕ್ತ ಬಂದಿದ್ದು ಗೊತ್ತಾಗಿದ್ದೇ ಹೊಡೆದ ಅನುಜಾ ತನ್ನ ಕಾರೆತ್ತಿಕೊಂಡು ನಾಪತ್ತೆಯಾಗಿದ್ದಳು. ಆದರೆ ಸೀಸಿ ಟೀವಿಯಲ್ಲಿ ಅನುಜಾ ಹೊಡೆದದ್ದು, ಆಕೆಯ ಕಾರಿನ ನಂಬರ್ ಎಲ್ಲವೂ ದಾಖಲಾಗಿತ್ತು. ಅದೇ ಆಕೆಯ ಪಾಲಿಗೆ ಮುಳುವಾಯಿತು. ಆ ಹೊತ್ತಿಗಾಗಲೇ ಇನ್ಸ್‌ಪೆಕ್ಟರ್ ಅಂಜುಮಾಲಾ ಆಸ್ಪತ್ರೆಯಿಂದ ಬಂದು ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಕಾರಿನ ನಂಬರ್‌ನ ವಿಳಾಸ ಹಿಡಿದು ಹೊರಟ ಪೊಲೀಸರಿಗೆ ಕೋರಮಂಗಲದ ಆಕೆಯ ಮನೆಗೆ ಬೀಗ ಜಡಿದದ್ದು ಗೊತ್ತಾಗಿ ಇನ್ನೂ ಖಚಿತವಾಗಿತ್ತು. ಹಾಗಿದ್ದೂ ಆಕೆಯ ಮೊಬೈಲ್ ನಂಬರನ್ನು ಟ್ರ್ಯಾಪ್ ಮಾಡಿದಾಗ ಸಮೀಪದಲ್ಲೇ ಆಕೆ ತನ್ನ ಸಂಬಂಧಿಕರೊಬ್ಬರ ಮನೆಯಲ್ಲಿದ್ದದ್ದು ಪತ್ತೆಯಾಯಿತು. ಅಂತಿಮವಾಗಿ ಸೋಮವಾರ ರಾತ್ರಿಗೆ ಅನುಜಾಳನ್ನು ಬಂಧಿಸಿ ನ್ಯಾಯಾಧೀಶರ ಮನೆಗೆ ಹಾಜರುಪಡಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯ್ತು.

ಬಹುಶಃ ಪತ್ರಿಕೆಗಳು ಪ್ರಕರಣದ ಬೆನ್ನುಹತ್ತದೇ ಹೋಗಿದ್ದರೆ ಇಡೀ ರಾದ್ಧಾಂತವನ್ನೇ ಪೊಲೀಸರು ಮುಚ್ಚಿಹಾಕುತ್ತಿದ್ದರೇನೊ. ಐಎಎಸ್ ಅಧಿಕಾರಿಗಳ ಪತ್ನಿಯರೇ ಈ ಮಟ್ಟಿಗೆ ಅನಾಹುತಕಾರಿಗಳಾದರೆ ಇನ್ನೂ ಈ ಐಎಎಸ್‌ಗಳ ದರ್ಪ, ದೌಲತ್ತು, ಭ್ರಷ್ಟಾಚಾರ ಯಾವ ಮಟ್ಟಕ್ಕಿರಬೇಡ? ಐಎಎಸ್ ಪತ್ನಿಯರ ಅಟ್ಟಹಾಸಕ್ಕೆ ಕೊನೆಗೆ ಯಾವ ಗತಿಯಾಗುತ್ತದೆ ಎಂಬುದಕ್ಕೆ ಇದೊಂದು ನಿದರ್ಶನವಷ್ಟೆ. ಪೊಲೀಸ್ ಅಧಿಕಾರಿಗಳ ಮೇಲೇ ಕೈ ಮಾಡಿ ದಕ್ಕಿಸಿ ಕೊಳ್ಳುವುದು ಅಷ್ಟು ಸಲೀಸಲ್ಲ. ಕಾನೂನಿಗೆ ಮೀರಿ ಯಾರೂ ದೊಡ್ಡವರಲ್ಲ.


• ರಾ. ಸೋಮನಾಥ್

ಐಎಎಸ್ ಪತ್ನಿಯರ ಇಸ್ಪೀಟ್ ಮೋಜು

ಕೋರಮಂಗಲದ ಐಎಎಸ್ ಅಧಿಕಾರಿ ಪತ್ನಿಯರ ಕ್ಲಬ್‌ನ ಮೋಜು ಮತ್ತು ಇಸ್ಪೀಟಿನ ಹುಚ್ಚಿಗೆ ಬಿದ್ದು ಭಾನಗಡಿ ಮಾಡಿಕೊಂಡ ಐಎಎಸ್ ಪತ್ನಿಯರ ಸಂಖ್ಯೆ ಒಂದಲ್ಲ ಎರಡಲ್ಲ. ಪ್ರತಿ ಶನಿವಾರ ಮತ್ತು ಭಾನುವಾರ ಇಲ್ಲಿ ಕಾಕ್‌ಟೇಲ್ ಪಾರ್ಟಿಯಿರುತ್ತದೆ. ಹೀಗೆ ಪಾರ್ಟಿಗೆಂದು ಬಂದ ಐಎಎಸ್ ಪತ್ನಿಯರ ಪೈಕಿ ಅನೇಕರು ಇಸ್ಪೀಟಿಗೆ ಕೂರುತ್ತಾರೆ. ಜೊತೆಗೆ ಬೆಂಗಳೂರಿನ ಒಂದಿಬ್ಬರು ಬಿಲ್ಡರ್ಸ್‌ನ ಪತ್ನಿಯರು, ಕೆಲ ನಾರ್ತ್ ಇಂಡಿಯನ್ ವ್ಯಾಪಾರಿಗಳ ಹೆಂಡತಿಯರೂ ಈ ಕಾರ್ಡ್ಸ್ ಕ್ಲಬ್ಬಿನ ಕಾಯಂ ಅತಿಥಿಗಳು. ವಿಶೇಷವೆಂದರೆ ಇಸ್ಪೀಟಿಗೆ ಕೂತವರು ಇಲ್ಲಿ ನಗದು ದುಡ್ಡಿಗೆ ಬದಲು ಚೆಕ್‌ಗಳನ್ನು ಬರೆದುಕೊಡುತ್ತಾರೆ. ಕೆಲವೊಮ್ಮೆ ಬೆಟ್ಟಿಂಗ್ ಲಕ್ಷಗಳ ಲೆಕ್ಕದಲ್ಲಿ ನಡೆಯುತ್ತದೆ.

ವಿಚಿತ್ರವೆಂದರೆ ಹೀಗೆ ಬೆಟ್ಟಿಂಗ್ ರೂಪದಲ್ಲಿ ಕೊಟ್ಟ ಅನೇಕ ಚೆಕ್‌ಗಳು ಆನಂತರ ನಗದಾಗದೇ ಬೌನ್ಸ್ ಹೊಡೆಯುತ್ತವೆ. ಜೂಜಿನ ಖಯಾಲಿಗೆ ಬಿದ್ದು ಲಕ್ಷಗಳ ಲೆಕ್ಕದಲ್ಲಿ ಚೆಕ್ ಕೊಟ್ಟು ಹಾಗೇ ಬೌನ್ಸ್ ಆದ ಚೆಕ್ಕುಗಳ ಮೊತ್ತದ ವಸೂಲಿಗೆ ನಿಂತವರು ಕಮೀಣಾ ... ಐಎಎಸ್ ಪತ್ನಿಯರ ಸಂಖ್ಯೆ ಕೋರ್ಟ್ ಮೆಟ್ಟಲು ಹತ್ತುತ್ತಾರೆ. ಈ ರೀತಿ ಇಸ್ಪೀಟ್ ಆಟದ ಕಾರಣಕ್ಕೆ ಚೆಕ್ ಬೌನ್ಸ್ ಕೇಸಿಗೆ ಸಿಲುಕಿರುವ ಐಎಎಸ್ ಪತ್ನಿಯರ ಸಂಖ್ಯೆ ಇಪ್ಪತ್ತಕ್ಕೂ ಅಧಿಕ. ಹೆಂಡತಿ ಜೂಜಿನಲ್ಲಿ ಕಳೆದ ದುಡ್ಡಿಗೆ ಕೋರ್ಟು ಅಲೆಯುತ್ತಿದ್ದರೆ ಗಂಡ ತನ್ನ ಪತ್ನಿ ಜೈಲು ಪಾಲಾಗದ ಹಾಗೇ ಕಾಯಬೇಕೆಂದರೆ ತನ್ನ ಇಲಾಖೆಯ ತಿಜೋರಿಗೇ ಕನ್ನ ಹಾಕಬೇಕು. ಇಂಥದೊಂದು ಕ್ಲಬ್ಬಿನ ಸೆಕ್ರೆಟರಿಯಾಗಿದ್ದ ಅನುಜಾ ಪಾಂಡೆ ಈಗ ಇಸ್ಪೀಟ್ ಕಾರಣಕ್ಕಲ್ಲದಿದ್ದರೂ ತನ್ನ ದರ್ಪ, ಮದಹಂಕಾರದಿಂದ ಕೋರ್ಟಿಗೆ ಅಲೆಯಬೇಕು!

ಮಂಗಳೂರಿನಲ್ಲೊಬ್ಬ ನಕಲಿ ವೈದ್ಯ



ಈತನ ಹೆಸರು ಎಂ.ಕೆ. ಬಾಲಕೃಷ್ಣನ್. ಅಪ್ಪಟ ನಕಲಿ ವೈದ್ಯ. ಹೆಸರಿಗೂ ಮುನ್ನ ಡಾ!! ಎಂಬ ಸಂಬೋಧನೆ ಹಾಗೂ ನಂತರದಲ್ಲಿ ಒಂದಷ್ಟು ದೇಸಿ, ವಿದೇಸಿ ವೈದ್ಯಕೀಯ ಡಿಗ್ರಿಗಳಿವೆಯಾದರೂ ಅವೆಲ್ಲ ಪಕ್ಕಾ ಬೋಗಸ್. ಇಂತಿಪ್ಪ ಆಸಾಮಿ ಮಂಗಳೂರಿನ ಶಕ್ತಿ ನಗರದಲ್ಲಿ ಪ್ರಶಾಂತಿ ಕ್ಲಿನಿಕ್ ತೆರೆದು ಜನ 'ಸೇವೆ'ನೆಗೆ ನಿಂತುಬಿಟ್ಟಿದ್ದಾನೆ. ಐದ್ಸೈದು ವರ್ಷ ಓದಿ ಕಲಿತದ್ದಲ್ಲದೆ ಮಗದೊಂದೆರಡು ವರ್ಷ ಸ್ಪೆಷಲೈಸೇಷನ್ ಮುಗಿಸಿ ಬಂದ ಅಸಲಿ ಡಾಕ್ಟರುಗಳೇ ಒಮ್ಮೊಮ್ಮೆ ಯಡವಟ್ಟಿನಿಂದ 'ಡಾಕ್ಟರ್ ಡೆತ್'ಗಳಾಗಿ ಜನರಲ್ಲಿ ಭಯ ಹುಟ್ಟಿಸುವ ಹೊತ್ತಲ್ಲಿ ಈತ ಮಾತ್ರ ಫೋರ್ಜರಿ ಸರ್ಟಿಫಿಕೇಟುಗಳನ್ನೇ ತೋರಿಸಿ ಜೀವಗಳ ಜೊತೆ ಚೆಲ್ಲಾಟವಾಡುತ್ತಿದ್ದಾನೆ. ಇದೆಲ್ಲ ಗೊತ್ತಿದ್ದೂ ಪೊಲೀಸರೂ, ಮಾನವ ಹಕ್ಕು ಆಯೋಗವೂ ತೆಪ್ಪಗಿರುವುದು ಖಂಡಿತ ಸೋಜಿಗ ಮೂಡಿಸುತ್ತದೆ.

ಈತ ಸ್ಟೆತಾಸ್ಕೋಪ್ ಸಮೇತ ಡಾಕ್ಟರೆಂದು ಪ್ರತಿಷ್ಠಾಪಿತವಾಗಿ ಇಲ್ಲಿಗೆ 29 ವರ್ಷವೇ ಆಗಿ ಹೋಗಿದೆ. ಕರ್ನಾಟಕ ಆಯುರ್ವೇದಿಕ್ ಮತ್ತು ಯುನಾನಿ ಪ್ರಾಕ್ಟೀಷನರ್ ಬೋರ್ಡ್‌ನಿಂದ 20.01.84ರಂದು 8109 ರಿಜಿಸ್ಟ್ರೇಷನ್ ನಂಬರ್‌ನಲ್ಲಿ ಪಡೆದ ಒಂದು ಸರ್ಟಿಫಿಕೇಟ್ ತೋರಿಸುತ್ತಾನಾದರು ಅದು ಈತನೇ ಸೃಷ್ಟಿಸಿಕೊಂಡದ್ದು ಎಂಬುದು ಎಂತವರಿಗೂ ಖಾತ್ರಿಯಾಗುವಂತಿದೆ. ಆತನ ಆ ಸರ್ಟಿಫಿಕೇಟ್‌ನಲ್ಲಿ ಡಾ. ಎ. ಹನುಮೇಗೌಡ ಎಂಬ ನೋಂದಣಾಧಿಕಾರಿಯ ಸಹಿ ಇದೆ. ಆದರೆ ಸದರಿ ಹನುಮೇಗೌಡರು ಯುನಾನಿ ಬೋರ್ಡ್‌ಗೆ ರಿಜಿಸ್ಟ್ರಾರ್ ಆಗಿಬಂದದ್ದೇ 20.5.1998ರಲ್ಲಿ. ಬೋರ್ಡ್‌ಗೆ ವಿವರಣೆ ನೀಡುವ ಸಮಯದಲ್ಲಿ ತಾನು 1984ರಲ್ಲಿ ಆಗಿನ ರಿಜಿಸ್ಟ್ರಾರ್ ಭೀಮಸೇನ್ ರಾವ್‌ರಿಂದ ತಾತ್ಕಾಲಿಕ ಸರ್ಟಿಫಿಕೇಟ್ ಪಡೆದಿದ್ದೆ ಎಂದು ಹೇಳುತ್ತಾನೆ, ಆದರೆ ಸಹಿ ಮಾತ್ರ ಹನುಮೇಗೌಡರದ್ದು. ಇನ್ನು ಅದೇ ಸರ್ಟಿಫಿಕೇಟ್‌ನಲ್ಲಿ ಈತನ ವಿಳಾಸ ನಂ.10-165/5 ಎಂದಿದೆ. ಮಂಗಳೂರು ಪಾಲಿಕೆ ಅಂಥದ್ದೊಂದು ಡೋರ್ ನಂಬರ್ ನೀಡಿದ್ದೇ 1995ರಲ್ಲಿ. ಅದೆಲ್ಲಾ ಹೋಗಲಿ ತನ್ನ ತಂದೆ ಹೆಸರನ್ನು ಬೇರೆಲ್ಲ ಕಡೆ ಎಂ.ಕೆ ಫಣೀಕರ್ ಎಂದು ಕೆತ್ತಿಸಿಕೊಂಡಿರುವ ಆಸಾಮಿ ಸರ್ಟಿಫಿಕೇಟ್‌ನಲ್ಲಿ ಮಾತ್ರ ಕುಞಂಬು ಎಂದು ಬರೆಸಿಕೊಂಡಿದ್ದಾನೆ. ಅಲ್ಲಿಗೆ ಇದು ತೀರಾ ಇತ್ತೀಚೆಗೆ ಸಾಕ್ಷಿಗೆಂಬಂತೆ ಸೃಷ್ಟಿಸಿಕೊಂಡ ನಕಲಿ ದಾಖಲೆ ಎಂಬುದರಲ್ಲಿ ಯಾವ ಅನುಮಾನವೂ ಉಳಿಯುವುದಿಲ್ಲ.


ಅಸಲಿಗೆ ಯುನಾನಿ ಬೋರ್ಡ್‌ನಲ್ಲಿ ಅಂತಹ ನಂಬರ್ರೇ ರಿಜಿಸ್ಟರ್ ಆಗಿಲ್ಲವಂತೆ. ಇನ್ನು ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನಲ್ಲಿ ವಿಚಾರಿಸಿದರೆ ನಂಬರ್ ಎಂಟ್ರಿಯಾಗಿದೆಯಾದರೂ ಅದು ಬಾಲಕೃಷ್ಣನ್ ಹೆಸರಿನಲ್ಲಿ ಅಲ್ಲವಂತೆ. ಅತ್ತ ಕೇರಳದಲ್ಲೇನಾದರು ಈ ಪುಣ್ಯಾತ್ಮ ವೈದ್ಯ ಪದವಿ ಮುಗಿಸಿಕೊಂಡದ್ದನಾ ಎನ್ನಬಹುದಿತ್ತು. ಆದರೆ ಟ್ರಾವಂಕೂರ್-ಕೊಚ್ಚಿ ಮೆಡಿಕಲ್ ಕೌನ್ಸಿಲ್ ಸಹಾ ಈತ ಬೋಗಸ್ ಡಾಕ್ಟರ್, ಜರೂರತ್ತಾಗಿ ಕ್ರಮ ಕೈಗೊಳ್ಳಿ ಅಂತ ಪೊಲೀಸರಿಗೇ ನೋಟೀಸ್ ಕಳುಹಿಸಿದೆ. ಬಾಲಕೃಷ್ಣನ ಬೋಗಸ್ ದಂಧೆಯ ಸುದ್ದಿ ಮುಟ್ಟುತ್ತಿದ್ದಂತೆ ಕರ್ನಾಟಕ ಯುನಾನಿ ಬೋರ್ಡ್ ದಾಖಲಾತಿ ಸಮೇತ ವಿಚಾರಣೆಗೆ ಹಾಜರಾಗಿ ಎಂಬ ನೋಟಿಸ್ಸನ್ನೂ ನೀಡಿತ್ತು. ಆಗ ತಾನು ಬೆಂಗಳೂರಿಗೆ ರಾಜಹಂಸ್ ಬಸ್‌ನಲ್ಲಿ ಬರುತ್ತಿದ್ದಾಗ ತನ್ನ ದುಡ್ಡು, ಬಟ್ಟೆ, ಮೂಲ ಸರ್ಟಿಫಿಕೇಟ್ ಇದ್ದ ವಿಐಪಿ ಸೂಟ್‌ಕೇಸ್ ಕಳುವಾಗಿ ಹೋಗಿದೆ ಅನ್ನೋ ಕತೆ ಹುಟ್ಟಿಸಿ ಕಂಪ್ಲೆಂಟ್ ಕಾಪಿಯ ಮೂಲಕ ಬಚಾವಾಗಿದ್ದ. ಕೆ.ಎಸ್.ಆರ್.ಟಿ.ಸಿ ಡಿಪೋದ ರಿಜಿಸ್ಟಾರ್‌ನಲ್ಲಿ ಆತ ಹೇಳುವ ದಿನ ಯಾವ ಪ್ರಯಾಣಿಕನೂ ಕಳುವಿನ ಬಗ್ಗೆ ದೂರನ್ನೇ ನೀಡಿರಲಿಲ್ಲ. 1993ರಲ್ಲೇ ಬೋರ್ಡ್ ಮಂಗಳೂರಿನ ಪೊಲೀಸರಿಗೆ ನೋಟಿಸ್ ಕಳುಹಿಸಿ ಈತನ ಮೇಲೆ ಕೂಡಲೇ ಕಾನೂನುಕ್ರಮ ಕೈಗೊಳ್ಳಲು ತಿಳಿಸಿತ್ತಾದರೂ ಇದುವರೆವಿಗೂ ಆತ ನಿರುಮ್ಮಳನಾಗಿ ಇಂಜೆಕ್ಷನ್ ಚುಚ್ಚುತ್ತಿರುವುದು ನೋಡಿದರೆ ಪೊಲೀಸರೊಂದಿಗೆ ಆತನ ಅಡ್ಜಸ್ಟ್‌ಮೆಂಟ್ ಚೆನ್ನಾಗೇ ಇದೆ ಅನ್ನಿಸುತ್ತೆ.

ಈತನ ದಗಲ್ಬಾಜಿ ದಾಖಲಾತಿ ಪುರಾಣ ಇಷ್ಟಕ್ಕೇ ಸೀಮಿತವಾಗುವುದಿಲ್ಲ. ಸುಳ್ಳು ದಾಖಲೆಯನ್ನು ಸೃಷ್ಟಿಸಿ ತನಗೆ ಬಾಡಿಗೆ ನೀಡಿದ್ದ ಓನರ್ ಮನೆಯನ್ನೇ ಲಪಟಾಯಿಸಿದ ಆರೋಪವು ಈತನ ಮೇಲಿದೆ. ಹೈಡೋಸ್ ಔಷಧಿ ನೀಡಿ ರೋಗಿಗಳ ಯಾತನೆಯನ್ನು ಹಿಗ್ಗಿಸಿದ ಕೀರ್ತಿಯೂ ಈತನಿಗಿದೆ.

ಈತನ ಮೋಸವನ್ನು ಬಯಲಿಗೆಳೆಯಲು ಪ್ರಯತ್ನಿಸಿದ ಜನಧ್ವನಿ ವೇದಿಕೆಯ ಮೆಲ್ವಿನ್ ಪಿಂಟೋ ಎಂಬುವವರು ಪೊಲೀಸರಿಗೆ, ಮೆಡಿಕಲ್ ಬೋರ್ಡ್‌ಗಳಿಗೆ, ಮಾನವ ಹಕ್ಕು ಆಯೋಗಗಳಿಗೆ ಸಾಕ್ಷಿ ಸಮೇತ ದೂರು ನೀಡಿದ್ದರು. ಮಾಫಿಯಾ ಲಿಂಕ್ ಬಳಸಿಕೊಂಡು ಅವರಿಗೆ ಕೊಲೆ ಬೆದರಿಕೆ ಒಡ್ಡಿ ಅವರನ್ನು ತೆಪ್ಪಗಾಗಿಸುವ ಪ್ರಯತ್ನವನ್ನೂ ಈತ ಮಾಡಿದ್ದಾನೆ. ಇನ್ನು ಮುಂದಾದರು ಪೊಲೀಸರು ಎಚ್ಚೆತ್ತುಕೊಳ್ಳದಿದ್ದರೆ ಅಮಾಯಕ ರೋಗಿಗಳಿಗೆ ಕಂಟಕ ತಪ್ಪಿದ್ದಲ್ಲ. ಮಂಗಳೂರಿಗರು ಈತನಿಂದ ಕೊಂಚ ದೂರ ಉಳಿದರೇ ಒಳಿತು.

• ವರದಿಗಾರ

ಉಡುಪಿಯ ಅಷ್ಟ ಮಠಾಧೀಶರ ಅಸಂಬದ್ಧ ಅರಚಾಟ-ಅವಾಂತರ ಮತ್ತು ನಿರರ್ಥಕ ಉಪವಾಸ-ಭೂರಿ ಊಟೋಪಹಾರದ ಪರ್ಯಾಯ ಪ್ರಸಂಗ ರಾತ್ರಿ ಬೆಳಗಾಗುವುದರಲ್ಲಿ ಭರ್ಜರಿಯಾಗೇ ಮುಗಿದುಹೋಗಿದೆ! ಒಂದೆಡೆ ಈ ಮಾಧ್ವಯತಿಗಳ ಜಿದ್ದಾಜಿದ್ದಿನ ಗ್ಯಾಂಗ್‌ವಾರ್ ನಡೆದರೆ, ಮತ್ತೊಂದೆಡೆ ಅಬ್ರಾಹ್ಮಣರನ್ನು ಮರುಳುಗೊಳಿಸುವ ಧಾರ್ಮಿಕ ದಗಲುಬಾಜಿ 'ಹಬ್ಬ'ದ ಹಿಕಮತ್ತು ನಡೆಯಿತು. ಈ ಪರ್ಯಾಯ ಫೈಟಿಂಗ್‌ನಲ್ಲಿ ವಾದಿರಾಜ ಗುರು ಪರಂಪರೆಯ ಕಿರಿಯ ಯತಿ-ಹಾಲಿ ಸರ್ವಜ್ಞಪೀಠದಲ್ಲಿ ಪವಡಿಸಿರುವ ವಿಶ್ವವಲ್ಲಭ ಮತ್ತು ಪುತ್ತಿಗೆ ಮಠದ ಸುಗುಣೇಂದ್ರರು ಜಗಜಟ್ಟಿಗಳಾಗಿ ರೋಚಕ ಪ್ರದರ್ಶನ ನೀಡಿದ್ದೇನೋ ನಿಜ. ಆದರೆ ಈ ಇಡೀ ಅಸಹ್ಯ ಪರ್ಯಾಯ ಪರಾಕ್ರಮದ ಅಂತರ್ ಪ್ರೇರಕ ಶಕ್ತಿಯುಕ್ತಿಯಾಗಿದ್ದದ್ದೇ ಅಧೋಕ್ಷಕ ಪೇಜಾವರ ಮಠಾಧೀಶ ವಿಶ್ವೇಶತೀರ್ಥ ಯತಿವರೇರ್ಯರು!!



ಅಷ್ಟ ಮಠಾಧೀಶರಿಗೆ ವಿವಾದಗಳೇನೂ ಹೊಸದಲ್ಲ ಬಿಡಿ. ಆದರೆ ಈ ವೈಷ್ಣವ ಸ್ವಾಮಿಗಳು ತಮ್ಮ ಧಾರ್ಮಿಕ ಬಿಸಿನೆಸ್ ಸೆಂಟರ್‌ನ ಅಧಿಕಾರ ಹಸ್ತಾಂತರದ ಪರ್ಯಾಯ ಮಹೋತ್ಸವವನ್ನು "ನಾಡಹಬ್ಬ" ಎಂಬಂತೆ ಭ್ರಮೆ ಮೂಡಿಸಿ ಸರ್ಕಾರ-ಶೂದ್ರರ ಸುಲಿವ ಮಸಲತ್ತು ಆತ್ಮಘಾತುಕವೇ ಸರಿ! ಹಾಗಿದ್ದರೆ ಉಡುಪಿಯ ಮಾಧ್ವ ಯತಿಗಳ ಪರ್ಯಾಯ ಉತ್ಸವ ಎಂದರೇನು? ಇದೊಂದು ಎಲ್ಲಾ ಸಮುದಾಯದವರು ಆಚರಿಸುವ ಹಬ್ಬವಾ? ಬೇಡ, ಹಿಂದೂ ಧರ್ಮದೊಳಗಿನ ಅಷ್ಟೂ ಜಾತಿ-ಪಂಗಡದವರು ಭಾಗವಹಿಸುವ ಧಾರ್ಮಿಕ ಉತ್ಸವವಾ? ಅದೂ ಬೇಡ, ಬ್ರಾಹ್ಮಣರದೇ ಪಂಕ್ತಿ-ಅಡ್ಡಿ ಪಂಕ್ತಿ ವರ್ಗದವರೆಲ್ಲರೂ ಈ ಮಹೋತ್ಸವದಲ್ಲಿ ಸಂಭ್ರಮದಿಂದ ತೊಡಗಿಕೊಳ್ಳುತ್ತಾರಾ? ಊಹುಂ, ಇಲ್ಲವೇ ಇಲ್ಲ. ಇದು ಉಡುಪಿಯ ಅಷ್ಟ ಮಠಾಧೀಶರ ಬಳಗಕ್ಕಷ್ಟೇ ಸೀಮಿತವಾದ ಸೋಗಲಾಡಿ ಹಬ್ಬ!


ಉಡುಪಿ ಪರ್ಯಾಯ ಎಂಬ ವ್ಯಾಪಾರೋತ್ಸವ ನಾಡಹಬ್ಬ ಹೇಗಾಗುತ್ತದೆ?




ಅಷ್ಟಕ್ಕೂ ಇಂಥದೊಂದು ಪರ್ಯಾಯ ಉತ್ಸವ ದ್ವೈತ ಸಿದ್ಧಾಂತದ ಬೇರ್ಯಾವ ಕೇಂದ್ರದಲ್ಲೂ ನಡೆಯುವುದಿಲ್ಲ. ದ್ವಾರಕೆ, ಮಥುರಾ, ಮಂತ್ರಾಲಯ, ಉತ್ತರಾಧಿ ಮಠ ಮುಂತಾದ ಕರ್ಮಠ ದ್ವೈತ ತಾಣಗಳಲ್ಲೂ ಇಂಥ ಆಚರಣೆ-ಪದ್ಧತಿ ಇಲ್ಲ. ಪರ್ಯಾಯ ಪ್ರಹಸನ ಏನಿದ್ದರೂ ಉಡುಪಿಯ ಅಷ್ಟ ಮಠದ ಜಗಳಗಂಟ ಸ್ವಯಂಘೋಷಿತ ಸಾಧು-ಸಂತರ ಅಂಗಳದಲ್ಲಷ್ಟೇ ನಡೆಯುತ್ತಿರುವಂಥದ್ದು. ಈ ಪರ್ಯಾಯದ ವ್ಯಾಖ್ಯೆಯೂ ತುಂಬ ಸರಳ. ಪರ್ಯಾಯವೆಂದರೆ, ಉಡುಪಿಯ ಕೃಷ್ಣ ಮಂದಿರದ ದಂಧೆ ಉಸ್ತುವಾರಿ ಸೂತ್ರವನ್ನು ಎರಡೆರಡು ವರ್ಷಕ್ಕೊಮ್ಮೆಯಂತೆ ನಿರ್ದಿಷ್ಟ ಮಠದ ಯತಿ ಮತ್ತೊಂದು ನಿರ್ದಿಷ್ಟ ಮಠಾಧೀಶನಿಗೆ ವಹಿಸಿಕೊಡುವ ವೈಷ್ಣವ ಜಾತಿ ಸ್ವಾಮಿಗಳ ನಡುವಿನ ಒಡಂಬಡಿಕೆ ಅಷ್ಟೇ! ಹಾಗಿರುವಾಗ 'ಪರ್ಯಾಯ' ನಾಡಹಬ್ಬವಾಗುವುದಾದರೂ ಹೇಗೆ?



ಉಡುಪಿ ಮಾಧ್ವ ಸನ್ಯಾಸಿಗಳ ಪರ್ಯಾಯ ಶೋ ನಾಡಹಬ್ಬವಾಗುವುದಿರಲಿ, ಅವಿಭಜಿತ ದಕ್ಷಿಣ ಕನ್ನಡದ ಪಾರಂಪರಿಕ ಉತ್ಸವವೂ ಅಲ್ಲ! ಉಡುಪಿ-ದಕ್ಷಿಣ ಕನ್ನಡ ಜಿಲ್ಲೆಗಳ ಅಬ್ರಾಹ್ಮಣ ಸಮುದಾಯಗಳ ಸಹಭಾಗಿತ್ವ-ಸಂತೋಷದ ತೊಡಗಿಕೊಳ್ಳುವಿಕೆ ಯಾವುದೂ ಈ ಪರ್ಯಾಯದಲ್ಲಿ ಇರುವುದಿಲ್ಲ. ಬ್ರಾಹ್ಮಣರ ಒಂದು ನಿರ್ದಿಷ್ಟ (ವೈಷ್ಣವ) ಗುಂಪಿನೊಳಗಿನ ಎಂಟು ಚಿತ್ರವಿಚಿತ್ರ ಸ್ವಾಮಿಗಳ ತಂಡದ ನಡುವಿನ ನೈಚ್ಯಾನುಸಂಧಾನದಂತೆ ನಡೆಯುವ 'ಹಬ್ಬ' ಇದಾದ್ದರಿಂದ ಬೇರ್ಯಾವ ಜಾತಿ-ಪಂಗಡದವರಿಗೆ ಯಾವುದೇ ಬಗೆಯ ಪಾಲ್ಗೊಳ್ಳುವಿಕೆ ಇರುವುದಿಲ್ಲ. ಆದರೆ ಶೋಷಿಸುವ ಕುಕಲಾ ಪಾರಂಗತರಾದ ಉಡುಪಿಯ ಎಂಟೂ ಮಾಧ್ವ ಯತಿಗಳು ತಂತಮ್ಮ ಪರ್ಯಾಯಕ್ಕೆ ಬೇಕಾದ ದವಸ-ಧಾನ್ಯ-ಕನಕ- ಹೂ-ಹಣ್ಣು-ಗುಳ್ಳ (ಬದನೆ)-ತೆಂಗಿನಕಾಯಿ ಹೊರೆಗಾಣಿಕೆಯಾಗಿ ಸುಲಿಯಲು ಮತ್ತು ಸೇವೆಗೆ ಒಂದೊಂದು ಶೂದ್ರ ತಂಡಗಳನ್ನು ಲಾಗಾಯ್ತಿನಿಂದ ಅಣಿಗೊಳಿಸಿ ಕೊಂಡು ಬಂದಿದ್ದಾರೆ.



ಮಠದಲ್ಲಾಗಲಿ, ಕೃಷ್ಣ ದೇವಸ್ಥಾನದಲ್ಲಾಗಲಿ ತಮಗೆ ಕನಿಷ್ಠ ಸಹಭೋಜನಕ್ಕೂ ಅಷ್ಟ ಯತಿಗಳು ಅವಕಾಶ ಕೊಡದಿದ್ದರೂ ಈ ಶೂದ್ರರು ಪ್ರತಿ ಪರ್ಯಾಯಕ್ಕೆ ಲೋಡುಗಟ್ಟಲೆ ಅಕ್ಕಿ-ಕಾಯಿ-ಬದನೆ, ರಥಕ್ಕೆ ಬೇಕಾದ ಟನ್‌ಗಟ್ಟಲೆ ಕಟ್ಟಿಗೆ ಒಟ್ಟುಗೂಡಿಸಿ ಕೊಡುತ್ತಲೇ ಇದ್ದಾರೆ. ಅತ್ತ ಬೂಟಾಟಿಕೆಯ ಅಷ್ಟ ಯತಿಗಳು ತಮ್ಮ ಒಣಪ್ರತಿಷ್ಠೆ-ಕೃಷ್ಣನ ಹುಂಡಿಗಾಗಿ ಉಪವಾಸ ಕುಳಿತರೆ ಇತ್ತ ಹಸಿವಿಂದ ಚಡಪಡಿಸುವ ಮುಗ್ಧ ಶೂದ್ರರೂ ಇದ್ದಾರೆ. ಕಾವಿ ಖದೀಮರು ಎರಡು ವ... ಅವಧಿಗೆ ಕುಳಿತು ಉಣ್ಣಲು ಮುಗ್ಧ ಶೂದ್ರರಿಂದ ದವಸ-ಧಾನ್ಯ-... 'ಹೊರೆಗಾಣಿಕೆ' ಹೆಸರಲ್ಲಿ ಹೊರೆಹೊರೆಗಟ್ಟಲೆ ಎತ್ತಿ ಒಯ್ಯುವುದು ದುರಂ... ಸರಿ!!



ಜಾತಿಪದ್ಧತಿಯನ್ನು ತುಂಬ ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುತ್ತಿ... ಉಡುಪಿಯ ಮಾಧ್ವ ಮಠಾಧೀಶರು ಶೂದ್ರರನ್ನು ಶೋಷಿಸಿ... ನಾಜೂಕಾಗಿ ಸರ್ಕಾರವನ್ನೂ ಸುಲಿಯುತ್ತಿದ್ದಾರೆ. ಪ್ರತಿ ... ವರ್ಷಕ್ಕೊಮ್ಮೆ ನಡೆಯುವ ಪರ್ಯಾಯಕ್ಕೆ ಸರ್ಕಾರದ... ಕೋಟಿ-ಕೋಟಿ 'ಕಾಣಿಕೆ' ಅಧಿಕೃತವಾಗೇ ಬರುತ್ತದೆ. ಇಡೀ ... ಪಿಯ ರಸ್ತೆ ಇನ್ನಿತರ ಮೂಲಭೂತ ಸೌಕರ್ಯ ಪರ್ಯಾಯ... ಸಿದ್ಧವಾಗುತ್ತದೆ. ಧಗಾಕೋರರ ಧಾರ್ಮಿಕ ಉತ್ಸವಕ್ಕೂ ಸ... ಅನುದಾನ ಬರುತ್ತದೆ. ಖಾಸಗಿ ಮಠದ ವೈಭವಕ್ಕೆ ಸರ್ಕಾರಿ ... ವ್ಯಯವಾಗುತ್ತದೆ. ಈ ಬಾರಿಯ ಉಡುಪಿ ಮಠದವರ ಪ... ಪ್ರಹಸನಕ್ಕೆ ಸಿಎಂ ಸದಾನಂದ ಗೌಡ ಬರೋಬ್ಬರಿ 8.5 ಕ... ಕಾಸು ಖಜಾನೆಯಿಂದ ಎತ್ತಿಕೊಟ್ಟಿದ್ದಾರೆ.

ನಾಚಿಕೆಗೇಡಿನ ಸಂಗತಿಯೆಂದರೆ, ಎಲ್ಲ ಸಮುದಾಯದ ಪಾಲ್ಗೊಳ್ಳುವಿ... ಇಲ್ಲದ ಪುರೋಹಿತಶಾಹಿಗಳ ಪಕ್ಕಾ ಖಾಸಗಿ ತೆವಲಿನ ಪರ್ಯಾಯ ಸಿದ್ಧತೆಗಾಗಿ ರಚಿಸಲಾಗುವ ಸಮಿತಿಗೆ ಸಿಎಂ ಸಾಹೇಬರೇ ಅಧ್ಯಕ್ಷರಾಗಿರುತ್ತಾರೆ; ಜಿಲ್ಲಾ ಉಸ್ತುವಾರಿ ಮಂತ್ರಿ ಕಾರ್ಯಾಧ್ಯಕ್ಷರಾಗಿರುತ್ತಾರೆ. ಪರ್ಯಾಯ ಅಧಿಕಾರ ಹಸ್ತಾಂತರದಷ್ಟೇ 'ಧಾರ್ಮಿಕ'ವಾಗಿ ತಮ್ಮ ಪರ್ಯಾಯ ಉತ್ಸವದ ಉಸ್ತುವಾರಿಕೆಯನ್ನು ಆಳುವ ದೊರೆಗಳಿಗೆ ವಹಿಸುತ್ತ ಬಂದಿ... ವ್ಯಾವಹಾರಿಕ ತಂತ್ರಗಾರಿಕೆಯ... ಅಷ್ಟ ಮಠಾಧೀಶರು! ಆ ಮೂಲಕ ತಮ್ಮ ದೌಲತ್ತಿನ ... ದರ್ಬಾರಿಗೆ 'ನಾಡಹಬ್ಬ'ದ ಇಮೇಜು ತರುವ ಅಷ್ಟ ಯ... ಕೊಳಕು ಕರಾಮತ್ತಿದು!! ಹಾ... ಈ ಚೋರ ಕಾವಿ ಜೀವಿಗಳು ಎರಡು ವರ್ಷದ ಪರ್ಯಾಯ... ಪರ್ವದ ಆದಾಯ-ಖರ್ಚುಗಳನ್ನೇನೂ... ಸಾರ್ವಜನಿಕವಾಗಿ ಘೋಷಿಸುವುದಿಲ್ಲ. ಸರ್ಕಾರ... ತೋರಿಸುವುದಿಲ್ಲ. ಧಾರ್ಮಿ... ದಂಧೆಯಲ್ಲಿ ಲಾಭ ಬಂದಾಗ... ತಮ್ಮ ಎಂಟೂ ಮಠಗಳು ... ಅಂತಾರೆ; ಸರ್ಕಾರಿ ದುಡ್ಡು ಬೇಕಾದಾಗ ಕೃಷ್ಣದೇವಸ್ಥಾನ ಸಾರ್ವಜನಿಕರದು ಎಂದು ಅನಾಚಾರ ಮಾಡ್ತಾರೆ. ಹಾಗಂತ ಪರ್ಯಾಯ ಉತ್ಸವದ ಉಸ್ತು... ಭಯ-ಭಕ್ತಿಯಿಂದ ನಡೆಸುವ-ಬೊಕ್ಕಸದ ದುಡ್ಡು ಬೇಕಷ್ಟು ಕೊಡುವ ಆ... ಸಿಎಂ-ಮಂತ್ರಿಗಳಿಗೂ ಮಠಾಧೀಶರು ಮೂರು ಕಾಸಿನ ಕಿಮ್ಮತ್ತೇನೂ ಕೊಡುವುದಿಲ್ಲ. ಪರ್ಯಾಯದ ಮೆರವಣಿಗೆಯಲ್ಲಿ ಸಾಗಿಬರುವ ಪುಟ್ಟರಾಯ-ತಟ್ಟೆರಾಯನಷ್ಟೇ ಗೌರವ ಈ ಮಂತ್ರಿ-ಮಾಗದರಿಗೆ. ಮೆರವಣಿಗೆ ಮುಗಿದಾಗ ಮಠದ ಹೊರಗೇನೇ!!

ಹಾಗೆ ನೋಡಿದರೆ ಉಡುಪಿ ಮಠದವರ ಧ... ಪರ್ಯಾಯ ಮಹೋತ್ಸವಕ್ಕಿಂತಲೂ ಪ್ರಸಿದ್ಧವಾದ ಎಲ್ಲ... ಧರ್ಮದವರೂ ಆಚರಿಸುವ ಹಲವು ಹಬ್ಬಗಳು ತುಳುನಾ... ಇಂದಿಗೂ ನಡೆಯುತ್ತಿವೆ; ಅಷ್ಟ ಮಠದ 'ದೇವದೂತ'ರು ಸೇ... ಉಳಿದವರೆಲ್ಲ ಸೇರಿ ಆಚರಿಸುವ ಹಲವಾರು ಉತ್ಸ... ಉಡುಪಿಯಲ್ಲೇ ಜರುಗುತ್ತಿವೆ. ಮುಜರಾಯಿ ಇಲಾಖೆ... ಸುಬ್ರಹ್ಮಣ್ಯ ದೇವಸ್ಥಾನದ ರಥೋತ್ಸವ, ಕಾರ್ಕಳದ ಅತ್ತೂರಿನ ಸಂತ ... ಇಗರ್ಜಿಯ ಸಾಂತ್‌ಮಾರಿ, ಉಳ್ಳಾಲ ದರ್ಗಾದ ವಾರ್ಷಿಕ ಉರೂಸ್‌ಗಳು ... ಮಾಧ್ವ ಯತಿಗಳ ಸಂಕುಚಿತ ಸಿದ್ಧಾಂತದ ಪರ್ಯಾಯಕ್ಕಿಂತಲೂ ಪವರ್... ಇದೇತರ ಉಡುಪಿಯಲ್ಲೇ ನಡೆಯುವ ಶ್ರೀಕೃಷ್ಣ ಜನ್ಮಾಷ್ಟಮಿ, ಮಂಗ... ಕುದ್ರೋಳಿ ನವರಾತ್ರಿ ಸಡಗರದಲ್ಲಿ ಸರ್ವ ಸಮುದಾ... ಜತೆಗೂಡಿ ಆಚರಿಸುವ ಸಾರ್ವತ್ರಿಕ ಹಬ್ಬ ಅಲ್ಲವಾ? ಈ ಹ... ಇರದ ಪ್ರಾಮುಖ್ಯತೆ-ಸರ್ಕಾರಿ ಮನ್ನಣೆ ಕುತಂತ್ರಗಾರಿಕೆಯ... ಧಾರ್ಮಿಕ ಭಯೋತ್ಪಾದನೆಯಿಂದ ಪಡೆದರೆ ಉಡು... ಜಗಳಗಂಟ ಮಾಧ್ವಯತಿಗಳ ಅಧಿಕಾರ ಹಸ್ತಾಂತರ ಆವಾ... ನಾಡಹಬ್ಬದ ಖದರು ಬಂದೀತಾ?

ತುಳುನಾಡಿನಲ್ಲಿ ಎಲ್ಲ ಜಾತಿ-ವರ್ಗದವರು ... ಆಚರಿಸುವ-ಮೇಲು ಕೀಳೆಂಬಭೇದ-ಭಾವವಿಲ್ಲದೆ ಆಚ... ಹಲವು ಉತ್ಸವ-ಹಬ್ಬಗಳಿಗೆ ಇರದ ಪ್ರಾಮುಖ್ಯತೆ -... ಮರ್ಯಾದೆ ಅಷ್ಟ ಮಠಾಧೀಶರ ಆಡಳಿತ ಬದಲಾವಣೆಯ... ಪ್ರಕ್ರಿಯೆಗೇಕಾದರೂ ಕೊಡಬೇಕು? ದ್ವೈತ ಯತಿಗಳ ಅಧಿಕಾರ-ಐಶ್ವರ್ಯ-... ಸಂಘರ್ಷಕ್ಕೆ ಅಥವಾ ಪರ್ಯಾಯದ ವೈಭವೀಕರಣಕ್ಕೆ ಹಿಂದುಳಿದವರು ಬೆವರಿಳಿಸಿ ಬೋಳಿಸಿಕೊಳ್ಳಬೇಕು? ತುಳುನಾಡಿನ ಇತಿಹಾಸ ತೆಗೆದು ನೋ... ಶತಮಾನಗಳ ಹಿಂದೆ ಈ ನೆಲದ ದ್ರಾವಿಡ ತುಳುವರ ಮೇಲಾದ ಆ... ಪ್ರಭಾವ-ಬಲಾತ್ಕಾರದಿಂದಲೇ ಇಲ್ಲಿ ವೈಷ್ಣವ ವಾದ ನೆಲೆ ನಿಂತಿರು... ಸ್ಪಷ್ಟವಾಗುತ್ತದೆ; ಶೈವಾರಾಧಕ ತುಳುವರಿಗೂ ವೈಷ್ಣವಾರಾಧಕ ದ್ವೈ... ಅಜಗಜಾಂತರ ಧಾರ್ಮಿಕ-ಸಾಮಾಜಿಕ- ಅಂತರ-ವ್ಯತ್ಯಾಸವಿರುವುದು ಕಾಣಿ... ಹೀಗಿರುವಾಗ ಈ ಪಂಕ್ತಿಭೇದದ- ಜಾತಿಭೇದದ ಅಷ್ಟ ಮಠದ ಅನಿಷ್ಟ ಸ್ವಾ... ಪಲ್ಲಕ್ಕಿ ಯಾಕೆ ಹೊರಬೇಕು? ಅವರ ಪರ್ಯಾಯ ಲೋಲುಪತೆಗೇಕೆ ಹೊ... ಕೊಡಬೇಕು? ಮಠದೊಳಗಿನ ಬೆಕ್ಕು ಉಪವಾಸ ಕುಳಿತರೆ ಶೂದ್ರ... ಹಸಿವಾಗಬೇಕು? ಹುಸಿನಾಡಹಬ್ಬಕ್ಕೆ ಅಬ್ರಾಹ್ಮಣರೇಕೆ ಸಾಕ್ಷಿ ಆಗಬೇಕು?

• ನ...


ಗೃಹಮಂತ್ರಿ ಬಗಲಲ್ಲೇ ಕ್ರಿಮಿನಲ್ ಕಲ್ಲಡ್ಕ ಭಟ್ಟ!



ರ್ನಾಟಕದ ದುರಂತ ನೋಡಿ! ಈ ನೆಲದ ಕಾನೂ ಸಾಕ್ಷಾತ್ ಗೃಹಮಂತ್ರಿಯಾದವನೇ ಕಡೆಗಣಿಸಿ ನಲ್ ಪಾತಕಿಯ ಜತೆ ಸರಸವಾಡಿದರೆ ರಾಜ್ಯದ ಜನ ಯಿಂದಿರಲು ಸಾಧ್ಯವಾ? ಕೋಮು ಕಿತಾಪತಿ ದ ದೇಶದ್ರೋಹಿಯನ್ನು ಮುಖ್ಯಮಂತ್ರಿಯೇ ಡಿದರೆ ಮನುಷ್ಯ ಮಾತ್ರದವರಿಗೆ ಭಯವಾಗದಾ? ಕನ್ನಡದ ಉಪ್ಪಿನಂಗಡಿಯಲ್ಲಿ ಬಾಯಿಗೆ ಬಂದಂತೆ ಡಿ ಕಮ್ಯೂನಲ್ ಕೇಸ್ ಮೈಮೇಲೆ ಹಾಕಿಕೊಂಡಿ ಆರೆಸ್ಸೆಸ್ 'ಡಾನ್' ಕಲ್ಲಡ್ಕ ಪ್ರಭಾಕರ್ ಭಟ್‌ನನ್ನು ಬಂಧಿ ಮು ಬಿಟ್ಟು ಸಿಎಂ ಸದಾ ಮತ್ತು ಗೃಹಮಂತ್ರಿ ಅಶೋಕ್ ವಂದನೆ ಸಲ್ಲಿಸುತ್ತಿರುವುದು ರಾಜ್ಯಕ್ಕೆ ಎದುರಾಗಿರುವ ಮುತದ ಸಂಕೇತದಂತಿದೆ!!

ಹಿಂದು ಕೋಮನ್ನು ಇನ್ನೊಂದರ ವಿರುದ್ಧ ಹಿಂಸಾತ್ಮಕವಾಗಿ ಎತ್ತಿಕಟ್ಟುವುದು ದ್ರೋಹ. ಕಾನೂನಿನಲ್ಲಿ ಈ ಅಪರಾಧಕ್ಕೆ 7 ವರ್ಷಕ್ಕಿಂತ ಹೆಚ್ಚು ಶಿಕ್ಷೆ ಇದೆ; ಧಿಯನ್ನು ವಾರೆಂಟ್ ಇಲ್ಲದೆ ಜೈಲಿಗೆ ಹಾಕಬಹುದು. ಇಂಥದೊಂದು ಧ ಉಪ್ಪಿನಂಗಡಿಯಲ್ಲಿ ಬಹಿರಂಗವಾಗೇ ಮಾಡಿರುವ ಕಲ್ಲಡ್ಕ ಪ್ರಭಾಕರ್ ನ ಮೇಲೆ ಪೊಲೀಸರು ಕೇಸ್ ಬುಕ್ ಮಾಡಿದ್ದಾರೆ. ಈ ಬಿಜೆಪಿ ಸರ್ಕಾರದ ಪುರೋಹಿತ ಉಪ್ಪಿನಂಗಡಿಯಲ್ಲಿ ವಿರಾಟ್ ಹಿಂದೂ ಸಮಾಜೋತ್ಸವದ ಮೇಲೆ ನಿಂತು ಮುಸ್ಲಿಂ, ಕ್ರಿಶ್ಚಿಯನ್ನರನ್ನು ವಾಚಾಮಗೋಚರವಾಗಿ ಬೈದು ಮು ತೀಟೆ ತೀರಿಸಿಕೊಂಡಿದ್ದ. ಭಟ್ಟನ ಮೇಲೆ ಪೊಲೀಸರು ಕಾರ್ಯ'ವಾಗಿ ಎಫ್‌ಐಆರ್ ಹಾಕಿದ್ದಾರೆ. ಆದರೆ ಭಟ್ಟ ಮತ್ತವನ ಸಹಚರ ಬಂಧಿಸಿ ತನಿಖೆ ಕೈಗೊಳ್ಳುವ ಗಟ್ಸ್ ಇಲ್ಲದೆ ಹೇತ್ಲಾಂಡಿಗಳಂತಾಡುತ್ತಿದ್ದಾರೆ. ಬಿಜೆಪಿ ಸರ್ಕಾರದ ರಿಂಗ್‌ಮಾಸ್ಟರ್ ಭಟ್ಟ 'ವಾಂಟೆಡ್ ಕ್ರಿಮಿನಲ್' ಆಗಿದ್ದರೂ ಲೀಸರು ಮತ್ತು ಪೊಲೀಸು ಮಂತ್ರಿ, ಜಿಲ್ಲಾ ಉಸ್ತುವಾರಿ ಮಂತ್ರಿ, ಡಿಐಜಿ, , ಎಸ್‌ಪಿಗಳೆದುರೇ ರಾಜಾರೋಷವಾಗಿ ಓಡಾಡುತ್ತಿದ್ದಾನೆ. ತನ್ನ ಚೆಡ್ಡಿ ದ ಕೋಡನ್ನು ಹಿಡಿವ ತಾಕತ್ತು ರಾಜ್ಯ ಪೊಲೀಸರಿಗಿಲ್ಲ ಎಂಬ -ಕರ್ಮ ಆತನಿಗೆ ಚೆನ್ನಾಗಿ ಗೊತ್ತು, ಪೊಲೀಸರಂತೂ ಭಟ್ಟನ ಕಂಡರೆ ಸೆಲ್ಯೂಟ್ ಹೊಡೆದು ಕಣ್ಮರೆಯಾಗಿ ಬಿಡುತ್ತಿದ್ದಾರೆ. ಮೊನ್ನೆ ಮಂಗಳೂರಿನ ಪೊಲೀಸ್ ಕಮೀಷನರ್ ಕಚೇರಿ ಉದ್ಘಾಟನೆಗೆಂದು ಗೃಹಮಂತ್ರಿ ಅಶೋಕ್ ಬಂದಿದ್ದರು. ಜೊತೆಯಲ್ಲಿ ಶಂಕರ್ ಬಿದರಿ, ಜಿಲ್ಲಾ ಮಂತ್ರಿ ಪಾಲೇಮಾರ್, ಪಕ್ಕದ ಉಡುಪಿ ಮಂತ್ರಿ ಆಚಾರ್ಯ, ಎಸ್‌ಪಿ ಅಭಿಷೇಕ್ ಗೋಯಲ್, ಕಮೀಷನರ್ ಸೀಮಂತಕುಮಾರ್ ಸಿಂಗ್‌ಗಳು ಇದ್ದರು. ಇವರೆಲ್ಲರ ಭುಜ ಹೊಸೆಯುತ್ತ, ಹಸ್ತಲಾಘವ ಕೊಡುತ್ತಾ ಆರೋಪಿ ಭಟ್ಟ ಓಡಾಡಿಕೊಂಡಿದ್ದ. ಗೃಹಮಂತ್ರಿ ಅಶೋಕ್‌ರಂತೂ ಕಲ್ಲಡ್ಕರ ಬಳಿಯೇ ಬಂದು ಕುಶಲ ವಿಚಾರಿಸಿಹೋದರು. ನೆರೆದಿದ್ದ ಜನರೆಲ್ಲ ಇದೆಂಥ 'ಕಲಿಗಾಲ' ಎಂದು ಹಣೆ-ಹಣೆ ಚಚ್ಚಿಕೊಂಡರು.

ಇದಾದ ಕೆಲವೇ ದಿನದಲ್ಲಿ ಸಾಕ್ಷಾತ್ ಸಿಎಂ ಸದಾನಂದ ಗೌಡರೇ ಸಂಘಪರಿವಾರದ ಈ ಪ್ರಶ್ನಾತೀತ ಪುರೋಹಿತನಿಗೆ ಹುಬ್ಬಳ್ಳಿಯ ಆರೆಸ್ಸೆಸ್ ಸಮಾವೇಶದಲ್ಲಿ ಭೇಟಿಯಾಗಿ ಕುಶಲೋಪರಿ ನಡೆಸಿದ್ದರು. ಆಗಲೂ ಈ ಕಲ್ಲಡ್ಕ ಭಟ್ಟ ದಕ್ಷಿಣ ಕನ್ನಡದ ಪೊಲೀಸರಿಗೆ ಬೇಕಾದವನೇ ಆಗಿದ್ದ. ಅದು ದಕ್ಷಿಣ ಕನ್ನಡದ 'ವರಪುತ್ರ' ಸದಾಗೂ ಗೊತ್ತಿತ್ತು. ಆದರೂ ಸಂಘಪರಿವಾರದ ಅಡಿಯಾಳಾದ ಸದಾನಿಂದ ಈ ನೆಲದ ಕಾನೂನು ಕಾಪಾಡಲಾಗಲಿಲ್ಲ. ಪಾಪಿ ಭಟ್ಟನಿಗೆ ಒದ್ದು ಒಳಗಾಕಲು ಪೊಲೀಸರಿಗೆ ಹೇಳಲಿಕ್ಕೂ ಧೈರ್ಯವೇ ಇರಲಿಲ್ಲ ಬಿಡಿ. ಇನ್ನೊಂದೆಡೆ ಜಿಲ್ಲಾ ಉಸ್ತುವಾರಿ ಮಂತ್ರಿ ಕೃಷ್ಣ ಪಾಲೇಮಾರ್ ತನ್ನ ಪರಮೋಚ್ಚ ನಾಯಕ-ಮಂತ್ರಿಗಿರಿ ಕರುಣಿಸಿ ಜೀವನ ಪಾವನ ಮಾಡಿದ ಕಲ್ಲಡ್ಕನ ಕ್ರಿಮಿನಲ್ ಭಾಷಣವನ್ನು ಸಮರ್ಥಿಸುತ್ತಿದ್ದಾನೆ; ಒಡೆಯನ ಹಿತರಕ್ಷಿಸಲು ಕಂಕಣ ಬದ್ಧನಾಗಿ ನಿಂತಿದ್ದಾನೆ.



ಹೀಗೆ ಆಳುವವರೆ ಅನಾಹುತಕಾರಿ ಆರೋಪಿಯ ಬೆನ್ನಿಗಿದ್ದರೆ ಪೊಲೀಸರಾದರೂ ಏನು ಮಾಡಿಯಾರು? ಡಿಐಜಿ ಸಾಹೇಬರು ಕಣ್ಣೆದುರೇ ಇದ್ದ ವಾಂಟೆಡ್ ಭಟ್ಟನ ಕಂಡೂ ಕಾಣದಂತೆ 'ಡ್ಯೂಟಿ' ಮಾಡಿಹೋದರು. ಎಸ್ಪಿ ಗೋಯಲ್ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಡೊಗ್ಗು ಸಲಾಮು ಸರ್ಕಾರದ ಗಾಡ್‌ಫಾದರ್‌ಗೆ ಹೊಡೆರು. ಕಾನೂನು ಪ್ರಕಾರ ಅಪರಾಧ ಮಾಡುವಷ್ಟೇ ಶಿಕ್ಷಾರ್ಹ ಆರೋಪಿಯನ್ನು ರಕ್ಷಿಸುವುದು ಮತ್ತು ಅಪರಾಧದಲ್ಲಿ ಶಾಮೀಲಾಗುವುದು. ನಾಗರಿಕ ಸಮಾಜದಲ್ಲಿ ಕಮ್ಯುನಲ್ ಕಿಚ್ಚು ಹಚ್ಚಿದ-ಕಾನೂನನ್ನು ಕೈಗೆ ತೆಗೆದುಕೊಂಡ ಚೆಡ್ಡಿ ರೌಡಿ ಕಲ್ಲಡ್ಕ ಭಟ್ಟನ್ನು ರಕ್ಷಿಸುತ್ತಿರುವ ಆರೋಪ ಸಿಎಂ ಸದಾ ಮತ್ತು ಗೃಹಮಂತ್ರಿ ಅಶೋಕ್ ಹೊರಬೇಕಾಗಿದೆ; ಹಾಗೆಯೇ ಜಿಲ್ಲಾ ಮಂತ್ರಿ ಪಾಲೇಮಾರ್ ಕಲ್ಲಡ್ಕನ ಅಪರಾಧದಲ್ಲಿ ಶಾಮೀಲಾದ ಪಾಪಿ!








ಸಿಎಂ ಸದಾ, ಗೃಹ ಮಂತ್ರಿ ಅಶೋಕ್, ಜಿಲ್ಲಾ ಮಂತ್ರಿ ಪಾಲೇಮಾರ್, ಡಿಐಜಿ ಶಂಕರ್ ಬಿದರಿ ಮತ್ತು ಎಸ್ಪಿ ಕಮೀಷನರ್‌ಗಳೂ ಈಗ ಕಲ್ಲಡ್ಕನ ಕಮ್ಯುನಲ್ ಪಾಪದಲ್ಲಿ ಪಾಲುದಾರರು! ಇವರೆಲ್ಲರ ಮೇಲೆ ಕ್ರಮ ಜರುಗಿಸಬೇಕಾಗಿರುವುದು ಪೊಲೀಸ್ ವ್ಯವಸ್ಥೆಯ ಕರ್ತವ್ಯ. ನಾಗರಿಕ ಸಮಾಜದ ಆತ್ಮಸಾಕ್ಷಿಯ ಧ್ವನಿಯೂ ಇದೇ! ಕಾನೂನು ಈ ದ್ರೋಹಿಗಳ ವಿಚಾರಿಸಿಕೊಂಡೀತಾ?

• ನಹುಷ

ಚೆಲುವ ಕನ್ನಡ ನಾಡು


ನಮ್ಮ ಕರ್ನಾಟಕದಲ್ಲಿನ ಹಾಲಿ ಪರಿಸ್ಥಿತಿಯನ್ನು ತೋರುವ ಎರಡು ಚಿತ್ರಗಳು ಇಲ್ಲಿವೆ.



1 ರಾಜ್ಯ ಸರ್ಕಾರದ ನೀತಿಗಳ ವಿರುದ್ಧ ಜನ ಪ್ರತಿಭಟಿಸಬಾರದೆಂದು ವಿಧಾನ ಸೌಧದ ಎದುರು ರಾಜಕಾರಣಿಗಳ ರಕ್ಷಣೆಗೆ ನಿಂತಿರುವ ಜಲ ಫಿರಂಗಿ.




2 ಕುಡಿಯುವ ನೀರು ಬೇಕೆಂದು ಬಿಂದಿಗೆಗಳೊಂದಿಗೆ ಹುಬ್ಬಳ್ಳಿಯಲ್ಲಿ ಪ್ರತಿಭಟಿಸುತ್ತಿರುವ ಮಹಿಳೆಯರು.



ಬಂದವನು ಯಾರು, ಎಲ್ಲಿಯವನು, ಬಂದ ಉದ್ದೇಶವೇನು, ಮೊದಲಿಗೆ ನಮ್ಮ ಮನೆಗೆ ಬರುವ ಅವಶ್ಯಕತೆಯೇನು ಎಂದೆಲ್ಲ ನಾನು ತಲೆ ಕೆಡಿಸಿಕೊಳ್ಳುತ್ತಿರಬೇಕಾದರೆ ಅಜ್ಜಿ ಮಾತ್ರ ಅದೆಲ್ಲ ತನಗೆ ಗೊತ್ತಿದೆಯೆಂಬಂತೆ ಸಮಾಧಾನದಿಂದಿದ್ದಳು. ಕಣ್ಣಲ್ಲಿ ಕಣ್ಣಿಟ್ಟು ನೋಡುವ ಹಣ್ಣು ಹಣ್ಣು ಮುದುಕಿಗೆ ಅವನ ಪರಿಚಯ ಹೇಗೆ ಹತ್ತಿತೊ, ಯಾವ ಊರಿನ, ಯಾವ ಸಂಬಂಧದ ಎಳೆಗಳು ತಮ್ಮಷ್ಟಕ್ಕೆ ತಾವು ಹೊಂದಿಕೊಂಡು ನೇಯಲ್ಪಟ್ಟವೊ ನನಗಂತೂ ತಿಳಿಯಲಿಲ್ಲ......

ಆಗಂತುಕ

ಕತೆ



• ಬಸು ಬೇವಿನಗಿಡದ

ಗುರುತು ಪರಿಚಯವಿರದ ಅಜಾನುಬಾಹು ವ್ಯಕ್ತಿಯೊಬ್ಬ ಹೀಗೆ ಒಮ್ಮಿಂದೊಮ್ಮಲೆ ನಮ್ಮ ಮನೆಗೆ ಭೇಟ್ಟಿ ಕೊಡುತ್ತಾನೆಂದು ನಾನೇನು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ, ಯಾವ ಸುಳಿವೂ ಕೊಡದೆ ಬೆಳ್ಳಂಬೆಳಿಗ್ಗೆಯೆ ಅವನು ಅವತರಿಸಿದ್ದು ಕಂಡು ಆಶ್ಚರ್ಯ ಅನುಮಾನಗಳೆರಡೂ ಏಕಕಾಲಕ್ಕೆ ಉಂಟಾದವು. ಆತ ನೋಡಲು ಸ್ಫುರದ್ರೂಪಿಯಾಗಿದ್ದ. ಪ್ರೀತಿಯಿಲ್ಲದ, ದ್ವೇಷವಿಲ್ಲದ ಈ ಮುಖವನ್ನು ಯಾವ ರೀತಿ ಎದುರುಗೊಳ್ಳುವುದು? ಅವನು ನಮ್ಮನ್ನೆಲ್ಲ ಗುರುತು ಹಿಡಿದು ಮಾತನಾಡಿಸುತ್ತಿದ್ದಾನೆ. ಹೆಸರು ಹಿಡಿದು ಕರೆಯುತ್ತಿದ್ದಾನೆ. ನನಗೆ ಯಾರು ಅಂತ ಹೊಳೆಯುತ್ತಿಲ್ಲ, ನಮ್ಮನ್ನು ಕಂಡಿದ್ದಕ್ಕೆ ಅವನಲ್ಲಿ ಪ್ರೀತಿಯ ಸೆಳಕುಗಳೇನೂ ಕಂಡುಬರುತ್ತಿಲ್ಲ. ಆದರೆ ತಾನು ಬಂದ ಉದ್ದೇಶವೇನೆಂದು ಹೇಳುವಲ್ಲಿ ಅವನ ಮುಖಭಾವ ತಡವರಿಸುತ್ತಿದೆ. ತಟ್ಟನೆ ಸೆಳೆಯಬಲ್ಲ ಆ ವ್ಯಕ್ತಿತ್ವ ಸೂಜಿಗಲ್ಲಿನಂತೆ ನನ್ನನ್ನು ಸೆಳೆಯುತ್ತಿತ್ತಾದರೂ ಆಗಂತುಕನ ವರ್ತನೆಯಲ್ಲಿ ಕಂಡೂಕಾಣದಂತೆ ಅಡಕವಾಗಿದ್ದ ಅಪ್ರಾಮಾಣಿಕತೆ ನನ್ನಲ್ಲಿ ಸಂಶಯದ ಬೀಜಗಳನ್ನು ಬಿತ್ತಿತು. ಕಪ್ಪು ಬಣ್ಣದ ಕೈಚೀಲದಲ್ಲಿ ಆತ ಏನನ್ನೋ ಮರೆಮಾಚುತ್ತಿರುವ, ಪದೇ ಪದೇ ಅದರತ್ತ ದೃಷ್ಟಿ ಹರಿಸಿ ಮನುಷ್ಯನ ಪ್ರಾಣಪಕ್ಷಿಯನ್ನು ಹಾರಿಸಿಕೊಂಡು ಹೋಗಬಲ್ಲ ಬಲೆಯೊಂದು ತನ್ನ ಹತ್ತಿರ ಇದೆಯೆನ್ನುವ ರೀತಿಯಲ್ಲಿ ವರ್ತಿಸುತ್ತಿರುವುದು, ಅದರಲ್ಲಿರುವ ಅತ್ಯಮೂಲ್ಯವಾದ ವಜ್ರಾಭರಣಗಳು ನಮ್ಮ ಕಣ್ಣಿಗೆ ಬಿದ್ದರೆ ನಾವೆಲ್ಲ ದೃಷ್ಟಿಹೀನರಾಗಬಹುದೆಂಬ ಕಾಳಜಿ ಹೊಂದಿರುವುದು ಅವನ ಬಗೆಗಿನ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿದವು. ಕೈಚೀಲವನ್ನು ಅಪ್ಪಿತಪ್ಪಿಯೂ ಕೆಳಗಿಡದೆ ಬಲಗೈ ಸೋತಾಗ ಎಡಗೈಗೆ, ಎಡಗೈ ಸೋತಾಗ ಬಲಗೈಗೆ ವರ್ಗಾಯಿಸುತ್ತ ಸುಖಾಸುಮ್ಮನೆ ಅವನು ಮುಂಜಾನೆಯ ಸಮಯವನ್ನು ಹಾಳು ಮಾಡುತ್ತಲಿದ್ದ. ನನ್ನ ಬಾಲ್ಯದ ಮತ್ತು ಯೌವನದ ನೆನಪಿನ ಪುಸ್ತಕಗಳನ್ನೆಲ್ಲ ತಿರುವಿ ಹಾಕಿದರೂ ಅವನ ಗೆಳೆತನದ ಯಾವ ಪುಟವೂ ಕಣ್ಣಿಗೆ ರಾಚಲಿಲ್ಲ. ಎಷ್ಟೇ ಪ್ರಯತ್ನಪಟ್ಟರೂ ನನ್ನ ನೆನಪಿನಕೋಶದ ತಂತಿಯನ್ನು ಮೀಟುವಲ್ಲಿ ಅವನು ಸಫಲನಾಗಲಿಲ್ಲ.

ನನ್ನ ಅಜ್ಜಿ ಮಾತ್ರ ಅವನ ಆಗಮನವನ್ನು ಎಷ್ಟೋ ದಿನಗಳಿಂದ ನಿರೀಕ್ಷಿಸುತ್ತಿದ್ದಳೆಂಬಂತೆ ಮಗುವಿನ ಹಾಗೆ ಜಿಗಿಯುತ್ತ ಮೈಮನದಲ್ಲಿ ಸಂಭ್ರಮ ತುಂಬಿಕೊಳ್ಳುತ್ತ ಬಾಗಿಲು ತೆರೆದು ನೀರು ಕೊಟ್ಟು ಉಪಚಾರದ ಮಾತಿಗೆ ಶುರುವಿಟ್ಟಳು. ರಾತ್ರಿಯ ಮಬ್ಬು ಹರಿದು ಇನ್ನೇನು ಬೆಳಕು ಮೂಡಿತೆನ್ನುವಾಗ ಕೈಯಲ್ಲಿ ಮಾಯಾವಿ ಎನ್ನುವಂತಹ ಕೈಚೀಲ ಹಿಡಿದು ನಮ್ಮ ಮನೆಗೆ ಆಗಮಿಸಿದ ಅವನನ್ನು ಕಂಡು ನನಗಂತೂ ಎದೆ ಧಸಕ್ಕೆಂದಿತ್ತು. ಹೊರಟುಹೋಗುತ್ತಿದ್ದ ಕತ್ತಲು ಮತ್ತೆ ಮನೆಯ ಮೂಲೆಮೂಲೆ ಹುಡುಕಿ ಕುಳಿತುಬಿಟ್ಟಿತು. ಆಗಂತುಕನ ಕೈಕುಲುಕಿತು. ಅವನನ್ನು ಆದಷ್ಟು ಬೇಗ ಹೊರಗೆ ಕಳುಹಿಸಿದರೆ ಮಾತ್ರ ನಾನು ನೆಮ್ಮದಿಯಿಂದ ಉಸಿರು ತೆಗೆದುಕೊಳ್ಳಬಹುದು. ಇಲ್ಲದಿದ್ದರೆ ನನ್ನ ಉಸಿರನ್ನೆ ತೆಗೆದುಕೊಂಡಾನೆಂದು ನಿದ್ದೆ ಹೊರಟುಹೋಗಿದ್ದರೂ ಮುಸುಕೆಳೆದುಕೊಂಡು ಮಲಗಿದೆ. ಅಜ್ಜಿಯ ಮಾತು ಆಗಷ್ಟೇ ಶುರುವಾಗಿತ್ತು, ಮಾತಾಡುವವರು ಸಿಕ್ಕರಂತೂ ಅಜ್ಜಿಗೆ ಮುಗಿಲು ಮೂರೇ ಗೇಣು. ಅವಳು ವಾತ್ಸಲ್ಯದಿಂದ ಅವನ ಮೈದಡವಿ ಕುಶಲ ವಿಚಾರಿಸುತ್ತಿರಬೇಕಾದರೆ ಅವನು ಮಾತ್ರ ಯಾವುದೋ ಧಾವಂತದಲ್ಲಿದ್ದವನಂತೆ "ಅಮ್ಮ, ರಾಮಪ್ಪ ಎಲ್ಲಿ ಅದಾನು? ದೂರ ಊರಿಗೆ ಹೊಂಟಿದ್ನಿ. ಸುಮ್ಮನ ಒಬ್ಬನ ಹೋದ್ರ ಬೇಜಾರಾಗ್ತಿತ್ತು. ಅದಕ್ಕ ಅಂವನ್ನ ಕರಕೊಂಡ ಹೋಗಾಕ ಬಂದೇನಿ" ಎಂದು ಕೈಚೀಲವನ್ನು ಮತ್ತಷ್ಟು ಭದ್ರವಾಗಿ ಹಿಡಿದುಕೊಂಡ. ಅವನು ಹಾಗೆ ಅಂದಕೂಡಲೆ ನನ್ನ ಮೈಯೊಳಗೆ ಹೆದರಿಕೆಯ ಸೆಳಕು ಹಾದುಹೋಯಿತು. ಎಂದೂ ಹೆದರದೆ ಇದ್ದವನು ಯಃಕಶ್ಚಿತ್ ಹೆಸರು, ದೆಸೆಯಿಲ್ಲದ ಅಪರಿಚಿತನೊಬ್ಬನಿಗೆ ನಾನು ಹೆದರುತ್ತಿರುವುದು ನನ್ನಲ್ಲಿ ಕೀಳರಿಮೆ ಹುಟ್ಟಲು ಕಾರಣವಾಯಿತು. ಅವನೂ ನನ್ನ ಹಾಗೆ ಮನುಷ್ಯನೆ ತಾನೆ. ಸಹಜವಾಗಿಯೆ ಮಾತನಾಡುತ್ತಿದ್ದಾನೆ ಎಂದು ಅನಿಸಿದರೂ ಅವನು ಅಂದುಕೊಂಡ ಅರ್ಥ ಅವನು ಉಚ್ಚರಿಸಿದ ಅರ್ಥಕ್ಕಿಂತ ಭಿನ್ನವಾಗಿರುವುದು ಸೂಕ್ಷ್ಮವಾಗಿ ಅವಲೋಕಿಸಿದಾಗ ಗೊತ್ತಾಗುತ್ತಿತ್ತು. ನನಗೆ ಅದಕ್ಕಿಂತ ಆಶ್ಚರ್ಯದ ಮಾತೆಂದರೆ ಅಜ್ಜಿ ಆ ಅರ್ಥಗಳನ್ನೆಲ್ಲ ತಿಳಿದುಕೊಂಡು ಅವನಿಗಿಂತ ಜಾಸ್ತಿಯೆ ಮಾತಾಡುತ್ತಿದ್ದಳು. ಅಜ್ಜಿಯ ಎದುರು ತಾನು ಗೆಲ್ಲಲಾರನೆಂದು ಅವನಿಗೆ ಗೊತ್ತಾಗಿರಬೇಕು. ಅವಳ ಮಾತುಗಳು ಸೃಷ್ಟಿಸಿದ್ದ ಪ್ರಭಾವಲಯವನ್ನು ದಾಟುವುದು ಅಷ್ಟು ಸುಲಭದ್ದಾಗಿರಲಿಲ್ಲ. ಹಾಗಾಗಿ ನನ್ನ ಕಡೆ ಕೈಚಾಚಲು ಅವನಿಂದಾಗಲಿಲ್ಲ. ಇಲ್ಲದಿದ್ದರೆ ನಾನು ಹೊದ್ದುಕೊಂಡಿದ್ದ ಚಾದರನ್ನು ಜಗ್ಗಿ ಒಗೆದು ಅವನೆದುರು ಬೆತ್ತಲೆಯಾಗಿ ನಿಲ್ಲುವಂತೆ ಮಾಡುತ್ತಿದ್ದ. ನನ್ನ ತರ್ಕಗಳೇನೆ ಇದ್ದರೂ ಅವನ ಮುಂದೆ ಅವು ಯಶಸ್ವಿಯಾಗುತ್ತಿದ್ದವೊ ಇಲ್ಲವೊ ಗೊತ್ತಿಲ್ಲ. ಅವನ ಜೊತೆ ಹೋಗಲಾರದ ನನ್ನ ನೆಪಗಳನ್ನು ಆತ ಮುದುಡಿ ಮಾಡಿ ಒಗೆಯುತ್ತಿದ್ದನೊ ಏನೋ! ಅಷ್ಟಕ್ಕೂ ಆತ ನನಗೆ ಕೆಟ್ಟದ್ದನ್ನೆ ಮಾಡಲು ಬಂದಿರುವನೆಂಬ ಸಂಶಯ ನನ್ನ ಮನಸ್ಸಿನೊಳಗೆ ಹೇಗೆ ಹೊಕ್ಕಿತೊ ಏನೋ. ಅದರಿಂದ ಒಂದು ರೀತಿಯಲ್ಲಿ ನಾನು ಸ್ಥಿಮಿತ ಕಳೆದುಕೊಂಡು ಒದ್ದಾಡುತ್ತಿದ್ದೆ. ಅಜ್ಜಿ ಎಷ್ಟೊಂದು ನಿರಾಳವಾಗಿದ್ದಾಳೆ. ಹೆಂಡತಿಯೂ ಕೂಡ ಚಿಂತೆಯಿಲ್ಲದೆ ಎಂದಿನಂತೆ ಮುಂಜಾನೆಯ ಚಹಾ ಕಾಯಿಸಲು ಸಕ್ಕರೆ, ಚಹಾಪುಡಿಗಳ ಸಂಸಾರದ ತಾಪತ್ರಯಗಳಲ್ಲಿ ಮುಳುಗಿಹೋಗಿದ್ದಾಳೆ. ನಾನು ಮಾತ್ರ ಇದೊಂದು ಜವಾಬ್ದಾರಿಯೆಂಬಂತೆ ತಲೆಯ ಮೇಲೆ ದೊಡ್ಡ ಭಾರ ಹೊತ್ತು ಇಳುವಲು ನೋಡುತ್ತಿದ್ದೇನೆ.

ಬಂದವನು ಯಾರು, ಎಲ್ಲಿಯವನು, ಬಂದ ಉದ್ದೇಶವೇನು, ಮೊದಲಿಗೆ ನಮ್ಮ ಮನೆಗೆ ಬರುವ ಅವಶ್ಯಕತೆಯೇನು ಎಂದೆಲ್ಲ ನಾನು ತಲೆ ಕೆಡಿಸಿಕೊಳ್ಳುತ್ತಿರಬೇಕಾದರೆ ಅಜ್ಜಿ ಮಾತ್ರ ಅದೆಲ್ಲ ತನಗೆ ಗೊತ್ತಿದೆ ಯೆಂಬಂತೆ ಸಮಾಧಾನದಿಂದಿದ್ದಳು. ಕಣ್ಣಲ್ಲಿ ಕಣ್ಣಿಟ್ಟು ನೋಡುವ ಹಣ್ಣು ಹಣ್ಣು ಮುದುಕಿಗೆ ಅವನ ಪರಿಚಯ ಹೇಗೆ ಹತ್ತಿತೊ, ಯಾವ ಊರಿನ, ಯಾವ ಸಂಬಂಧದ ಎಳೆಗಳು ತಮ್ಮಷ್ಟಕ್ಕೆ ತಾವು ಹೊಂದಿಕೊಂಡು ನೇಯಲ್ಪಟ್ಟವೊ ನನಗಂತೂ ತಿಳಿಯಲಿಲ್ಲ. ಮರೆತುಹೋಗಿದ್ದ ಹಳೆಯ ಸಂಬಂಧಗಳನ್ನು ಅಜ್ಜಿ ಅವನಿಗೆ ನೆನಪಿಸಿದಳು. ಮೊನ್ನೆ ಮೊನ್ನೆಯಷ್ಟೆ ಅಸ್ತಿತ್ವದಲ್ಲಿದ್ದ ಮನೆಯ ಸಮೀಪದ ಬೇವಿನಮರ ರಸ್ತೆಯ ಸಲುವಾಗಿ ಬಲಿಯಾದದ್ದನ್ನು ನೆನೆದು ಅಜ್ಜಿ ಅಳತೊಡಗಿದಳು. "ಆ ಮರ ಏನಾಯ್ತು ಅಂತ ಕೇಳ್ತಾ ಇಲ್ಲಲ್ಲೊ? ನಿನ್ನದೆಂಥ ಕಲ್ಲು ಹೃದಯ" ಎಂದು ಅವನನ್ನು ತರಾಟೆಗೆ ತೆಗೆದುಕೊಂಡಳು. ತನಗೆ ಬೇಸರವಾದಾಗ ಹೋಗಿ ಕೂಡುತ್ತಿದ್ದ ಓಣಿಯ ಬೇವಿನಮರವನ್ನು ಕಡಿಸಿ ಹಾಕಿದ ಮೇಲೆ ನೆರಳು ಎನ್ನುವುದು ಬಂಗಾರ ಆಗಿತ್ತು, ಆ ನೆರಳಿನ ನೆನಪು ಅಜ್ಜಿಯನ್ನು ಆಗಾಗ ಕಾಡುತ್ತಿತ್ತು. "ಮನಿ ಮುಂದಿನ ಬೇವಿನಮರ ಹೋಯ್ತು ಹಿತ್ತಲದಾಗಿನ ಹುಣಸೆಮರ ಹೋಯ್ತು. ಈಗ ಏನಿದ್ರೂ ಮನಿಗೆ ಹೊಚ್ಚಿದ ಕಲ್ಲಿನ ನೆಳ್ಳು" ಎಂದು ನಿಡುಸುಯ್ಯುತ್ತಿದ್ದಳು. ಅವನಂತೂ ಅಜ್ಜಿಯ ಬೊಚ್ಚು ಬಾಯಿಯಿಂದ ಬಾಣಗಳಂತೆ ಬರುತ್ತಿರುವ ಮಾತುಗಳನ್ನು ಅರಗಿಸಿಕೊಳ್ಳಲಾರದೆ ಸೋಲುತ್ತಿದ್ದ. ತಳವಾರ ಯಲ್ಲವ್ವ, ಮುಸಲ್ಮಾನರ ಮೋಮಿನವ್ವ, ಕುಂಬಾರ ಬಸಮ್ಮ ಮುಂತಾದವರು ಹೊರಟು ಹೋದಮೇಲೆ ತನ್ನ ಜೊತೆ ಜಾಸ್ತಿ ಮಾತಾಡುವವರೆ ಇಲ್ಲವಾಗಿದ್ದಾರೆಂದು ಕಣ್ಣೀರು ತಂದುಕೊಂಡಳು. ಜೋತುಬಿದ್ದ ಮುಖದ ನಿರಿಗೆಗಳು ಅಜ್ಜಿಯ ಮುಖಕ್ಕೆ ಮತ್ತಷ್ಟು ಸೌಂದರ್ಯವನ್ನು ಕೊಟ್ಟಿದ್ದವೆ ಹೊರತು ಅವಳ ವಯಸ್ಸಿಗೇನೂ ಅಡ್ಡಿಯಾಗಿರಲಿಲ್ಲ. ಗಾಜಿನ ಗುಂಡುಗಳಂತೆ ಫಳಫಳ ಹೊಳೆಯುವ ಅವಳ ಕಣ್ಣುಗಳ ಬೆಳಕಿಗೆ ಅವನು ಮಂಕಾದ. ನೂರರ ಎಡ ಬಲದ ವಯಸ್ಸಿನ ಆಕೆಯನ್ನು ನಮ್ಮ ಹಲವು ಸಂಬಂಧಿಕರಂತೂ ಅಜ್ಜಿ ಸತ್ತು ಹೋಗಿದ್ದಾಳೆಂದೇ ಭಾವಿಸಿದ್ದರು. "ಅಜ್ಜಿ ನಿನ್ನ ಕೇಳ್ತಾ ಇದ್ಲು" ಎಂದು ನಾನು ಅತ್ತೆಗೋ, ದೊಡ್ಡಪ್ಪನಿಗೋ, ಮಾವನಿಗೋ ಹೇಳಿದಾಗ ಅವರು "ಎರಡು ವರ್ಷದ ಹಿಂದ ಸಾಯುವಂಗ ಆಗಿದ್ಲು, ಬಾಳ ಗಟ್ಟಿ ಬಿಡಪಾ" ಎಂದು ಇನ್ನು ಸತ್ತಿಲ್ಲವೇನು, ಇಹಲೋಕದ ಯಾತ್ರೆ ಎಂದು ಮುಗಿಸುತ್ತಾಳೆ? ಎನ್ನುವ ಭಾವವನ್ನು ತಮ್ಮ ಮಾತುಗಳಲ್ಲಿ ಹೇಳಿ ಅವಳ ಆಯುಷ್ಯವನ್ನು ಅಧಿಕ ಮಾಡುತ್ತಿದ್ದರು. ಆಕೆ ನಮ್ಮ ತಾಯಿಯ ತಾಯಿ ಎಂದರೆ ಯಾರೂ ನಂಬುತ್ತಿರಲಿಲ್ಲ, ಅವ್ವ ಅಜ್ಜಿಯರನ್ನು ಅಕ್ಕ ತಂಗಿಯರೆಂದು ಬಹಳ ಮಂದಿ ತಿಳಿದುಕೊಂಡಿದ್ದರು. ಅವ್ವನ ತಲೆಗೂದಲು ಬೆಳ್ಳಗಾದ ಮೇಲೆ ಅಜ್ಜಿಯ ತಲೆಗೂದಲು ಬೆಳ್ಳಗಾಯಿತು. ಮದುವೆ ಯಾದ ಹೊಸತರಲ್ಲಿ ಹೆಂಡತಿ "ನಿಮ್ಮ ಮನ್ಯಾಗ ಇಷ್ಟು ಬಡಕಲು ಗಟ್ಟಿ ಮುದುಕಿ ಐತಿ ಅಂದಿದ್ರ ನಾ ನಿಮ್ಮನ್ನ ಮದ್ವೀನ ಆಗ್ತಿರಲಿಲ್ಲ" ಎಂದು ಹೆದರಿ ತವರುಮನೆಗೆ ಹೋದವಳು ಬಂದಿರಲೆ ಇಲ್ಲ. ನಾನು ಕರೆಯಲು ಹೋದಾಗ "ಅಂತಹ ವಟಗುಟ್ಟೊ ಮುದುಕಿ ಇರೋವಾಗ ಗಂಡಹೆಂಡತಿ ಹೆಂಗ ಕೂಡಿ ಮಕ್ಕೊಳ್ಳೋದು?" ಎಂದು ಮದುವೆಯ ರಾತ್ರಿಗಳ ಬಗ್ಗೆ ಜಿಗುಪ್ಸೆ ಬೆಳೆಸಿಕೊಂಡಿದ್ದಳು. ಮರಳಿ ಬರಲು ಅವಳನ್ನು ಒಪ್ಪಿಸಬೇಕಾದರೆ ಸಾಕುಸಾಕಾಗಿತ್ತು, ಅತ್ತೆಯೂ ಕೂಡ ಮಗಳಿಗೆ ಬುದ್ಧಿ ಹೇಳಿದ್ದಳು. "ಹೋಗ, ಅದಕ್ಕೆಲ್ಲ ಹೆದರಿ ಗಂಡನಿಂದ ದೂರ ಇರ್‍ತಿಯೇನು? ಅದೆಷ್ಟ ದಿನ ಇದ್ದೀತು ಹೋಗು. ಇಂದು ಮನ್ಯಾಗ, ನಾಳೆ ಕುಣ್ಯಾಗ" ಎಂದು ಅಜ್ಜಿಯ ಸಾವನ್ನು ಭೂಮಿಯ ಮೇಲಿನ ಮನುಷ್ಯರು ಮತ್ತು ಮುಗಿಲಲ್ಲಿಯ ದೇವತೆಗಳು ಲೆಕ್ಕ ಹಾಕಿದಂತೆ ತಪ್ಪು ಲೆಕ್ಕಾಚಾರ ಮಾಡಿ ತಣ್ಣಗೆ ಚಿಟ್ಟೆಕೊಂಡಿದ್ದಳು. ಅಜ್ಜಿ ಮಾತ್ರ ಮಂದಿಯ ಮತ್ತು ಜವರಾಯನ ನಿರೀಕ್ಷೆಗಳನ್ನು ಸುಳ್ಳುಮಾಡಿ ಊರಿಗೆ ಬರುವ ಸೊಸೆಯಂದಿರೆ ಮುದುಕಿಯರಾಗುವಷ್ಟು ಕಾಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದ್ದಳು. ಎಷ್ಟೊ ಶತಮಾನಗಳ ಸೊಸೆಯರನ್ನು ಆಕೆ ಸಲೀಸಾಗಿ ನೆನಪಿಡುತ್ತ ಅವರಿಗೆಲ್ಲ ದಾಂಪತ್ಯದ ಗುಟ್ಟು ಹೇಳುತ್ತಿದ್ದಳು.

ಮನೆಮುಂದಿಗಂತು ಅಜ್ಜಿ ಸಾವಿರಾರು ವರ್ಷಗಳಿಂದ ಈ ಮನೆಯಲ್ಲಿ ಇದ್ದಾಳೆಂದು ಅನಿಸುತ್ತಿತ್ತು, ಅಜ್ಜಿಯ ಹಿರಿತನದಲ್ಲಿ ಆದ ಮದುವೆಗಳಿಗೆ ಲೆಕ್ಕವಿಲ್ಲ, ಸತ್ತವರ ಕುಟುಂಬಗಳಿಗೆ ಭೆಟ್ಟಿಕೊಟ್ಟು ಆಕೆ ಹಾಕಿದ ಕಣ್ಣೀರಿಗೂ ಲೆಕ್ಕವಿಲ್ಲ, ಊರಿನಲ್ಲಿ ಸಂಭ್ರಮವಿರಲಿ ದುಃಖವಿರಲಿ "ಮ್ಯಾಲಿನಮನಿ ಮುದುಕಿ ಬಂದ ಹ್ಯಾದಲೇನು?" ಎಂದು ಜನರು ಖಾತ್ರಿಪಡಿಸಿಕೊಳ್ಳುತ್ತಿದ್ದರು. ಎಲ್ಲರು ಆಕೆಗೆ ಅಜ್ಜಿ, ಅಮ್ಮ, ಮುದುಕಿ, ಹಿರಿಯಾಕಿ ಎಂದು ಹೇಳಿ ಹೇಳಿ ಆಕೆಯ ನಿಜ ನಾಮಧೇಯವನ್ನು ಮರೆಸಿಯೆ ಬಿಟ್ಟಿದ್ದರು. ನಮ್ಮ ಮನೆಯಲ್ಲಿ ಕೂಡ ಬಹಳ ಮಂದಿಗೆ ಗೊತ್ತಿರಲಿಲ್ಲ, ಅವ್ವ ಮಾತ್ರ ಆಗೊಮ್ಮೆ ಈಗೊಮ್ಮೆ ತನ್ನ ಅವ್ವನ ಹೆಸರನ್ನು ನೆನೆಯದೆ ಬಾಯಿಗೆ ತುತ್ತು ಇಡುತ್ತಿರಲಿಲ್ಲ. "ಖರೇನ ಏಳು ಕೊಳ್ಳದ ಯಲ್ಲಮ್ಮ ನಮ್ಮ ಮನ್ಯಾಗ ಅದಾಳಂತ ಮನಿ ಸುಸೂತ್ರ ನಡೆದೇತಿ. ಇಲ್ಲಾಂದ್ರ ಈ ಹಾಳು ಗಂಡಸರಿಂದ ಯಾವತ್ತೋ ಈ ಮನಿ ಹರಾಜ ಆಗ್ತಿತ್ತು" ಎಂದು ನನ್ನ ಅಪ್ಪನನ್ನು, ಅಪ್ಪನ ಅಪ್ಪನನ್ನು ಶಪಿಸಿ ಕಣ್ಣೀರು ತೆಗೆಯುತ್ತಿದ್ದಳು. ಅಜ್ಜಿಯಲ್ಲಮ್ಮ "ಹೋಗ್ಲಿ ಬಿಡ ಪಾರವ್ವ ಹಿಂದಿಂದು ತೆಗೆದು ಹಿತ್ತಾಳ ಅತ್ತರಂತ. ತಂದಿ ಕೆಟ್ಟಿದ್ರೂ ಮಗ ಒಳ್ಳೆಯಾಂವ ಅದಾನ ಅದಕ್ಕಾದರೂ ಖುಷಿ ಪಡು" ಎಂದು ನನ್ನನ್ನು ಹತ್ತಿರ ಕರೆದು ನನ್ನ ಹೆಂಡತಿ ಎದುರಿಗೇನೆ ತಲೆಸವರಿ ಮುಖಕ್ಕೆ ಮುದ್ದು ಕೊಟ್ಟು "ನೀನು ನಮ್ಮಪ್ಪ ಇದ್ದಂಗಪಾ. ನೂರ್ಕಾಲು ಇರಬೇಕ" ಎಂದು ವಾತ್ಸಲ್ಯದ ಹೊಳೆಯನ್ನೆ ಹರಿಸುವಳು. ಕುಡಿದು, ಮಟ್ಕಾ ಆಡಿ ಹೆಂಗಸರ ಸಲುವಾಗಿ ಹೊಲ ಮಾರಿ ಮನೆತನವನ್ನು ರಸ್ತೆಗೆ ತಂದು ಬಿಟ್ಟಿದ್ದ ಅಪ್ಪನನ್ನು ಆಗಾಗ ಅಜ್ಜಿಯೂ ಶಪಿಸುತ್ತಿದ್ದಳು. ಇರುವ ಮನೆಯನ್ನೂ ಅಪ್ಪ ಮಾರಿ ಬಿಟ್ಟಿದ್ದ. ಆದರೆ ಅಜ್ಜಿಯೆ ಇಡೀ ಊರೆ ಹೆದರುವಂತೆ ಬಾಯಿ ಮಾಡಿ "ಸಾಲ ಮಾಡಿದ್ರ ಅಂವನ್ನ ಕಡಿದು ಹಾಕ್ರಿ. ಅಂವನ ತಗೊಂಡು ಹೋಗಿ ಮಾರ್‍ರಿ. ಆದರೆ ಮನಿ ಸನೀಕ ನೀವು ಬಂದ್ರಿ ಅಂದ್ರ ಪಾಡ್ ಆಗಂಗಿಲ್ಲ" ಎಂದು ಸಾಲೀ ಮಾಸ್ತರರು ನಮ್ಮನ್ನು ಹೊಡೆಯುತ್ತಿದ್ದ ಕೋಲಿನಂತಹ ತನ್ನ ಬಡಕಲು ಕೋಲಿನಿಂದ ದೊಡ್ಡದೊಡ್ಡ ಗಂಡಸರನ್ನೆ ಹೆದರಿಸಿದ್ದಳು. ಅಪ್ಪ ಅಂದು ಓಡಿಹೋದವನು ತಿರುಗಿ ಬರಲೆ ಇಲ್ಲ, ಅವ್ವ ನೆನಪು ತೆಗೆದು ಅತ್ತರೆ ಅಜ್ಜಿ ಗದರಿಸುವಳು; "ಹೋಗ್ಲಿ ಬಿಡ, ಇದಿವತಾಯಿ ಹಾಳಾಗಿಹೋತು. ಅದು ಇದ್ದರ ಏನ ಸುಖ ಇತ್ತು ನಿನಗ. ಒಟ್ಟನ್ಯಾಗ ಈ ಮನಿಗೆ ಯಾವ ದೆವ್ವ ಕಾಡಾಕ ನಿಂತೈತೋ ಏನೋ. ಗಂಡಸರಿಗೆ ಒಟ್ಟ ಹೆಣ್ಣಾ ಕಾಡತೈತಿ ಇಲ್ಲಾ ಹಣ ಕಾಡತೈತಿ. ಅದನ್ನ ಬಿಟ್ಟ ಬ್ಯಾರೆ ಅವರು ಏನ ವಿಚಾರ ಮಾಡ್ತಾರೋ ತಿಳಿಯಂಗಿಲ್ಲ, ಇಷ್ಟ ವರ್ಷ ನಾ ಹೆಂಗ ಬದಕೇನಿ? ಇವರು ಯಾರಾದ್ರೂ ವಿಚಾರ ಮಾಡ್ಯಾರೇನು? ಮನಿ ಮುಂದಿನ ಆಲದಮರ ನೋಡಿ ನನಗ ಬೆಳೀಬೇಕು ಅನಿಸ್ತದ. ಆವಾಗ ಕೆಟ್ಟ ಅಪ್ಪ ಹ್ವಾದಂತ ಖುಷಿಯಾಗಿದ್ರ, ಈಗ ಒಳ್ಳೇ ಮಗ ಕೈಬಿಡಾಕ ಹತ್ಯಾನ" ಗಳಗಳನೆ ಅಪ್ಪಿ ಜೋರಾಗಿ ಅಳತೊಡಗಿದಳು. ಅಜ್ಜಿ ಅಳುವುದನ್ನು ನೋಡಿ ಅವ್ವನೂ ಜೋರಾಗಿ ಬಾಯಿ ತೆಗೆದಳು. ಹೆಂಡತಿ ಮಾದೇವಿಯೂ "ನನ್ನ ದೈವ ಹಿಂಗ್ಯಾಕಾತು?" ಎಂದು ಎದೆ ಬಡಿದುಕೊಳ್ಳತೊಡ ಗಿದಳು.

ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ. ಕೈಕಾಲು ತಿಕ್ಕುತ್ತಿದ್ದಾರೆ. ಕೈಯ ಕಿರುಬೆರಳನ್ನು ಯಾರೋ ಜೋರಾಗಿ ಕಚ್ಚಿದರು. "ಹಾಂ" ಎಂದು ಚೀರಿದೆ. ಎಲ್ಲರೂ "ಉಸಿರು ಬಂತು ಉಸಿರು ಬಂತು" ಎಂದು ಉದ್ವೇಗವನ್ನು ಹತೋಟಿಗೆ ತಂದರು. ನಾನು ನಿಧಾನವಾಗಿ ಕಣ್ಣು ತೆರೆದೆ. ಆಗಷ್ಟೆ ಬೆಳಕು ಹರಿಯುತ್ತಿದ್ದ ಪಡಸಾಲೆಯಲ್ಲಿ. ಇಡೀ ಜಗತ್ತು ಬೆಳಕಿಗೆ ತೆರೆದುಕೊಳ್ಳುತ್ತಿದ್ದರೆ ನಾನು ಮಾತ್ರ ಕತ್ತಲೆಯ ಕೂಪಕ್ಕೆ ಜಾರುತ್ತಿದ್ದೆ. ನಾನೆ ಇಚ್ಛಿಸಿ ಜಿಗಿದಾದ ಮೇಲೆ ಬೇಕು-ಬೇಡಗಳ ಪ್ರಶ್ನೆಯಲ್ಲಿತ್ತು? ಎಷ್ಟೋ ಹೊತ್ತಿನ ಮೇಲೆ ಪಶ್ಚಾತ್ತಾಪವೆನಿಸಿತ್ತು. ನಡುರಾತ್ರಿಯತನಕ ಯೋಚಿಸಿ ಯೋಚಿಸಿ ಕಂಗಾಲಾಗಿದ್ದೆ. ಅಜ್ಜಿ ಒಂದೆರಡು ಬಾರಿ ಕೇಳಿಯೂ ಬಿಟ್ಟಿದ್ದಳು "ಯಾಕೋ ಆರಾಮ ಇಲ್ಲೇನೋ ರಾಮಪ್ಪ ತಲಿ ಒತ್ತಲೇನು?" ಸಿಡಿಯುತ್ತಿದ್ದ ತಲೆಯನ್ನು ಅಜ್ಜಿಯ ಕೈಗೆ ಕೊಡಬೇಕಿತ್ತು, ಬೇಕಾದರೆ ಸಂಜೀವಿನಿ ಸವರುತ್ತಿದ್ದಳು. ಮೂರ್ಖನಿರಬೇಕು ನಾನು. ಆ ಭಯಾನಕವೆನಿಸುವ ನೆರಳು ನನ್ನನ್ನು ಆವರಿಸಿಕೊಳ್ಳುತ್ತಿದ್ದರೂ ಅದರಿಂದ ತಪ್ಪಿಸಿಕೊಳ್ಳದೆ ಅಲ್ಲಿಯೆ ನಿಂತೆ. ಅಜ್ಞಾತ ತೋಳುಗಳನ್ನು ನಾನೂ ಆಹ್ವಾನಿಸಿದೆ. ಈಗ ಅನಿಸುತ್ತಿದೆ. ನೌಕರಿ ಹೊರಟು ಹೋಗುತ್ತಿದೆಯೆಂದು ಹೇಡಿಯಾಗಿಬಿಟ್ಟೆ. ಎರಡು ತಿಂಗಳಿಂದ ಹೆಂಡತಿ, ಅವ್ವ, ಅಜ್ಜಿ ಎಲ್ಲರೂ ಕೇಳಿಯೇ ಕೇಳಿದ್ದು. ಏನಾಗಿದೆ? ಯಾಕೆ ಸಪ್ಪಗಿರುವೆ? ಆಫೀಸಿನಲ್ಲಿ ಜಗಳವಾಯ್ತಾ? ಮಾತು ಕೇಳದ ತಂಗಿಯ ವಿಷಯವೆ? ಎಲ್ಲವೂ? ಎಲ್ಲರೂ? ನಾನೆ ಬರೆದುಕೊಟ್ಟಿದ್ದೇನೆ- ನನ್ನನ್ನು ನೌಕರಿಯಿಂದ ತೆಗೆದರೂ ನನಗೆ ಕೇಳುವ ಹಕ್ಕಿಲ್ಲವೆಂದು. ಹಾಗೆಂದು ಸುಮ್ಮನಿರಲಿಕ್ಕಾಗುತ್ತದೆಯೆ? ಗೆಳೆಯರನ್ನು ಕೇಳಿದೆ. ಅವರು ಅದನ್ನು ಆಡಳಿತ ಮಂಡಳಿಗೆ ಮುಟ್ಟಿಸಿದರು. ಪಗಾರಕ್ಕೆ ನಾವು ಸಹಿ ಮಾಡುವ ಹಾಳೆಯ ಮೇಲೆ ಒಂದು ಅಂಕಿ. ಆದರೆ ಅವರು ಕೊಡುವುದು ಜುಜುಬಿ ಕಾಸು. ಖಾಸಗಿ ಆಡಳಿತ ಮಂಡಳಿಯ ಈ ದೌರ್ಜನ್ಯವನ್ನು ಪ್ರತಿಭಟಿಸಲು ಲೆಕ್ಕ ಹಾಕಿದೆವು. ಎಲ್ಲ ಸಹೋದ್ಯೋಗಿಗಳೂ ಒಪ್ಪಿದ್ದರು. ಆದರೆ ಗೆಳೆಯ ಗೆಳೆಯರಲ್ಲಿಯೆ ಈಗ ಮಸಲತ್ತು ನಡೆಯುತ್ತಿದೆ. "ರಾಮಪ್ಪನ ರೆಕ್ಕೆ ಕತ್ತರಿಸಿರಿ" ಅಂತ ಆಡಳಿತಮಂಡಳಿಯವರು ಪ್ರಿನ್ಸಿಪಾಲ್‌ನಿಗೆ ಹೇಳಿದ. ಗೆಳೆಯರು ಸುಮ್ಮನೆ ನಿಂತರು. ನೂರು ರೂಪಾಯಿಗೆ ಇಲ್ಲವೆ ಸಾವಿರ ರೂಪಾಯಿಗೆ ಒಂದು ಜೀವನವನ್ನು ಕೊನೆಗಾಣಿಸಬಹುದೆಂದು ಕಾಣುತ್ತದೆ. ಒಳಗೊಳಗೆ ನೊಂದು ಸಾಯಬೇಕೆಂದು ನಿರ್ಧರಿಸಿದೆ. ಇಡೀ ಜಗತ್ತು ನನ್ನನ್ನು ಅಣಕಿಸಿ ನಕ್ಕಂತಾಗುತ್ತದೆ. ಹೆಂಡತಿಗೆ ಹೇಳಬೇಕೆಂದರೆ ಅವಳಿಗೆ ಇಂತಹ ವಿಷಯಗಳು ತಿಳಿಯುವುದೇ ಇಲ್ಲ, ಎರಡು ತಿಂಗಳು ಸಾಲ ಮಾಡಿ ಸಂಸಾರದ ಗಾಲಿ ನೂಕಿದೆ. ಏನೂ ಆಗಿಲ್ಲವೆಂಬಂತೆ ನಡೆದುಕೊಳ್ಳುತ್ತಿದ್ದೆ, ಅಜ್ಜಿಗೆ ಹೇಳಬೇಕಿತ್ತೆಂದು ಕೊನೆ ಘಳಿಗೆಯಲ್ಲಿ ನೆನಪಾಯಿತು. ವಿಷದ ಬಟ್ಟಲಿನಿಂದ ಕೊನೆ ಹನಿ ಬಾಯಿಗೆ ಬೀಳುವಾಗ ಅದರಲ್ಲಿ ಅಮೃತದಂತೆ ಅಜ್ಜಿ ಸೇರಿಕೊಂಡಳು. ಬದುಕುವ ಶಕ್ತಿ ಕೊಟ್ಟಳು. ಆಲದಮರದಂತೆ ಬೇರು ಭದ್ರವಾಗಿರಬೇಕು. ಹುಲ್ಲಿನಂತೆ ಕಂಡಲ್ಲಿ ಚಿಗಿಯಬೇಕು. ಅಜ್ಜಿ ಆಗಂತುಕನನ್ನು ನನ್ನ ಬಳಿ ಬಿಡದೆ ತಾನೆ ಅವನನ್ನು ಎದುರುಗೊಳ್ಳುತ್ತಾಳೆ. ಅವನನ್ನು ಕಳಿಸಿ ಬರುವೆನೆಂದು ಎದ್ದು ಹೋಗುತ್ತಾಳೆ.

...ಯೇಟಿವಿಟಿಯ ...ೕಲೂ ...ಣ್ಣೆಡುವ ...ರ್ಮಠರು!

...ನಸಮುದಾಯಗಳು ಹಿಂದೆಂದಿಗಿಂತಲೂ ಇಂದು ...ಕುಚಿತವಾಗುತ್ತಿವೆ. ತನ್ನ ಸಮುದಾಯದೆಡೆಗೆ ಮುಖ ... ಮಾತನಾಡುವ, ಬರೆಯುವ, ಓದುವವ ರನ್ನು ...ಮುವ ದೊಡ್ಡದೊಡ್ಡ ಪಡೆಗಳೇ ನಿರ್ಮಾಣ ವಾಗುತ್ತಿವೆ. ...ೕಲತೆಯ ಮೇಲೆ ಸವಾರಿ ಮಾಡುವ, ಹುಕುಂ ...ದ ಮೂಲಭೂತವಾದಿಗಳು ಎಲ್ಲ ಧರ್ಮಗಳಲ್ಲಿ, ...ನಲ್ಲಿ ಜನಾಂಗಗಳಲ್ಲಿಯೂ ಇದ್ದಾರೆ. ಇವರ ದಿನಚರಿ ...ಮುದಾಯದವರಿಗೆ ಅವಹೇಳನ ವಾಯಿತು ಎಂದು ...ದ ಮೂಲಕವೇ ಆರಂಭವಾಗು ತ್ತದೆ.

...ತಿಗಾಮಿತನವೆನ್ನುವದು ರಾಷ್ಟ್ರೀಯ ...ಶಲ್ಲಿ ಒಂದು ದೊಡ್ಡ ಶಾಪ. ಒಂದು ...ೕಲ ಕೃತಿಯನ್ನು ಅದು ಇದ್ದಂತೆ ಇದ್ದ ...ಲ್ಲಿ ನೋಡುವ, ಗ್ರಹಿಸುವ ಪ್ರತ್ಯಕ್ಷ ...ಣವಾದದ ಕೊರತೆಯ ...'ಯಲ್ಲಿಂತೋ ಹಳವಂಡಗಳು ...ಳುತ್ತವೆ.

...ತ್ತೀಚಿಗೆ ಜೈಪುರದಲ್ಲಿ ಜರುಗಿದ ಸಾಹಿತ್ಯ ಕೂಟದಲ್ಲಿ ...ವಹಿಸಲು 'ಸಟಾನಿಕ್ ವರ್ಸಸ್' ಕೃತಿಯಿಂದ ...ಯಾದ ಸಲ್ಮಾನ್ ರಶ್ದಿ ಬರಬೇಕಿತ್ತು. ಆದರೆ ತನ್ನ ... ಭೂಗತ ಲೋಕದಿಂದ ಕುತ್ತಿದೆ ಎನ್ನುವ ಕಾರಣವನ್ನು ...ದೆ ಮಾಡಿ ರಶ್ದಿ ಜೈಪುರದ ಸಮ್ಮೇಳನದಲ್ಲಿ ...ಹಿಸಲಿಲ್ಲ. ಆದರೆ ಆತನ ಜೀವಕ್ಕೆ ಅಂತಹ ಯಾವ ...ರುವೂ ಇರಲಿಲ್ಲ ಎಂದು ಮುಂಬೈ ಪೊಲೀಸರು ...ದ್ದಾರೆ. ಅದೇನೇ ಇರಲಿ, ರಶ್ದಿ ಜೈಪುರ ಸಾಹಿತ್ಯ ...ದಲ್ಲಿ ಭಾಗವಹಿಸದಿದ್ದರೂ ಅಲ್ಲಿಗೆ ಪುಲಿಟ್ಜರ್ ಪ್ರಶಸ್ತಿ ...ತ ಡೆವಿಕ್ ರೆಮ್ನಿಕ್ ಅವರು ಆಗಮಿಸಿದ್ದರು. ಅವರು ...ು ಅನುಪಸ್ಥಿತಿಯ ಹಿನ್ನೆಲೆಯಲ್ಲಿ ತುಸು ...ಂಗರವನ್ನು ಅನುಭವಿಸುತ್ತಲೇ ಅವರು ಬಾರದಿರುವ ...ರಾಶೆಯನ್ನೂ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ...ಅವರ ನಿಷೇಧಿತ ಕೃತಿಯ ಕೆಲ ಭಾಗಗಳನ್ನು ...ಕರಾದ ಹರಿ ಕುಂಜ್ರು, ಅಮಿತಾವ್ ಕುಮಾರ, ...ತಾಯಿಲ್ ಹಾಗೂ ರುಚಿರ್ ಜೋಶಿ ಆ ಸಾಹಿತ್ಯ ...ಸದಲ್ಲಿ ಓದಿದ್ದು ವಿವಾದಕ್ಕೆ ಎಡೆ ಮಾಡಿಕೊಟ್ಟಿದೆ. ...ಷೇಧಿತ ಕೃತಿಯ ಭಾಗಗಳನ್ನು ಓದಿದವರ ವಿರುದ್ಧ ಕ್ರಮಕ್ಕೆ ಮುಸ್ಲಿಂ ಸಂಘಟನೆಗಳು ಒತ್ತಾಯಿಸಿರುವುದು ಈಗ ಜಗಜ್ಜಾಹೀರವಾಗಿದೆ. ಇದು ಕೇವಲ ಮುಸ್ಲಿಂ ಸಂಘಟನೆ ಮಾತ್ರವಲ್ಲ, ಈ ಬಗೆಯ ಮೂಲ ಭೂತವಾದಿ ಧೋರಣೆಯ ಯಾವದೇ ಸಂಘಟನೆಗಳಿದ್ದರೂ ಹೀಗೆಯೇ ಮಾಡುವುದು ಸಾಮಾನ್ಯ. ಇತ್ತೀಚಿನ ದಿನಗಳಲ್ಲಿ ನಮ್ಮ ಎಲ್ಲರ ಖಾಸಗಿ ವರ್ತನೆ ಮತ್ತು ಕ್ರಿಯೇಟಿವಿಟಿಯ ಮೇಲೂ ಒಂದು ಕಣ್ಣಿಡುವ ಪರಿಪಾಠವನ್ನು ಈ ಬಗೆಯ ಧಾರ್ಮಿಕ ಸಂಘಟನೆಗಳು ರೂಢಿಸಿಕೊಳ್ಳುತ್ತಿರುವುದು ಆರೋಗ್ಯಕರವಾದ ಬೆಳವಣಿಗೆಯಲ್ಲ. ಮುಂಬರುವ ದಿನ ಗಳಲ್ಲಿ ಧಾರ್ಮಿಕ ಸಂಘಟನೆಗಳು ಇನ್ನಷ್ಟು ಜಿಗುಟಾಗಲಿವೆ. ಜನರು ಮುಕ್ತವಾಗಿ ಮಾತನಾಡಲು, ಯೋಚಿಸಲು ಕೂಡ ಅವು ತಮ್ಮ ಪರ್ಮಿಟ್ ಬೇಕೆಂದು ಬಯಸುತ್ತವೆ. ಈ ಬಗೆಯ ಕರ್ಮಠರಿಗೆ ಮನುಕುಲದ ಅಖಂಡತೆಯ ಬಗೆಗೆ ಕಾಳಜಿಯೇ ಇಲ್ಲ. ಧಾರ್ಮಿಕ ಹಿತಾಸಕ್ತಿಯು ವ್ಯಕ್ತಿ ಹಿತಾಸಕ್ತಿ ಮತ್ತು ಸಾಮೂಹಿಕ ಹಿತಾಸಕ್ತಿಗಿಂತಲೂ ಮಿಗಿಲಾದಾಗ ಮಾನವೀಯತೆಗೆ ಮನ್ನಣೆಯಿರುವದಿಲ್ಲ.

18ನೇ ಶತಮಾನದಲ್ಲಿ ಫ್ರಾನ್ಸ್ ದೇಶದ ಚಿಂತಕ ಅಗಸ್ಟ್ ಕೋಂಟ್ ಇಡೀ ವಿಶ್ವದಲ್ಲಿ ಈಗಿರುವ ಎಲ್ಲ ಧರ್ಮಗಳನ್ನು ಹೊರತುಪಡಿಸಿ ಒಂದು ಹೊಸ ಧರ್ಮವನ್ನು ಕಟ್ಟಬೇಕೆಂದು ಹೊರಟಿದ್ದರು. ಅದನ್ನು ಆತ ಮಾನವತಾವಾದಿ ಧರ್ಮ ಎಂದು ಕರೆಯಲು ಇಚ್ಛಿಸಿದ್ದರು. ಮಾನವೀಯತೆಯನ್ನೇ ದೇವರು ಮತ್ತು ಮೌಲ್ಯ ಎಂದು ಕರೆಯುವ ಮೂಲಕ ಒಂದು ಹೊಸ ಧರ್ಮವನ್ನು ಕಟ್ಟಬೇಕು ಎಂದು ಹೊರಟವನಿಗೆ ತನ್ನ ಕನಸನ್ನು ಸಾಕಾರಗೊಳಿಸು ವುದು ಸಾಧ್ಯವಾಗಲಿಲ್ಲ. ಇಡೀ ವಿಶ್ವವೇ ಒಂದು ಮನೆ ಎಂದು ಯೋಚಿಸುವ, ಮಾತನಾಡುವ, ವ್ಯವಹರಿಸುವ ಸಂದರ್ಭದಲ್ಲಿ ನಡುಗಡ್ಡೆಗಳಂತಿರುವ ವಿವಿಧ ಧರ್ಮಗಳು ಮನುಷ್ಯನ ಅಖಂಡತ್ವವನ್ನು ಬೆಸೆಯುವಲ್ಲಿ ಎಷ್ಟರಮಟ್ಟಿಗೆ ನೆರವಾಗಬಲ್ಲವು ಎನ್ನುವದೇ ಒಂದು ಮುಖ್ಯ ಪ್ರಶ್ನೆ.

ಇಂದು ಮನುಷ್ಯ ತಾನೇ ರೂಪಿಸಿರುವ ಸಂಸ್ಥೆಗಳ ಮೂಲಕ ಸ್ವ ನಿರ್ಬಂಧಕ್ಕೆ ಒಳಗಾಗುವ ಜೊತೆಯಲ್ಲಿ ಕೊಡಲಿಯ ಕಾವಿನ ಹಾಗೆ ಕೆಲಸ ಮಾಡುತ್ತಿರುವುದು ವಿಷಾದನೀಯ. ಎಲ್ಲ ಧರ್ಮಗಳ ಸಂಘಟನೆಗಳು ಮನುಷ್ಯ-ಮನುಷ್ಯರ ಮಧ್ಯೆ ಪ್ರೀತಿ ಮತ್ತು ವಿಶ್ವಾಸವನ್ನು ಹಂಚುವ ದಿಶೆಯಲ್ಲಿ ತೊಡಗಬೇಕೇ ಹೊರತು ಭಯ ಮತ್ತು ಉದ್ವೇಗದ ವಾತಾವರಣವನ್ನು ಸೃಷ್ಟಿಸುವ ಕೆಲಸ ಮಾಡಬಾರದು. ಅಷ್ಟಕ್ಕೂ ಅದು ಧರ್ಮದ ಕೆಲಸವಾಗಿರಲಾರದು. 'ನಾವು ಅವರಿಗೇನು ಕಡಿಮೆ?' ಎನ್ನುವ ವಿಚಾರ ಮೌಲ್ಯಗಳ ಪ್ರತಿಪಾದನೆ, ಆರಾಧನೆ, ಅಳವಡಿಕೆಯಲ್ಲಿರಲಿ; ಅದರ ಬದಲಾಗಿ ಹಿಂಸೆ ಮತ್ತು ಬಲಪ್ರಯೋಗದಲ್ಲಿ ಅಲ್ಲ. ಇಂದು ನಮ್ಮ ಸುತ್ತಮುತ್ತಲೂ ವೈಚಾರಿಕತೆಯನ್ನು ಮಾತನಾಡುವವರು ರಾಶಿ ರಾಶಿ ಆದರೆ ವೈಚಾರಿಕರಾಗಿ ಬದುಕುವವರು ತುಂಬಾ ಕಡಿಮೆ.

- ಡಾ.ಎಸ್.ಬಿ.ಜೋಗುರ, ಧಾರವಾಡ

ಮುಖ್ಯಮಂತ್ರಿ ಸದಾನಂದ ಗೌಡರು ತಮ್ಮ ಮನೆಯ ದೈವದ ಕೋಲದಲ್ಲಿ ಕೋಳಿ ಬಲಿಕೊಟ್ಟ ಬಗ್ಗೆ ಎದ್ದ ವಿವಾದ ಸಂದರ್ಭದಲ್ಲಿ ಈ ಪದ್ಯ ಬರೆದದ್ದು. ತುಳುನಾಡಿನ ಭೂತಾರಾಧನೆಯಲ್ಲಿ 'ಪಂಜುರ್ಲಿ' ಎಂದರೆ 'ಹಂದಿ' ರೂಪದ ದೈವ 'ಕೋರಿದಪ್ಪು' ಎಂದರೆ ಕೋಳಿ ರೂಪದ ದೈವ. ಶೂದ್ರರ ದೈವಾರಾಧನೆಯಲ್ಲಿ ಈಗೀಗ ವೈದಿಕರು ಮೂಗು ತೂರಿಸಿ ಕಮಾಯಿ ಮಾಡುತ್ತಿರುವುದಲ್ಲದೆ ದೈವಗಳ 'ತುಳು ಹೆಸರುಗಳನ್ನೂ' ಸಂಸ್ಕೃತಕರಣಗೊಳಿಸುತ್ತಿದ್ದಾರೆ. ಅಂತೆಯೇ ಪಂಜುರ್ಲಿ ವರಾಹ ಮೂರ್ತಿಯಾಗಿದ್ದು, ಕೋರಿದಪ್ಪು ಕುಕ್ಕುಟಮೂರ್ತಿಯಾಗಿದ್ದು. ಹೀಗೆಯೇ ಎಲ್ಲಾ ದೈವ-ಭೂತಗಳ ಹೆಸರು ಹಾಗೂ ಪೂಜಾವಿಧಿ ಸಂಸ್ಕೃತಕರಣಗೊಳ್ಳುತ್ತಿದೆ. ತುಳು ಸಂಸ್ಕೃತಿ ಸಾಯುತ್ತಿದೆ.

• ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು

ಕೋಲದ ಕೋಳಿಯ ಕೊರಗು




ಗೌಡರ ಕೋಲನೇಮಕ್ಕಾದೆ
ಯಡ್ಡಿಯ ಮಂತ್ರ-ಮಾಟಕ್ಕಾದೆ
ನೀನಾರಿಗಾದೆ ಎಲೆ ಮಾನವಾ?
ಬಂಟರ ಕೋಳಿ ರೊಟ್ಟಿಗಾದೆ
ಭಟ್ಟರ ವಾಮಾಚಾರಕ್ಕಾದೆ
ಬಾಣಂತಿಯರ ಔಷಧಕ್ಕಾದೆ
ಬಾಣಸಿಗರ ವಿವಿಧ ವ್ಯಂಜನಕ್ಕಾದೆ
ರೈತನಿಗೆ ಗೊಬ್ಬರವಾದೆ
ರಸಿಕನಿಗೆ ಕೋಳಿ-ಅಂಕಕ್ಕಾದೆ
ನೀನಾರಿಗಾದೆ ಎಲೆ ಮಾನವಾ?
ಸಾಬರ ಬಿರಿಯಾನಿಗಾದೆ
ಕ್ರೈಸ್ತರ ಚಿಕನ್ ಸಾರಿಗಾದೆ
ಬಡವರ ಮೊಟ್ಟೆ ಆಮ್ಲೆಟ್ಟಾದೆ
ಕುಡುಕರ ಬಾಯಿ ಚಪಲಕ್ಕಾದೆ
ವಿದೇಶಿ ಪಿಜ್ಜಾ ಬರ್ಗರ್‌ಗಾದೆ
ಶಟಲ್‌ಕಾಕ್‌ಗೆ ಗರಿಯಾದೆ
ಯಕ್ಷಗಾನಕ್ಕೆ ಕಿರೀಟವಾದೆ
ಬೆಳಗಿನ ಗಡಿಯಾರವಾದೆ
ಮಾರಿ-ಕಾಳಿಗೆ ಹರಕೆಯ ಬಲಿಯಾದೆ
ನೀನಾರಿಗಾದೆ ಎಲೆ ಮಾನವಾ?

ನಾಟಿ, ಫಾರಮ್ಮು, ಟೈಸನ್, ಗಿಳಿರಾಜ
ಹೆಸರಲ್ಲೇ ಇದೆ ರುಚಿಯ ಬಗೆ.
ಶೂದ್ರರು ಪಟ್ಟಾಗಿ ತಿಂದರೆ
ವಿಪ್ರರು ಗುಟ್ಟಾಗಿ ತಿಂದರು.
ಪ್ರಕೃತಿ ಪೂಜೆಯ ವಿಕೃತಿಗೊಳಿಸಿ
ಪಂಜುರ್ಲಿ, ಕೋರಿದಪ್ಪು ದೈವಗಳ ಪೂಜಿಸಿ
ಹಂದಿ, ಕೋಳಿಗಳನ್ನೇ ಭಕ್ಷಿಸುವೆ ನೀ.
ವರಾಹಮೂರ್ತಿ, ಕುಕ್ಕುಟ ಮೂರ್ತಿಯೆಂದು
ವೈದಿಕರು ಸಂಸ್ಕೃತ ತುರುಕಿದರೂ
ತುಳುವ ಸಂಸ್ಕೃತಿ ಬದಲಾಗದು ಎಂದೂ.
ಕೋಳಿ ತಿನ್ನುವುದು ತಪ್ಪಲ್ಲ
ದೇವರ ಹೆಸರಲ್ಲಿ ಕೊಲ್ಲುವುದು ಬೇಕಿಲ್ಲ
ನನ್ನ ಸೃಷ್ಟಿಸಿದ ದೇವರಿಗೆ ನನ್ನನ್ನು ಬಲಿಕೊಟ್ಟು
ದೇವರನ್ನು ಒಲಿಸಿದ ಭ್ರಮೆ ಸರಿಯಲ್ಲ,
ಹರಿನಾಮದ ಡ್ರಾಮಾ ಸಿರಿವಂತರ ಭಕ್ತಿ
ದೇವರ ಹೆಸರಲ್ಲಿ ಕೋಳಿ ತಿನ್ನುವ ಯುಕ್ತಿ,
ದೇವರಿಗೆ ವ್ಯರ್ಥ ತಲೆ, ಕಾಲು, ಪುಕ್ಕ
ತಾವು ತಿನ್ನುವರು ರುಚಿಯಾದ ದೇಹ ಭಾಗ.
ಆರು ದಿನ ಮತ್ಸ್ಯ ಒಂದು ದಿನ ಸಸ್ಯ
ವಾರಕ್ಕೊಮ್ಮೆ ಬ್ರಾಹ್ಮಣರಾಗುವ ಶೂದ್ರ ನಾರಿಯರ ವ್ರತ

ನಾನು ಹಲವಾರು ಉಪಯೋಗಕ್ಕಾದೆ
ನೀನು ಮುಕ್ಕಲು ಮಾತ್ರ ಲಾಯಕ್ಕಾದೆ
ಮಾನವತೆಗೇ ಶತ್ರುವಾದೆ ಎಲೆ ಮಾನವಾ! ✽

...ವ್ಯ ಬರೆಯಲು ಆಕಾಶ ಬಯಸಿದ ಕವಿ


ಪುಸ್ತಕ ಪರಿಚಯ



ಚಂದ್ರಶೇಖರ್ ಐಜೂರ್

...ಣೇಶ ಹೊಸ್ಮನೆ ಈಚೆಗೆ ಕನ್ನಡ ಕಾವ್ಯಲೋಕದಲ್ಲಿ ಕೇಳಿಬರುತ್ತಿರುವ ...ಯ ಹೆಸರು. ಕಳೆದ ಒಂದು ದಶಕದಿಂದ ಗಣೇಶ ಹೊಸ್ಮನೆಯವರು ...ಳನ್ನು ಬರೆಯುತ್ತಿದ್ದರೂ ಅವರ ಮೊದಲ ಸಂಕಲನ 'ಯಾರೂ ... ಮರ' ಕಳೆದ ವರ್ಷವಷ್ಟೆ ಪ್ರಕಟಗೊಂಡಿತು. 'ನಾನು ಬರೆವ ...ಳನ್ನು ಯಾರು ಓದುತ್ತಾರೆ' ಎಂಬ ಅನುಮಾನವಿಟ್ಟುಕೊಂಡೇ ... ಪದ್ಯಗಳನ್ನು ಬರೆದಿರುವ ಗಣೇಶ್ 'ಆಧುನಿಕ ಶಿಕ್ಷಿತ ಸಮುದಾಯ ...ಶಿಕ್ಷಣದಿಂದ ದೂರವಿದ್ದುಕೊಂಡು ಶೂನ್ಯ ಬಂಡವಾಳದೊಂದಿಗೆ ...ಕೃಷಿ ಮಾಡುತ್ತ 'ಮಾರುಕಟ್ಟೆ ಪ್ರಪಂಚ'ದ ಜತೆ ಸಂವಾದಕ್ಕೆ ...ಟ ನನ್ನ ಪ್ರಯತ್ನ ಹುಂಬತನದ್ದೆಂದು ಬಹಳ ಸಲ ನನಗೆ ...ಸ್ಸಿದೆ' ಎಂದು ಹೇಳಿಕೊಂಡರೂ ಅವರ ಕಾವ್ಯದ ನಡಿಗೆಯಲ್ಲಿ ... ಯಾವ ಹುಂಬತನಗಳು ಕಾಣಿಸುವುದಿಲ್ಲ.

...ಲ ಹಡೆದ ಮಕ್ಕಳಿಗೆ ಹಾದಿಗಳು ಬೀದಿಗಳು
...ರುಗಳು ದೇಶಗಳು
...ಲಿಗಳು ಬಯಲುಗಳು
...ರು ಹತಿಯಾರುಗಳು
...ದುಪೆ ನಿಂತಿದೆ ಮೌನ
...ಳಕೆಯೊಡೆಯುವುದಕ್ಕೆ
...ರು ಚಾಚುವುದಕ್ಕೆ
...ಣ್ಣು ಮಳೆಹನಿ ಸಾಕು
...ವುಗಳ ಮುಖ ನೋಡಿ ಬದುಕ
...ತಿಸಬೇಕು (ಇರುಳಿನ ಸ್ವಗತ)



...ಣೇಶರ ಈ ಸಂಕಲನಕ್ಕೆ ಮುನ್ನುಡಿ ಬರೆದಿರುವ ಶ್ರೀಧರ ...ವರು ಗಣೇಶರ ಇಲ್ಲಿನ ಎಲ್ಲ ಪದ್ಯಗಳನ್ನು ತೀವ್ರವಾಗಿ ಒಟ್ ...ನಿಂದು ಗಂಭೀರವೆನಿಸುವ ಕಾವ್ಯ ಸಂವೇದನೆಯ ಚೌಕಟ್ಟನ್ನು ...ಟ್ಟಿದ್ದಾರೆ: 'ಪಾಲಿ ಜಾಗವನ್ನು ಬಳಸಿಕೊಳ್ಳುವ ಬದುಕಾಗಿ. ...ಗೆ ದಕ್ಕಿದ ಶೂನ್ಯವಾಗಿ, ಅನಂತಕಾಲದಿಂದಲೂ ನಿಗೂಢ ...ವಾಗಿರುವ ಆಕಾಶವಾಗಿ ಮೌನ, ಗಣೇಶರ ಕಾವ್ಯದ ಜೀವಾತ್ಮದ ಉಸಿರಾಟದಂತಿದೆ. ಮೌನದೊಳಗಿನ ಒಂದು ಬಿಂದು ಒಡಲಾಳ ತುಂಬಿ ಕಣ್ಣಂಚಿನಲ್ಲಿ ನಿಂತಿದೆ. ಶೂನ್ಯದ ಮೇಲೆಲ್ಲ ಗೀಚ ಜಾಗ ಸಾಲುತ್ತಿಲ್ಲ; ಆಕಾಶವೂ ಕೈಗೆ ಸಿಗುತ್ತಿಲ್ಲ, ಯಾವ ಹಾಳೆಯ ಮೇಲೆ ಬರೆಯಲೆಂದು ಕವಿ ಕೇಳುವ ಪ್ರಶ್ನೆಗೆ ಕಾಲವೂ ಸುಲಭದಲ್ಲಿ ಉತ್ತರ ನೀಡಲಾರದೇನೊ.'

ನಿದ್ದೆಯಲ್ಲೂ ಎಚ್ಚರದಲ್ಲೂ
ಅದೆಷ್ಟೋ ಚಂದ್ರಮರ ಕಂಡ
ಮಕ್ಕಳ ಕಣ್ಣುಗಳಲ್ಲಿ
ಒಬ್ಬ ಚಂದ್ರನಿದ್ದಾನೆ
ನನ್ನ ಪ್ರೀತಿಯ ಶತ್ರುಗಳ ಕೈಯಲ್ಲಿ ಶಸ್ತ್ರಗಳಿವೆ
ನನ್ನಲ್ಲಿ ಕೆಲವು ಕವಿತೆಗಳಿವೆ
ರಣರಂಗದಲ್ಲಿ ಗುಡುಗಿ ಅವರು ಯುದ್ಧವಾಗುತ್ತಾರೆ
ಮಡುಗಿ ನಾನು ಬುದ್ಧನಾಗುತ್ತೇನೆ (ಅವರ ಶಸ್ತ್ರಗಳು)

ಗಣೇಶರ ಈ ಮೊದಲ ಸಂಕಲನದಲ್ಲಿ ಇಂಥ ಹಲವಾರು ಹೊಳಹುಗಳಿವೆ.

ಯಾರೂ ನಡೆದ ಮರ

ಲೇಖಕರು: ಗಣೇಶ ಹೊಸ್ಮನೆ
ಪ್ರಕಾಶಕರು: ಲಜಾಯಿ ಪ್ರಕಾಶನ, ನಂ. 21, ಪ್ರಸಾದ್ ಹಾಸ್ಟೆಲ್, ಗದಗ -582101
ಪುಟಗಳು: 96, ಬೆಲೆ: 40, ಪ್ರಕಟಣೆ: 2010

ಕೊಳ್ಳುಬಾಕ ಜಗತ್ತಿನಲ್ಲಿ ಮತ್ತೆ ಮತ್ತೆ ನೆನಪಾಗುವ ಲೋಹಿಯಾ

ಇಂಡಿಯಾದ ಇವತ್ತಿನ ರಾಜಕೀಯ ಮತ್ತು ಸಾಮಾಜಿಕ ಸಂದರ್ಭಗಳಲ್ಲಿ ಅನೇಕ ವಿದ್ಯಮಾನಗಳು, ಪಲ್ಲಟಗಳು ಸಂಭವಿಸುತ್ತಲೇ ಇವೆ. ಮಾರ್ಕ್ಸ್ ಅಂಬೇಡ್ಕರ್ ಗಾಂಧಿ ಲೋಹಿಯಾರ ಚಿಂತನೆಗಳು ಆಧುನಿಕ ಭಾರತವನ್ನು ಇನ್ನಷ್ಟು ರೂಪಿಸುತ್ತಲೇ ಇವೆ. ಅಂತಃಕರಣ ಕಳೆದುಕೊಂಡಿರುವ ಈ ಜಾಗತೀಕರಣ ಸೃಷ್ಟಿಸಿರುವ ಕೊಳ್ಳುಬಾಕ ಜಗತ್ತಿನಲ್ಲಿ ಈ ನಾಲ್ವರು ನಮ್ಮ ಚಿಂತನಾ ವಲಯಗಳಲ್ಲಿ ಮತ್ತೆ ಮತ್ತೆ ನವೀಕರಣಗೊಳ್ಳುತ್ತಲೇ ಇದ್ದಾರೆ. ಅಹರ್ನಿಶಿ ಪ್ರಕಾಶನದ ಮತ್ತೆ ಮತ್ತೆ ಸರಣಿಯಲ್ಲಿ ಲೋಹಿಯಾರ ಚಿಂತನೆಗಳನ್ನು ಮತ್ತಷ್ಟು ಉದ್ದೀಪಿಸುವ ಕೆಲಸವನ್ನು ರಾಜಾರಾಮ ತೋಳ್ಪಾಡಿಯವರು ಬಲು ಪ್ರೀತಿಯಿಂದಲೇ ಮಾಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆರು ಸಂಪುಟಗಳಲ್ಲಿ ಲೋಹಿಯಾ ಚಿಂತನೆಗಳನ್ನು ಅಗ್ಗದ ಬೆಲೆಯಿಟ್ಟು ಕನ್ನಡ ನೆಲದಲ್ಲಿ ಎಲ್ಲರಿಗೂ ದಕ್ಕುವಂತೆ ಮಾಡಿತು. ಲಂಕೇಶ್, ತೇಜಸ್ವಿ, ಹಸನ್ ನಯೀಂ ಸುರಕೋಡ, ಅನಂತಮೂರ್ತಿ, ಕೆ.ವಿ.ಸುಬ್ಬಣ್ಣ, ಚಂಪಾ ಮೊದಲಾದವರು ಕನ್ನಡದ ಜಾಯಮಾನಕ್ಕೆ ಒಗ್ಗುವಂತೆ ಲೋಹಿಯಾ ಚಿಂತನೆಗಳನ್ನು ಕನ್ನಡಕ್ಕೆ ತಂದು ಲೋಹಿಯಾ ಹಾದಿಯನ್ನೇ ನಿರ್ಮಿಸಿದರು.

'ನಮ್ಮ ಇಂದಿನ ಜಗತ್ತಿನ ಪ್ರಕ್ಷುಬ್ಧ ಸಂದರ್ಭದಲ್ಲಿ ಲೋಹಿಯಾರಂತಹ ಚಿಂತಕರು ಹಾಗೂ ಅವರು ಪ್ರತಿಪಾದಿಸಿದ ಸಂಸ್ಕೃತಿ ಬದ್ಧ ಅಭಿವೃದ್ಧಿ ಹೊರನೋಟಕ್ಕೆ ಅಸಂಗತವಾಗಿ ಕಂಡು ಬರಬಹುದು. ಜಾಗತೀಕರಣದ ಎಗ್ಗಿಲ್ಲದ ಈ ಮಹಾನ್ ಪ್ರವಾಹದಲ್ಲಿ ಸಮಾಜವಾದದ ಮೌಲ್ಯಗಳು ಕೊಚ್ಚಿ ಹೋದಂತೆ ಕಾಣಬಹುದು. ಮಾನವ ತನ್ನ ನೈತಿಕ ವ್ಯಕ್ತಿತ್ವವನ್ನು ಕಳಚಿ ಹಾಕಿ ಏಕಾಕಿಯಾದ ಅಸೆಬುರುಕ ಗ್ರಾಹಕನಾಗಿ ಕಂಡುಬರಬಹುದು. ಇಂದು ನಾವು ಲೋಹಿಯಾರನ್ನು ಇಪ್ಪತ್ತನೆಯ ಶತಮಾನದ ನಡುಭಾಗದಲ್ಲಿ ರಾಜಕಾರಣ ನಡೆಸುತ್ತಿದ್ದ ಮುತ್ಸದ್ಧಿ ಎಂದು ತಿಳಿಯುವ ಬದಲು ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಹಾಗೂ ಸಮಾಜವಾದಗಳ ಕುರಿತು ಮೂಲಜಿಜ್ಞಾಸೆ ನಡೆಸಿದ ಸಂಸ್ಕೃತಿ ಚಿಂತಕನೆಂದು ಗುರುತಿಸಬೇಕಾಗುತ್ತದೆ' - ಲೇಖಕರು ಲೋಹಿಯಾರ ಇಡೀ ವ್ಯಕ್ತಿತ್ವವನ್ನು ಹೀಗೆ ತೆರೆದಿಟ್ಟು ಮತ್ತೆ ಮತ್ತೆ ಲೋಹಿಯಾ ಚಿಂತನೆಗಳತ್ತ ಮುಖಮಾಡುವಂತೆ ಮಾಡಿದ್ದಾರೆ.


ಜಿ.ರಾಜಶೇಖರರ ಪ್ರಖರ ಮುನ್ನುಡಿ ಹಾಗೂ ಕೆ.ರಾಘವೇಂದ್ರ ರಾವ್ ಅವರ ಕೆಲ ವಿಮರ್ಶಾತ್ಮಕ ಪ್ರತಿಫಲನಗಳು ಈ ಕೃತಿಯ ಬೆನ್ನಿಗಿವೆ. ಈ ಕೃತಿಯಲ್ಲಿರುವ ಲೋಹಿಯಾ ಕುರಿತ ಗಂಭೀರ ವಿಶ್ಲೇಷಣೆಗಳು ಓದುಗರಿಗೆ ಇಷ್ಟವಾಗುತ್ತವೆ.



ಮತ್ತೆ ಮತ್ತೆ ಲೋಹಿಯಾ


ಲೇಖಕರು: ರಾಜಾರಾಮ ತೋಳ್ಪಾಡಿ
ಪ್ರಕಾಶಕರು: ಅಹರ್ನಿಶಿ ಪ್ರಕಾಶನ, ಜ್ಯೋತಿರಾವ್ ಬೀದಿ, 4ನೇ ತಿರುವು ವಿದ್ಯಾನಗರ, ಶಿವಮೊಗ್ಗ
ಪುಟಗಳು: 112, ಬೆಲೆ: 75, ಪ್ರಕಟಣೆ: 2011

ನಮ್ಮ ಮಕ್ಕಳು ಹುಟ್ಟಿದಾಗ ಅಥವಾ ಮಕ್ಕಳಿಗೆ ಹುಷಾರಿಲ್ಲದಿದ್ದಾಗ ಮಾತ್ರ ಲಂಕೇಶರು ಆಸ್ಪತ್ರೆಗೆ ಬಂದಿದ್ದರು. ಅವರು ಅಲ್ಲಿಯತನಕ ಎಂದೂ ಯಾವ ಡಾಕ್ಟರ್ ಹತ್ತಿರ ಹೋದವರಲ್ಲ. ಅಂತಹ ಲಂಕೇಶರಿಗೆ ಅಲುಗಾಡದೆ ಒಂದುಕಡೆ ಮಲಗಿರುವುದೆಂದರೆ ಅಸಹನೀಯವಾಗಿತ್ತು. ಸ್ಟ್ರೋಕ್ ಆಗಿದ್ದರೂ ತನಗೆ ಏನೂ ಆಗಿಲ್ಲ ಎಂದು ಹೇಳುತ್ತಾ, "ಆಸ್ಪತ್ರೆ ಗೀಸ್ಪತ್ರೆ ಎಲ್ಲ ಬೇಕಿಲ್ಲ, ನನ್ನನ್ನು ಕೂಡಲೇ ಇಲ್ಲಿಂದ ಕರೆದುಕೊಂಡು ಹೋಗಿ'' ಎಂದು ನಮ್ಮನ್ನು ಒತ್ತಾಯಿಸುತ್ತಿದ್ದರು.



ಲಂಕೇಶರಿಗೆ ಸ್ಟ್ರೋಕ್ ಆದಾಗ...

ಹುಳಿಮಾವು ಮತ್ತು ನಾನು 28



• ಇಂದಿರಾ ಲಂಕೇಶ್

ರಾಜಕೀಯ ಪಕ್ಷ ಕಟ್ಟಬೇಕು, ಭ್ರಷ್ಟಾಚಾರ ಇರದ ವ್ಯವಸ್ಥೆಯನ್ನು ತರಬೇಕು ಎಂಬ ಆಶಯದೊಂದಿಗೆ ಲಂಕೇಶರು ಹಲವು ಮಿತ್ರರ ಜೊತೆಗೂಡಿ 'ಪ್ರಗತಿರಂಗ'ವನ್ನು ಶುರುಮಾಡಿದರು. 'ಪ್ರಗತಿರಂಗ'ದ ಪ್ರಯುಕ್ತ ಲಂಕೇಶ್, ರಾಮದಾಸ್, ಎಚ್.ಎಲ್.ಕೇಶವಮೂರ್ತಿ, ತೇಜಸ್ವಿ, ಡಾ. ಶ್ರೀನಿವಾಸ ಗೌಡ ಮತ್ತು ಇತರರು ಆಗ ಇಡೀ ಕರ್ನಾಟಕವನ್ನು ಸುತ್ತಾಡಿದರು. ಆದರೆ ಒಮ್ಮೆಯೂ ಲಂಕೇಶರು ಪತ್ರಿಕೆಯ ಕೆಲಸದಿಂದ ದೂರ ಉಳಿಯುತ್ತಿರಲಿಲ್ಲ. ಅವರು ರಾಜ್ಯದ ಯಾವ ಮೂಲೆಗೆ ಹೋಗಿದ್ದರೂ ಸರಿಯಾದ ಸಮಯಕ್ಕೆ ಬೆಂಗಳೂರಿಗೆ ವಾಪಸ್ ಬಂದು ಆ ವಾರದ ಸಂಚಿಕೆಯನ್ನು ರೂಪಿಸಿ, ಅದಾದನಂತರ ಮತ್ತೆ ಕಾರನ್ನು ಹತ್ತಿ ಹೋಗುತ್ತಿದ್ದರು.

ನನಗೆ ಮತ್ತು ಮಕ್ಕಳಿಗೆ ರಾಜಕೀಯ ಪಕ್ಷ ಎಲ್ಲ ಯಾಕೆ ಎಂಬ ಯೋಚನೆ. ಆದರೆ ಲಂಕೇಶರು ನಮ್ಮ ಮಾತನ್ನು ಎಲ್ಲಿ ಕೇಳುತ್ತಿದ್ದರು? ಆದರೂ ನಾವೆಲ್ಲರೂ ಬೆಂಗಳೂರಿನಲ್ಲಿ ನಡೆದ ಪ್ರಗತಿರಂಗದ ಸಭೆಗಳಿಗೆ ಹೋಗಿದ್ದೆವು. ಪ್ರಗತಿರಂಗದ ಬಗ್ಗೆ ರಾಜ್ಯದ ಯುವಕರಲ್ಲಿ ಹೊಸ ಭರವಸೆ ಮೂಡಿತ್ತು. ವೃತ್ತಿಪರ ರಾಜಕಾರಣಿಗಳಿಗಿಂತ ಇವರ ತಂಡ ಹೊಸದನ್ನು ಮಾಡುತ್ತದೆ ಎಂಬ ಆಶೆ ಜನರಲ್ಲಿತ್ತು. ಆದರೆ ವಿವಿಧ ಕಾರಣಗಳಿಗೆ ಕೊನೆಗೂ ಪ್ರಗತಿರಂಗ ಚುನಾವಣೆಯಲ್ಲಿ ಭಾಗವಹಿಸದೆ ಇರುವಂತಾಗಿದ್ದು ಎಲ್ಲರಿಗೂ ಗೊತ್ತಿದೆ.

'ಪ್ರಗತಿರಂಗ'ದ ಉದ್ದೇಶ ರಾಜಕೀಯವಾಗಿದ್ದರೂ ಅದರಿಂದ ಲಂಕೇಶರಿಗೆ ಸಾಹಿತ್ಯಕ ಲಾಭವೂ ಆಯಿತು. ಆ ಪ್ರವಾಸಗಳಲ್ಲಿ ಕಂಡದ್ದು, ಕೇಳಿದ್ದು, ಮಾತನಾಡಿದ್ದು, ಇದೆಲ್ಲದರ ಪರಿಣಾಮವಾಗಿಯೇ ಅವರು ಹಲವಾರು ಕತೆಗಳನ್ನು ಬರೆಯುವಂತಾಯಿತು.

ಸಹಜವಾಗಿಯೇ ಪತ್ರಿಕೆಯ ಮೂಲಕ ಲಂಕೇಶರಿಗೆ ಸಮಾಜದಲ್ಲಿ ಸ್ಥಾನ ಮಾನ ಬಂದಿತ್ತು, ರಾಜಕಾರಣಿಗಳು ಅವರಿಗೆ ಹೆದರುತ್ತಿದ್ದರು. ಆಗ ರಾಜಕೀಯ ಕೆಟ್ಟಿತ್ತು ನಿಜ, ಆದರೆ ಈಗಿನಷ್ಟು ಕೆಟ್ಟಿರಲಿಲ್ಲ. ಹಲವೊಮ್ಮೆ ಅನ್ನಿಸುತ್ತೆ, ಲಂಕೇಶರು ಈಗ ಇದ್ದಿದ್ದರೆ ಇವತ್ತಿನ ರಾಜಕಾರಣಿಗಳನ್ನು, ಅವರ ರಾಜಕೀಯವನ್ನು ನೋಡಿ ಏನನ್ನುತ್ತಿದ್ದರು ಎಂದು.

ಲಂಕೇಶರಿಗೆ ಪ್ರಭಾವ ಇದ್ದಿದ್ದರಿಂದ ಕೆಲವರು ಅವರ ಬಳಿ ಬಂದು ಕೆಲಸ ಕೊಡಿಸಿ ಎಂದೋ, ಮತ್ತಿನ್ನೆಂತಹದ್ದೋ ಉಪಕಾರ ಮಾಡಿಸಿಕೊಡಿ ಎಂದೋ ಕೇಳುತ್ತಿದ್ದರು. ಆದರೆ ಲಂಕೇಶರು ಎಂದೂ ಯಾರಿಗೂ ಅಂತಹ ಶಿಫಾರಸ್ಸು ಮಾಡಿದವರಲ್ಲ. ಇನ್ನು ಉಪಕಾರವನ್ನು ತಮಗಾಗಲಿ, ಬೇರೆಯವರಿಗಾಗಲಿ ಕೇಳಿದವರೂ ಅಲ್ಲ. ನಮ್ಮ ಮಗ ಕ್ರಿಕೆಟ್ ಆಡುತ್ತಿದ್ದಾಗ ಅದು ಯಾರೋ ಲಂಕೇಶರಿಗೆ "ನೀವು ಕೆಎಸ್‌ಸಿಎ ಅಧಿಕಾರಿಯೊಬ್ಬರಿಗೆ ಒಂದು ಮಾತು ಹೇಳಿದರೆ ಸಾಕು, ನಿಮ್ಮ ಮಗನಿಗೆ ಅಂಡರ್ ಸಿಕ್ಸ್‌ಟೀನ್ ತಂಡದಲ್ಲಿ ಸ್ಥಾನ ಸಿಗುತ್ತೆ" ಎಂಬ ಸಲಹೆ ನೀಡಿದರು. ಆದರೆ ಲಂಕೇಶರು ಅಂತಹದ್ದೇನನ್ನೂ ಮಾಡಲಿಲ್ಲ. ಬದಲಾಗಿ ಅದೇ ಹೊತ್ತಿಗೆ ಕೆಎಸ್‌ಸಿಎದಲ್ಲಿ ನಡೆಯುತ್ತಿದ್ದ ಅವ್ಯವಹಾರಗಳ ಬಗ್ಗೆ ಪತ್ರಿಕೆಯಲ್ಲಿ ವರದಿಗಳನ್ನು ಪ್ರಕಟಿಸಿದರು.

ಹಾಗೆಯೇ ಒಮ್ಮೆ ನಮ್ಮ ಮಗ ಅಜಿತು ಒಂದು ಚಿಕ್ಕ ಆಕ್ಸಿಡೆಂಟ್ ಮಾಡಿಕೊಂಡು ಬಂದಾಗ "ಇಂತಹದ್ದೆಲ್ಲ ನಡೆದಾಗ ನೀನು ನನ್ನ ಹೆಸರನ್ನು ಹೇಳಕೂಡದು" ಎಂದು ಲಂಕೇಶರು ಆತನಿಗೆ ಹೇಳಿದರು. "ಆದರೆ ಪೊಲೀಸರು ತಂದೆಯ ಹೆಸರೇನು ಎಂದು ಕೇಳುತ್ತಾರಲ್ಲ, ಆಗ ಏನಂತ ಹೇಳಲಿ" ಎಂದು ಅಜಿತು ಕೇಳಿದ. ಆಗ ಲಂಕೇಶರು ಸುಮ್ಮನೆ ನಗುತ್ತಾ ಹೊರಟುಹೋದರು.

ಪತ್ರಿಕೆ, ಟೀಕೆ ಟಿಪ್ಪಣಿ, ಮರೆಯುವ ಮುನ್ನ, ಕತೆ, ತೋಟ, ಇಸ್ಪೀಟು, ನಿಮ್ಮಿ ಕಾಲಂ, ನೀಲು ಕಾವ್ಯ, ಕುದುರೆ ರೇಸು, ಗೆಳತಿಯರು, ಎಲ್ಲವೂ ಒಟ್ಟೊಟ್ಟಿಗೆ ನಡೆಯುತ್ತಿದ್ದವು. ಲಂಕೇಶರ ಕೆಲಸ ಕಾರ್ಯಗಳನ್ನು ನೋಡಿ ಇವರಿಗೆ ಅದು ಹೇಗೆ ಇಷ್ಟೆಲ್ಲಾ ಮಾಡಲು ಸಾಧ್ಯವಾಗುತ್ತದೆ ಎಂದು ನನಗೆ ಆಶ್ಚರ್ಯವಾಗುತ್ತಿತ್ತು. ಪತ್ರಿಕೆಯಲ್ಲಿ ರಾಜಕೀಯಕ್ಕೆ ಎಷ್ಟು ಪ್ರಾಮುಖ್ಯತೆ ಇತ್ತೋ ಅಷ್ಟೇ ಪ್ರಾಮುಖ್ಯತೆ ಸಾಹಿತ್ಯಕ್ಕೂ ಇರುತ್ತಿತ್ತು. ಭ್ರಷ್ಟರು ಮತ್ತು ರಾಜಕಾರಣಿಗಳು ಆಗ 'ಲಂಕೇಶ್ ಪತ್ರಿಕೆ'ಯಲ್ಲಿ ತಮ್ಮ ಬಗ್ಗೆ ಬರುತ್ತೆ ಅಂತ ಹೆದರುತ್ತಿದ್ದರು. ಆದರೆ ಈಗಿನ ರಾಜಕಾರಣಿಗಳು ಯಾವುದಕ್ಕೂ ನಾಚಿಕೆ ಪಡುವುದಿಲ್ಲ. "ಬೇಕಾದರೆ ನಾವೇ ನಮ್ಮ ಫೋಟೋ ಕೊಡುತ್ತೇವೆ, ಬರೆಯಲಿ ಬಿಡು'' ಎನ್ನುವಷ್ಟು ಕೆಟ್ಟವರಾಗಿದ್ದಾರೆ.

******

ಮೊದಲೇ ಹೇಳಿದ್ದೆನಲ್ಲ, ನಾನು ಲಂಕೇಶರನ್ನು ಮದುವೆಯಾದ ನಂತರವೇ ಅಡುಗೆ ಮಾಡಲು ಕಲಿತದ್ದು ಎಂದು. ಇಲ್ಲಿ ಒಂದು ವಿಷಯವನ್ನು ಹೇಳಬೇಕು.

ಲಂಕೇಶರಿಗೆ ತುಂಬಾ ಇಷ್ಟವಾದ ಸಿಹಿ ಎಂದರೆ ಒಬ್ಬಟ್ಟು. ಆದ್ದರಿಂದ ನಾನು ಮಾಡಲು ಕಲಿತ ಒಂದೇ ಸಿಹಿ ಊಟವೆಂದರೆ ಒಬ್ಬಟ್ಟು ತಟ್ಟುವುದನ್ನು. ನಮ್ಮ ಮನೆಯಲ್ಲಿ ಯಾವುದೇ ಹಬ್ಬವಿರಲಿ, ಯಾವುದೇ ವಿಶೇಷ ಸಂದರ್ಭವಿರಲಿ, ಎಲ್ಲದಕ್ಕೂ ಒಂದೇ ಸಿಹಿ ಊಟ. ಅದು ಒಬ್ಬಟ್ಟು. ಬೇರೆಯವರ ಮನೆಗಳಲ್ಲಿ ಬೇರೆ ಬೇರೆ ಹಬ್ಬಗಳಿಗೆ ಬೇರೆ ಬೇರೆ ಸಿಹಿಗಳನ್ನು ಮಾಡಿದರೆ ನಮ್ಮ ಮನೆಯಲ್ಲಿ ಎಲ್ಲದಕ್ಕೂ ಒಬ್ಬಟ್ಟೇ.

ಲಂಕೇಶರಿಗೆ ಶುಗರ್ ಜಾಸ್ತಿಯಾದ ನಂತರ ನಾನು ಅವರು ಸೇವಿಸುವ ಆಹಾರದ ಮೇಲೆ ನಿಗಾ ಇಡಲಾರಂಭಿಸಿದೆ. ಸಾರಿನಲ್ಲಿ ಕಡಿಮೆ ಉಪ್ಪು ಕಾಫಿಯಲ್ಲಿ ಕಡಿಮೆ ಸಕ್ಕರೆ... ಹೀಗೆ. ಇನ್ನು ಒಬ್ಬಟ್ಟು ಮಾಡಿದ ದಿನ ನಾನು ಅವರ ತಟ್ಟೆಗೆ ಒಂದೇ ಒಂದು ಒಬ್ಬಟ್ಟನ್ನು ಹಾಕಿ ಸುಮ್ಮನಾಗುತ್ತಿದ್ದೆ. ಆ ಒಂದು ಒಬ್ಬಟ್ಟನ್ನು ತಿಂದು ಮುಗಿಸಿದ ನಂತರ ಅವರು ಡೈನಿಂಗ್ ಟೇಬಲ್‌ನಿಂದ ಎದ್ದು ಹೋಗದೇ ಅಲ್ಲಿಯೇ ಒಂದು ಮಾತನ್ನೂ ಹೇಳದೆ ಕುಳಿತಿರುತ್ತಿದ್ದರು. ಕೊನೆಗೆ ನಾನೇ ಕರಗಿ ಅವರ ತಟ್ಟೆಗೆ ಇನ್ನೊಂದು ಒಬ್ಬಟ್ಟನ್ನು ಹಾಕುತ್ತಿದ್ದೆ. ಆಗ ಅವರು 'ಮೀಯಾಂವ್' ಎಂದು ಸಂತೋಷ ವ್ಯಕ್ತಪಡಿಸುತ್ತಾ, ಒಬ್ಬಟ್ಟಿನ ಮೇಲೆ ತುಪ್ಪ ಸುರಿದುಕೊಂಡು ತಿನ್ನುತ್ತಿದ್ದರು.

******

ಶುಗರ್ ಇದ್ದಿದ್ದರಿಂದ ಲಂಕೇಶರು ದೈಹಿಕವಾಗಿ ಸ್ವಲ್ಪ ವೀಕ್ ಆಗಿದ್ದರು. ಅದೇ ಹೊತ್ತಿಗೆ ಅವರಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಬಂದಿತು. ಪ್ರಶಸ್ತಿ ಸಿಕ್ಕಿದ್ದಕ್ಕೆ ಅವರ ಮಿತ್ರರ ಮನೆಯಲ್ಲಿ ಒಂದು ಪಾರ್ಟಿ ಏರ್ಪಾಡಾಗಿತ್ತು. ಅವತ್ತು ರಾತ್ರಿ ಲಂಕೇಶರು ತಡವಾಗಿ ಮನೆಗೆ ಬಂದರು. ನಾನೇ ಎದ್ದು ಬಾಗಿಲನ್ನು ತೆರೆದೆ. ಲಂಕೇಶರು ಸ್ವಲ್ಪ ತಡವರಿಸುತ್ತಾ, ಗೋಡೆಯನ್ನು ಆಶ್ರಯಿಸುತ್ತ ಮೆಟ್ಟಿಲನ್ನು ಹತ್ತಿ ರೂಮಿಗೆ ಹೋದರು. ಅವತ್ತು ಅವರು ಜಾಸ್ತಿ ಕುಡಿದಿರಬಹುದು ಅದಕ್ಕೆ ಹೀಗೆ ನಡೆಯುತ್ತಿದ್ದಾರೆ ಎಂದು ಭಾವಿಸಿದ ನಾನು ಸುಮ್ಮನೆ ನನ್ನ ರೂಮಿಗೆ ಹೋದೆ.

ಆದರೆ ಲಂಕೇಶರಿಗೆ ನಿಜವಾಗಲು ಏನಾಗಿತ್ತು ಎಂದು ನಮಗೆ ಗೊತ್ತಾಗಿದ್ದೆ ಮಾರನೆ ದಿನ ಮುಂಜಾನೆ. ಅವತ್ತು ಲಂಕೇಶರು ಎಂದಿನಂತೆ ಬೆಳಗ್ಗೆಯೇ ಎದ್ದು ವಾಕಿಂಗ್ ಹೋಗಲಿಲ್ಲ, ಅಷ್ಟೇ ಅಲ್ಲ, ಅವರಿಗೆ ಎದ್ದು ಕೂರುವುದೂ ಕಷ್ಟವಾಗಿತ್ತು. ಆಗ ಅಜಿತು ತಕ್ಷಣ ಡಾಕ್ಟರ್ ಗೌಡರಿಗೆ ಹೇಳಿದ. ಅವರು ಬಂದು ನೋಡಿ ಲಂಕೇಶರಿಗೆ ಸಣ್ಣದಾಗಿ ಸ್ಟ್ರೋಕ್ ಆಗಿದೆ ಎಂದು ಹೇಳಿ ತಕ್ಷಣವೇ ಅವರನ್ನು ಆಸ್ಪತ್ರೆಗೆ ಸೇರಿಸಬೇಕೆಂದು ಹೇಳಿದರು. ಅಜಿತು ಮತ್ತು ಲಂಕೇಶರ ಕಾರ್ ಡ್ರೈವರ್ ರೇವಣ್ಣ ಲಂಕೇಶರನ್ನು ಒಂದು ಬೆತ್ತದ ಕುರ್ಚಿಯಲ್ಲಿ ಕೂರಿಸಿಕೊಂಡು ಮೊದಲನೆ ಮಹಡಿಯಲ್ಲಿದ್ದ ಅವರ ರೂಮಿನಿಂದ ಕರೆದುಕೊಂಡು ಬಂದು ಕಾರಿನಲ್ಲಿ ಕೂರಿಸಿದರು.

ಇದೆಲ್ಲ ಆದ ನಂತರವೇ ಹಿಂದಿನ ದಿವಸೇ ಲಂಕೇಶರು ಆಫೀಸಿನಲ್ಲೇ ಒಮ್ಮೆ ಎಡವಿ ಬಿದ್ದಿದ್ದರೆಂದೂ, ಅಂದಿನ ಸಂಜೆಯ ಪಾರ್ಟಿಗೆ ಹೋಗಲು ಲಂಕೇಶರಿಗೆ ಇಷ್ಟವಿಲ್ಲದಿದ್ದರೂ ಅವರ ಕೆಲವು ಮಿತ್ರರು ಬಲವಂತ ಮಾಡಿ ಅವರನ್ನು ಕರೆದುಕೊಂಡು ಹೋಗಿದ್ದರು ಎಂದು ನಮಗೆ ಗೊತ್ತಾಗಿದ್ದು. 'ಲಂಕೇಶರ ಆರೋಗ್ಯ ಅವರ ಮಿತ್ರ... ಮುಖ್ಯವಲ್ಲ, ಬದಲಿಗೆ ಗುಂಡು ಪಾರ್ಟಿ ಮುಖ್ಯ... ಎಂದು ನನಗೆ ತುಂಬಾ ಕೋಪ ಬಂದಿತ್ತು.

ಬೇಬಿ ಮತ್ತು ನಾನು ಲಂಕೇಶರನ್ನು ಆಸ್ಪತ್ರೆಗೆ ಕ... ಕೊಂಡು ಹೋದೆವು. ನಮ್ಮ ಮಕ್ಕಳು ಹುಟ್ಟಿದಾಗ ಅ... ಮಕ್ಕಳಿಗೆ ಹುಷಾರಿಲ್ಲದಿದ್ದಾಗ ಮಾತ್ರ ಲಂಕೇಶರು ಆ... ಬಂದಿದ್ದರು. ಅವರು ಅಲ್ಲಿಯತನಕ ಎಂದೂ ಯಾವ ಡಾ... ಹತ್ತಿರ ಹೋದವರಲ್ಲ. ಅಂತಹ ಲಂಕೇಶರಿಗೆ ಅಲುಗಾ... ಒಂದುಕಡೆ ಮಲಗಿರುವುದೆಂದರೆ ಅಸಹನೀಯವಾಗಿ... ಸ್ಟ್ರೋಕ್ ಆಗಿದ್ದರೂ ತನಗೆ ಏನೂ ಆಗಿಲ್ಲ ಎಂದು ಹೇಳ... "ಆಸ್ಪತ್ರೆ ಗೀಸ್ಪತ್ರೆ ಎಲ್ಲ ಬೇಕಿಲ್ಲ, ನನ್ನನ್ನು ಕೂಡಲೇ ಇಲ್ಲಿ... ಕರೆದುಕೊಂಡು ಹೋಗಿ'' ಎಂದು ನಮ್ಮಿಬ್ಬರ... ಒತ್ತಾಯಿಸುತ್ತಿದ್ದರು.

ಕೊನೆಗೆ ಲಂಕೇಶರ ಮೇಲೆ ಹಲವಾರು ಟೆಸ್ಟ್‌ಗಳ... ಮಾಡಿಸಲು ಅವರನ್ನು ಆಸ್ಪತ್ರೆಯವರು ಒಳಗೆ ಕರೆದುಕೊಂ... ಹೋದರು. ಎಷ್ಟು ಹೊತ್ತಾದರೂ ಅವರನ್ನು ಹೊ... ಕರೆದುಕೊಂಡು ಬರಲಿಲ್ಲ. ಹೊರಗಿದ್ದ ನಮಗೆ ಒಂ... ರೀತಿಯ ಆತಂಕ, ಒಳಗಿದ್ದ ಲಂಕೇಶರಿಗೆ ಇನ್ನೊಂ... ರೀತಿಯ ಕಷ್ಟ.

ಟೆಸ್ಟ್‌ಗಳೆಲ್ಲ ಮುಗಿದ ನಂತರ ಅವರನ್ನು ಚಿ... ಮಾಡಬೇಕಿದ್ದ ಡಾಕ್ಟರ್ ಎಷ್ಟು ಹೊತ್ತಾದರೂ ಬರಲಿ... ಸಮಯಪ್ರಜ್ಞೆ ಬಗ್ಗೆ ತುಂಬಾ ಕಾಳಜಿ ಹೊಂದಿದ್ದ ಲಂಕೇಶ... ಇದರಿಂದ ಕೋಪ ಬರಲಾರಂಭಿಸಿತು. ಜೊತೆಗೆ ಅವ... ಶುಗರ್ ಇದ್ದಿದ್ದರಿಂದ ಹಸಿವು ಮತ್ತು ಸುಸ್ತು ಅವರ... ಕಾಡಲಾರಂಭಿಸಿತು. ಕೊನೆಗೂ ಡಾಕ್ಟರ್ ಬಂದರು. ಅವರ... ಕಂಡಕೂಡಲೇ ಲಂಕೇಶರು ಅವರನ್ನು ಹಿಗ್ಗಾ ಮು... ಬೈಯ್ಯಲಾರಂಭಿಸಿದರು. "ನಿಮಗೆ ಟೈಂ ಸೆನ್ಸ್ ಇಲ್ಲವೇ... ನಾನಿಲ್ಲ ನೋವು ಸುಸ್ತು ಎಂದು ಕಷ್ಟ ಪಡುತಿದ್ದರೆ ನೀ... ಇಷ್ಟು ತಡವಾಗಿ ಬಂದಿದ್ದೀರಲ್ಲ" ಎಂದೆಲ್ಲ ರೇಗಿದರು.

ಇದನ್ನು ಕೇಳಿ ಆ ಡಾಕ್ಟರ್‌ಗೂ ಕೋಪ ಬಂತು. "ನಾ... ಡಾಕ್ಟರ್. ಯಾವುದೋ ಎಮರ್ಜೆನ್ಸಿ ಮೇಲೆ ಹೋಗಿ... ಇಲ್ಲಿ ನೀವೂ ಕಾಯುತ್ತಿದ್ದೀರಿ ಎಂಬುದಕ್ಕಿಂತ ಅಲ್ಲಿ ಒಂದ... ಪ್ರಾಣ ಉಳಿಸುವುದು ನನಗೆ ಮುಖ್ಯವಾಗಿತ್ತು. ನಾನು ನಿಮ್ಮ... ನೋಡಲ್ಲ, ನೀವು ಬೇ... ಯಾವುದ್ದಾದರೂ ಆಸ್ಪತ್ರೆಗೆ ಹೋಗಿ" ಎಂದು ಅವರ... ರೇಗಿದರಲ್ಲದೆ, ಅಲ್ಲಿಂದ ಹೊರಟೇಹೋದರು.

ಇವರಿಬ್ಬರ ಜಗಳ ನೋಡಿ ನನಗೂ, ಬೇಬಿಗ... ಆತಂಕ. ನಾವಿಬ್ಬರು ಡಾಕ್ಟರ್‌ನ್ನು ಹಿಂಬಾಲಿಸಿ "ಪ್ಲೀಸ... ನೀವು ಕೋಪ ಮಾಡಿಕೊಳ್ಳಬೇಡಿ. ಅವರೆಂದೂ ಡಾಕ್ಟರ... ಹತ್ತಿರವೋ, ಆಸ್ಪತ್ರೆಗೋ ಹೋದವರಲ್ಲ, ಅವರು ಹುಟ್ಟಿದ್ದು... ಮನೆಯಲ್ಲೇ. ನಾವು ನಿಮ್ಮನ್ನು ಬೇಡುತ್ತೇವೆ. ನೀವು ಬಂದು... ಅವರಿಗೆ ಟ್ರೀಟ್‌ಮೆಂಟ್ ಕೊಡಿ" ಎಂದು ಅವರನ್ನು... ಸಮಾಧಾನ ಮಾಡಿದೆವು.


ಲಂಕೇಶರು ಸುಮಾರು ಎರಡು ವಾರ ಆಸ್ಪತ್ರೆಯಲ್ಲಿದ್ದರು... ಟ್ರೀಟ್‌ಮೆಂಟ್ ಪಡೆದ ನಂತರ ಅವರನ್ನು ಮನೆ... ಕಳುಹಿಸಲಾಯಿತು. ಮನೆಗೆ ಬಂದ ನಂತರ ಅವರು ವೈದ್ಯ... ಸಲಹೆಯಂತೆ ಪ್ರತಿ ದಿನ ಮಸಾಜ್ ಮಾಡಿಸಿಕೊಂಡಿದ್ದರಿಂ... ಅವರ ಆರೋಗ್ಯ ಚೇತರಿಸಿಕೊಂಡಿತು. ಕೆಲವೇ ತಿಂಗಳ... ಸ್ಟ್ರೋಕ್ ಆಗಿದ್ದರ ಸುಳಿವೂ ಇಲ್ಲದಂತೆ ಮತ್ತೆ ಓಡಾ... ಲಾರಂಭಿಸಿದರು. ಆದರೆ ಅವತ್ತಿನಿಂದ ಅವರ ದೇಹ ಅವರಿ... ಕೈಕೊಡಲಾರಂಭಿಸುತ್ತಿದೆ ಎಂಬ ಅರಿವು ಅವರಿಗಾಗಿತು...

(ಮುಂದುವರೆಯುವುದು)

ಪ್ರಶ್ನೋತ್ತರ

ಪ್ರಶ್ನೋತ್ತರ ಚಿಹ್ನೆಯ ಪ್ರಪಂಚದೊಳಗೆ
ಪ್ರಶ್ನೆಪತ್ರಿಕೆಗಳ ಮೆರವಣಿಗೆ
ಉತ್ತರಿಸು ಪದವೊಂದರಲಿ
ಹೇಳಲಾದೀತೆ ಉತ್ತರ
ಪದವೊಂದರಲಿ ಅಸಂಗತ ಬದುಕಿಗೆ
ಸಂಕ್ಷಿಪ್ತವಾಗಿ ವಿವರಿಸು
ವಿಕ್ಷಿಪ್ತಗೊಂಡ ಬದುಕನು ಹೇಗೆ ಸಂಕ್ಷಿಪ್ತಗೊಳಿಸಲಿ
ಬಿಟ್ಟ ಜಾಗ ಭರ್ತಿ ಮಾಡು
ಖಾಲಿ ಬಿಟ್ಟವರಾರು
ಅದ ತುಂಬಲು ನಾನ್ಯಾರು
ಹೊಂದಿಸಿಬರೆ
ಯಾವುದನು ಯಾವುದಕೆ ಹೊಂದಿಸಲಿ
ಹೊಂದಾಣಿಕೆಯಿರದಿ ಜಗದಲಿ
ಬರೆ ಪತ್ರವೊಂದನು
ಯಾವ ವಿಳಾಸಕೆ ಯಾರಿಗೆಂದು ಬರೆಯಲಿ
ಬರೆದರೂ ಓದುವವರ್‍ಯಾರಿಲ್ಲಿ
ಗಾಲಿ ಕಟ್ಟಿಕೊಂಡು ಓಡುತಿಹ ಜಗದಲ್ಲಿ
ಉತ್ತರಿಸಲಾಗದ ಪ್ರಶ್ನೆಗಳ ಕೇಳಿ
ಕೊಲ್ಲದಿರೆನ್ನ ಎಲ್ಲ ಬಲ್ಲವನೆಂಬ ಅಹಂಕಾರದಲಿ!

• ಕು.ಸ. ಮಧುಸೂದನ್




ಅವುಳ್ಯಾರೊ ಸಾಯ್ತುನಿ ಸಾಯ್ತುನಿ ಅಂತ ಸಾವುರ ಕೋಳಿ ತಿಂದ್ಲಂತೆ!

"ದ್ಯಾವೇಗೌಡ ಇದೇ ಕಡೆ ಚುನಾವಣೆ ದವುನಂತೆ" ಎಂದ ಸೀರ.

"ಅವುನಿಗೂ ವಯಿಸಾಯ್ತಲವೆ" ಎಂದ ಕಾಳಮಾವ.

"ಅವುನು ನೀನು ಒಂದೇ ವಾರಿಗ್ಯೋರಲವೇನೊ ಮಾವ. ತ್ರಿ ಗಟ್ಟ್ಯಾಗವುನೆ" ಎಂದ ಉಗ್ರಿ.

"ಕಡೆ ಚುನಾವಣೆ ಅಂದ್ರೆ ಈಗ್ಯಾವ ಚುನಾವಣೆ ವದೆ?" ಎಂದಳು ಜುಮ್ಮಿ.



"ಎಡೂರಪ್ಪನಿಗೆ ತಲಿಕೆಟ್ಟು ಸರ್ಕಾರ ಕೆಡವಿದ್ರೆ ಚುನಾವಣೆ ದೆ. ಅಂಗೇನಾರ ಬಂದ್ರೆ ಇದೇ ಕಡೆ ಚುನಾವಣೆ ಅಂದವುನೆ."

"ಸಾಯ್ತುನಿ ಸಾಯ್ತುನಿ ಅಂತ್ಲೆ ಯಾವಳೊ ಸಾವುರ ಕೋಳಿ ದಳಂತೆ. ಅಂಗಾಯ್ತು ಕಂಡ್ರ ಈ ದ್ಯಾವೇಗೌಡನ ಕತೆ."

"ಅವುನ ಛಲ ಯಾರಿಗಿದ್ದತೊ ಮಾವ. ಇವತ್ತಿಗೂ ಲೂರಾತ್ರಿ ಕಷ್ಟಪಟ್ಟು, ಪಾರ್ಟಿ ಕಟ್ಟುತಾ ಅವುನೆ. ಅವುನ ತೋರು ಇಡೀ ದೇಶದಲ್ಲಿ ಅವುನೊಬ್ಬನೆ ಇರದು ಗೊತ್ತೆ" ದ ಉಗ್ರಿ. ಆಗ ಎಲ್ಲೊ ಯೋಚಿಸುತ್ತಿದ್ದ ವಾಟಿಸ್ಸೆ ಹಠಾತ್ತನೆ ಗಿ,

"ನಿನ್ನ ಮಾತು ಸುಳ್ಳು ಕಣೊ ಉಗ್ರಿ. ಅವುನ ತರ ಇನ್ನೊಬ್ಬ ನೆ" ಎಂದ.

"ಎಲ್ಲಿದ್ದನಪ್ಪ ತೋರಸು."

"ಇಲ್ಲೆ ಪಕ್ಕದಲ್ಲೇ ಅವುನೆ ಕಣೊ. ಬೂಕನಕೆರೆ ಸಿದ್ಲಿಂಗಪ್ಪನ ಗ ಎಡೂರಪ್ಪ ಅಂತ ಹೆಸರು. ಅವುನು ನಿಮ್ಮ ವೇಗೌಡಂಗೆ ಕಣೊ. ಪಾಪ ಐದು ವರ್ಷ ನಾನೇ ರಾಜ ತಿದ್ದ. ಮೂರೇ ವರಸಕ್ಕೆ ಮನಿಗೆ ಬಂದ. ಆದ್ರೆ ಅವುನಿಗೆ ಲಿರಕ್ಕಾಯ್ತಾ ಇಲ್ಲ, ಫಲ್ಯೂ ಹೋಗಕ್ಕೂ ಆಯ್ತಾಯಿಲ್ಲ. ಕಾರ ಬುಟ್ಟಾಗ ಯಪ್ಪತ್ತೊಂದು ಜನ ಯಮ್ಮೆಲ್ಲೆಗಳಿದ್ರಂತೆ. ಇಪ್ಪತ್ತೊಂದು ಜನಾಗ್ಯವುರೆ. ಇನ್ನೊಸಿ ದಿನಕೆ ಅವುರೂ ಗಬವುದು."

"ಅವುನ್ಯಾಕ್ಲ ಚೆಡ್ಡಿ ಇಕ್ಕಂಡು ತಿರುಗ್ತನೆ?"

"ನೀನೆಲ್ಲಿ ನೋಡಿದಕ್ಕಾ?"

"ಪಂಚಾತಿ ಆಫೀಸಲ್ಲಿ ಪೇಪ್ರು ತರುಸ್ತರೆ. ಅಲ್ಲಿ ನೋಡಿದೆ ತ್ರ. ಪಾಪ ಚೆಡ್ಡಿ ಇಕ್ಕಂಡು ಹಿಂದಕೆ ಕೈ ಕಟ್ಟಿಗಂಡು ಬತ್ತಿದ್ದ."

"ಅದು ಆರೆಸೆಸ್‌ನೋರ ಡ್ರೆಸ್ಸು ಕಣಕ್ಕ. ಎಡೂರಪ್ಪನಿಂದ ತದು ವಾಜಪೇಯಿಗಂಟ ಯಲ್ಲಾರು ಆರೆಸ್ಸೆಸ್ ಸದಸ್ಯರು ಕ್ಕಾ."

"ಸರಿ, ಚೆಡ್ಡಿ ಯಾಕೆ ಇಕ್ಕಂಡಿದ್ದ ಹೇಳ್ಳ."

"ಅಂಗೇ ಇರಬೇಕಾಗಿತ್ತು ಅಂತ್ಲ ನಿನ್ನ ಲೆಕ್ಕ? ಸಾರಿ ಕಣಕ್ಕ ಹೇಳ್ತಿನಿರು. ಯಾವುದೇ ಸಂಘ, ಪಂಥ, ಟೀಮಿಗೆ ಒಂದು ಯೂನಿಫಾರಮ್ಮು ಅಂತ ಇರತದೆ. ಪರೆಗ್‌ಜಾಂಪಲ್, ಅಯ್ಯಪ್ಪನಿಗೆ ನ್ಯಡಕಳೋರು ಕರಿಬಟ್ಟೆ ಹಾಯ್ಕತ್ತರೆ. ಚಿಕ್ಕಮಗಳೂರು ಸೀಮೆಯಸ್ಗೆ ಸೀಟಿ ರವಿ ಟೀಮು ಕಾವಿ ಡ್ರೆಸ್ಸಾಕ್ತರೆ. ಅದೇ ತರ ಆರೆಸೆಸ್ಸಿನೋರು ಬಿಳಿ ಅಂಗಿ, ಕರಿಟೋಪಿ, ಖಾಕಿ ಚೆಡ್ಡಿ ಹಾಯ್ಕಂಡು ಒಂದು ಬಿದುರುದೊಣ್ಣೆ ಹಿಡಕಂಡಿರತರೆ."

"ದೊಣ್ಣೆ ಏನು ಮಾಡಕ್ಲ?"

"ಸಾಬರು ಓಡಿಸಿಗಂಡು ಬಂದಾಗ ಆತ್ಮ ರಕ್ಷಣೆ ಮಾಡಿಕಂಡು ಓಡಕ್ಕೆ."

"ಅಂಗರೆ ಸಾಬರಿಗೂ, ಅವುರಿಗೂ ಆಗದಿಲ್ಲ ಅನ್ನು."

"ಇಲ್ಲ ಕಣಕ್ಕ. ಸಾಬರು ಅಂದ್ರು ಸಾಕು ನಿದ್ದೆಲು ಎದ್ದು ಕೂತಗಂಡು ಲಾಠಿ ಹುಡುಕ್ತರೆ, ಪಾಪ."

"ಒಬ್ಬನ ಕೈಲಿ ಒಂದು ಆಯುಧ ಅದೆ ಅನ್ನದಾದ್ರೆ ಅವುನು ಯಾರಿಗೊ ಹೆದರತನೆ ಅಂದಂಗಾಯ್ತು" ಎಂದ ಕಾಳಮಾವ.

"ಹಂಡ್ರೆಡ್ ಪರಸೆಂಟು ನಿಜ ದ್ವಡಪ್ಪ. ಲಾಟಿ, ತ್ರಿಶೂಲ, ಬಾವುಟ, ಇವ್ಯೆಲ್ಲ ಪುಕ್ಕಲ ಜನಗಳ ಆಯುಧ. ಅದೇ ನಾವು ನೋಡು ಎಷ್ಟು ಆರಾಮಾಗಿ ಜಾಲಿಯಾಗಿದ್ದಿವಿ."

"ಎಡೂರಪ್ಪನ ಚೆಡ್ಡಿ ಕತೆ ಹೇಳ್ಳಿಲ್ಲ ನೀನು."

"ಅದೇ ಕಣಕ್ಕ, ಆರೆಸೆಸ್ಸ್‌ನೋರು ನಾವೆಷ್ಟು ಜನಿದ್ದಿವಿ ಅಂತ ತೋರಕ್ಕೆ ಆಗಾಗ್ಗೆ ಜಾಥಾ ತಗದು, ಯಾವುದಾರ ಮೈದಾನದಲ್ಲಿ ದೂರ ದೂರ ಕೂತಗಂಡು, ಲೀಡ್ರುಗಳ ಭಾಷಣ ಕೇಳ್ತರೆ. ಅಂತ ಸಭಿಗೆ ಈ ರಾಜಕಾರಣಿಗಳು ಅವುರ‍್ಯಂಥಾ ಸ್ಥಾನದಲ್ಲಿದ್ರು ಹೋಗಬೇಕು. ಹೋಗಿ ಇಕ್ಕಿರೊ ಬಟ್ಟೆ ಬಿಚ್ಚಾಕಿ, ತಗಂಡೋದ ಅಂಗಿ ಚೆಡ್ಡಿ ಇಕ್ಕಂಡು ಸಾಲಾಗಿ ನಿಂತಗಂಡು 'ನಮಸ್ತೇ ಸದಾ ವತ್ಸಲೇ ಮಾತೃ ಭೂಮಿ' ಅಂತ ಹೇಳಿಬರಬೇಕು. ಅಂತದೊಂದು ಸಬಿಗೆ ಎಡೂರ, ಈಶ್ವರ, ಸದಾನಂದ, ಶೆಟ್ಟಿಯಲ್ಲಾ ಹೋಗಿ ಲೀಡ್ರು ಕೈಲಿ ಬೈಸಿಗಂಡು ಬಂದ್ರು."

"ಅದ್ಯಾಕ್ ಬೋದ್ರು?"

"ಬಿಜೆಪಿಗೆ ಕ್ಯಟ್ಟ ಹೆಸರ ತಂದಿದ್ದಿರಿ. ಭ್ರಷ್ಟ ಕ್ಯಲಸ ಮಾಡಿದ್ದಿರಿ. ಹಿಂಗಾದ್ರೆ ನಾವು ನಿಮ್ಮ ಕ್ಷಮಿಸೊದಿಲ್ಲ ಅಂದು ಕಳಿಸಿದ್ರು."

"ಅಲ್ಲಾ ಕಣೊ ವಾಟಿಸ್ಸೆ, ಎಡೂರಪ್ಪ ಕೊಳ್ಳೆ ಹೊಡದು ಕೊಟ್ಟಿದ್ದನ್ಯಲ್ಲ ಚೆಡ್ಡಿ ಚೋಬೊಳಿಕೆ ತುಂಬಿಕಂಡು, ಪಾಪ ಅವುನು ಅಧಿಕಾರ ಕಳಕಂಡ ಮ್ಯಾಲೆ ಅವುನಿಗೇ ಬುದ್ಧಿ ಹೇಳ್ಯವುರಲ್ಲಾ, ಇವುರು ಇನ್ಯಂತಾ ಜನ?" ಎಂದ ಉಗ್ರಿ.

"ಅದೇ ಕಣೊ ಉಗ್ರಿ ಆರೆಸೆಸ್ ಟೆಕ್ನಿಕ್ಕು. ಎಡೂರಪ್ಪನಿಂದ ಕಾಸಾಯ್ತಲ್ಲಾ? ಇನ್ನ್ಯಾಕವುನು? ಕ್ಯಟ್ಟೆಸರು ಬಂದಿದ್ರೆ ಅವುನೇ ಹೊತಗಂಡೋಗಬೇಕು. ಅಂದ್ರೆ ಎಡೂರಪ್ಪ ಆರೆಸೆಸ್‌ನೋರ ಸಬಿಗೆ ಹೋಗದೆ ಬೇಕಿಲ್ಲ ಅವುರಿಗೆ. ಆದ್ರು ಹೋಯ್ತನಿವುನು."

"ಯಾಕೋಯ್ತನೆ ಗೊತ್ತೇನೊ? ಒಂದಲ್ಲ ಒಂದಿನ ಸದಾನಂದ ಗೌಡನ ಇಳಿಸಿ ನನ್ನನ್ನ ಏರುಸ್ತರೆ ಅಂತ ತಿಳಕಂಡಿರಬವುದು."

"ಅದ್ಯಂಗೆ ಸಾಧ್ಯನೊ ಉಗ್ರಿ? ಸದಾನಂದ ಗೌಡನ್ನ



ಇಳಸೊರ‍್ಯಾರು? ಇಳಿಸಿದ್ರೆ ಎಡೂರಪ್ಪನೇ ಇಳಸಬೇಕು. ಅಂತದ್ದೊಂದು ಕೆಲಸ ಮಾಡಬವುದು ಅಂತ ದ್ಯಾವೇಗೌಡ್ರು ಎದ್ದು ಕೂತಗಂಡು ಇದೇ ನನ್ನ ಕಡೇ ಚುನಾವಣೆ ಅಂದ್ರು."

"ಅವುನ ಮಮ್ಮಗೇನೊ ಬತ್ತಾ ಅವುನಂತೆ?"

"ಬತ್ತಾ ಅವುನಂತೆ ಏನು? ಬಂದಾಯ್ತು. ಕೂಡ್ಯೆ ದ್ಯಾವೇಗೌಡ್ರು ಅವುನು ರಾಜಕಾರಣಕ್ಕೆ ಬರೂದು ಬೇಡ, ದೇವೇಗೌಡನ ಇಡೀ ಕುಟುಂಬ ರಾಜಕಾರಣ ಮಾಡ್ತದೆ ಅಂತ ಕೆಟ್ಟ ಹೆಸರು ಬತ್ತದೆ ಅಂತ ಅಂದವುರೆ."

"ಕ್ಯಟ ಹೆಸರು ಯಂಗೆ ಬತ್ತದೊ? ಅಷ್ಟೊಂದು ಯೋಚನೆ ಮಾಡದಾಗಿದ್ರೆ ರೇವಣ್ಣನ ಜಾಗದಲ್ಲಿ ಪುಟ್ಟೇಗೌಡ ಇರತಿದ್ದ, ಕುಮಾರಸ್ವಾಮಿ ಜಾಗದಲ್ಲಿ ಯೋಗೇಶ್ ಇರತಿದ್ದ. ಅಲವೆ?" ಎಂದ ಉಗ್ರಿ.

"ಅದೇನೊ ನಿಜ ಕಣೊ ಉಗ್ರಿ. ಯಲ್ಲಾನು ಬುಟ್ಟು ನಿಂತೋರಿಗೆ ಯಾವ ಸಂಕೋಚನೂ ಇರದಿಲ್ಲ, ನನಿಗೆ ಸಂಕೋಚ ಇರದ್ರಿಂದ್ಲೇ ಯಾವ ಮೆಂಬ್ರೂ ಆಗಲಿಲ್ಲ, ಒಂಥರಾ ಬಂಗಾರಪ್ಪನಂಗಾದೆ ಅತ್ಲಗೆ" ಎಂದ ವಾಟಿಸ್ಸೆ.

"ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದ, ವಿರೋಧ ಪಕ್ಷದ ನಾಯಕ ಆಗಿದ್ದ, ಮಂತ್ರಿನೂ ಆಗಿದ್ದ ಕಣೊ."

"ಮಿಸ್ಟರ್ ಉಗ್ರಿ, ಅದನ್ಯಲ್ಲ ಮಾಡಿದ್ದು ಕಾಂಗ್ರೆಸ್ಸು ಕಣೊ. ಬಂಗಾರಪ್ಪ ಸ್ವಂತ ಸಾಮರ್ಥ್ಯದಿಂದ ಏನೂ ಆಗಲಿಲ್ಲ. ಅದೇನೊ ದೇವೇಗೌಡ್ರು ಮನಸ್ಸು ಮಾಡಿದ್ಕೆ ಒಂದು ಸತಿ ಎಂ.ಪಿ.ಯಾಗಿದ್ದ. ಅವುರು ಕೈಬುಟ್ಟಾಗ ಸೋತ. ಕೊನೆಗೆ ಅವುರತ್ರಕೆ ಹೋಗಿ ಸೇರಿಕೊಂಡ."

"ಈಗ ಈಡಿಗರ‍್ಯಲ್ಲ ದ್ಯಾವೇಗೌಡ್ರ ಕಡಿಕೆ ಬತ್ತರಲವೆ?"

"ಬರಬವುದು. ಯಾಕೆ ಅಂದ್ರೆ ಬಂಗಾರಪ್ಪನ ತಿಥಿ ಮಾಡಿದೋರು ಜೆಡಿಎಸ್‌ನೋರಂತೆ. ಅದ್ಕೆ ಕುಮಾರಣ್ಣ ಸೊರಬಕ್ಹೋಗಿ ಮುಂದೆ ನಮ್ಮ ಸರಕಾರದಲ್ಲಿ ಮದು ಬಂಗಾರಪ್ಪನ್ನ ಮಂತ್ರಿ ಮಾಡ್ತಿನಿ ಅಂದವುನಂತೆ."

"ಅಂಗರೆ ಮುಂದೆ ಜೆಡಿಎಸ್ ಸರಕಾರ ಬತ್ತದೆ ಅನ್ನು."

"ಎಸ್. ನೋಡವುಟ್. ಯಾಕಪ್ಪ ಅಂದ್ರೆ ಈ ಕಾಂಗ್ರೆಸ್‌ನವ ನೋಡಿದ್ರೆ ಒಂದ್ಯೆವತ್ತು ಸೀಟಿಗೆ ಬಂದು ನಿಂತಗತ್ತವೆ. ಅದೇ ಜೆಡಿಎಸ್ ನಲವತ್ತೈದರ ಮ್ಯಾಲೆ ಬರಬವುದು. ಇನ್ನುಳದವುನ್ಯಲ್ಲ ಸೇರಿಸಿಗೊಂಡು ಅಪ್ಪ ಮಕ್ಕಳು ಏನಾರ ಮಾಡೇ ಮಾಡ್ತರೆ."


"ಅಂಗರೆ ಕಾಂಗ್ರೆಸ್ಸಿನೋರು ಗೆಲ್ಲದಿಲ್ಲವೇನ್ಲ?"

"ಅಲ್ಲಿ ಲೀಡರ್‌ಶಿಪ್ ಪ್ರಾಬ್ಲಮ್ಮಿದೆ ಕಣಕ್ಕ. ಕರ್ನಾಟಕದಲ್ಲಿ ಯಾವಾಗ್ಲು ಒಂದು ಪಾರ್ಟಿ ಅಧಿಕಾರಕ್ಕೆ ಬರಬೇಕಾದ್ರೆ ಮೇಜರ್ ಕಮ್ಯುನಿಟಿ ಓಟು ಮಾಡಬೇಕು. ಆದ್ರೀಗ ಲಿಂಗಾಯತ್ರು ಬಿಜೆಪಿ ಕಡೆ ಅವುರೆ. ಒಕ್ಕಲಿಗರು ಜೆಡಿಎಸ್ ಕಡೆ ಅವುರೆ. ಇನ್ನು ಉಳಿದ ಕಿರುಜಾತಿ ಜನ ಕಾಂಗ್ರೆಸ್ ಕೈಲವುರೆ. ಅದೂ ಅಲ್ದೆ ಲೀಡ್ರೆ ಇಲ್ಲದ ಪಾರ್ಟಿಗೆ ಜನ ಓಟು ಕೊಡದಿಲ್ಲ. ಕಾಂಗ್ರೆಸ್ಸು ಇಡೀ ದೇಶದ ರಾಜ್ಯಗಳಲ್ಲಿ ಅಧಿಕಾರ ಕಳಕಂಡಿರದು ಇದೇ ಕಾರಣಕ್ಕೆ. ಅಂಗಾಗಿ ಇಲ್ಲೂ ಕಷ್ಟ ಕಣಕ್ಕ ನಾಟ್ ಈಜಿ" ಎಂದು ವಾಟಿಸ್ಸೆ ಕಾಂಗ್ರೆಸ್‌ನ ಹಣೆಬರ ಹೇಳಿ ಎದ್ದು ಹೋದ. ❀

ಒಬ್ಬ ಬುದ್ಧಿಜೀವಿ


ಬುದ್ಧಿ ಎನ್ನುವುದು ಕತ್ತಿಯ ಅಲಗಿನಂತೆ; ಚಂಡಮಾರುತದಂತೆ. ಮನುಷ್ಯ ಸೃಷ್ಟಿಸಿಕೊಂಡ ಈ ಬದುಕೆಂಬ ರಂಗದಲ್ಲಿ ಧರ್ಮಯುದ್ಧ ಮಾತ್ರ ನಡೆಯುತ್ತಿರುವುದಿಲ್ಲ. ಇಲ್ಲಿ ಬದುಕಿ ಉಳಿಯುವುದು, ತುಂಬುಜೀವನ ನಡೆಸುವುದು, ರ್ಥಕ ಎಂದು ಕೆಲವರಾದರೂ ಮೆಚ್ಚುವಂತೆ ಇದ್ದುಬಿಡುವುದು ಮುಖ್ಯವಾಗುತ್ತದೆ. ಈ ರಂಗದಲ್ಲಿ ಮಾನವೀಯತೆ, ಶಪ್ರೇಮ, ಹೃದಯವಂತಿಕೆ ಮುಂತಾದವು ಸಣ್ಣ ಜನರ ಸ್ವತ್ತಾಗಿ ಮಾತ್ರ ಉಳಿಯುತ್ತವೆ. ಬುದ್ಧಿಜೀವಿಗಳ ವಸ್ತುನಿಷ್ಠೆಯೇ ತಿಮ ಮೌಲ್ಯವಾಗುತ್ತದೆ.

ಈತನನ್ನು ನೋಡಿ. ಹಳೇ ಕಾಲದಲ್ಲಿದ್ದ ಬುದ್ಧಿಜೀವಿಗಳಲ್ಲಿ ವಿದ್ಯಾರಣ್ಯ, ಚಾಣಕ್ಯ ಮುಂತಾದವರನ್ನು ಬಿಟ್ಟರೆ ಮಹಾ ಭಾವಶಾಲಿಯಾಗಿದ್ದ ಒಬ್ಬ ಬುದ್ಧಿಜೀವಿ ಪೂರ್ಣಯ್ಯ. ಈತನ ಬಗ್ಗೆ ಇವತ್ತಿಗೂ ಒಳ್ಳೆಯದನ್ನು ಹೇಳುವವರು, ಕೆಟ್ಟದನ್ನು ಳುವವರು ಇದ್ದಾರೆ. ನಾನು ಮೊನ್ನೆ ಪೂರ್ಣಯ್ಯನ ಬಗ್ಗೆ ಸ್ವಲ್ಪ ಓದಿದೆ; ಈತ ಎಂಥ ಅಚಲ ನಿಷ್ಠೆಯ ವ್ಯಕ್ತಿ ಅಂದರೆ ಹೈದರ್ ಂತ್ರಿಮಂಡಲದಲ್ಲಿದ್ದ ಈತ ಟೀಪುವಿನ ದಿವಾನ್ ಆಗಿದ್ದ; ಟೀಪುವಿನ ಬದ್ಧವೈರಿಯಾಗಿದ್ದ ಮೈಸೂರಿನ ಅರಸರಿಗೆ (ಟೀಪು ರಣಾನಂತರ) ಅಧಿಕಾರ ಬಂದಾಗ ಅವರೂ ಪೂರ್ಣಯ್ಯನನ್ನು ದಿವಾನರನ್ನಾಗಿ ಮಾಡಿಕೊಂಡರು. ಇದು ಪೂರ್ಣಯ್ಯನ ಕ್ಷತೆ ಮತ್ತು ಸ್ವಾಮಿನಿಷ್ಠೆ ತೋರುತ್ತದೆ. ವಿರುದ್ಧ ಪಾಳಯದ ಇಬ್ಬರು ಧಣಿಗಳಿಗೆ ನಿಷ್ಠನಾಗಿದದವ.



ಮಾಸ್ತಿ ವೆಂಕಟೇಶ ಅಯ್ಯಂಗಾರರು ದಿವಾನ್ ಪೂರ್ಣಯ್ಯನವರ ನಿಷ್ಠೆಯನ್ನು ಅಪ್ಪಾಗಿ ಮೆಚ್ಚಿದೆ ಣಗುವುದನ್ನು ಬಲ್ಲಿರಿ; ಪೂರ್ಣಯ್ಯ ಮಹಾ ಶಕುನಿ ಮತ್ತು ಸಮಯಸಾಧಕ ಎಂದು ಹೇಳುವವರು ದ್ದಾರೆ. ವಿಚಿತ್ರವೆಂದರೆ ಪೂರ್ಣಯ್ಯನವರನ್ನು ನಾವೀಗ ಸರಿಯಾಗಿ ನೋಡಿದರೆ ದಕ್ಷತೆ, ಪ್ರತಿಭೆ ಮತ್ತು ಷ್ಠೆ ಎನ್ನುವ ಅಂಶಗಳು ಕೆಲವೊಮ್ಮೆ ನೈತಿಕತೆಯೊಂದಿಗೆ ಬೆರೆತು, ಕೆಲವೊಮ್ಮೆ ನೈತಿಕತೆಯನ್ನು ಮೀರಿ ತ್ತವೆ. ಇವತ್ತಿನ ಅಧಿಕಾರಿ ಕಮ್ಯುನಿಸ್ಟ್ ಪ್ರಧಾನಿಗೂ, ಕಂದಾಚಾರಿಯಾದ ಪ್ರಧಾನಿಗೂ ನಿಷ್ಠನಾಗಿರಬೇಕಾಗುತ್ತದೆ; ಕ್ಷತೆ ಮತ್ತು ಆಡಳಿತ ಪ್ರತಿಭೆ ಟೀಪುವಿಗೆ ಬೇಕಾದಂತೆಯೇ ಆತ ತೀರಿಕೊಂಡ ಮೇಲೆ ಬಂದ ಮುಮ್ಮಡಿ ಕೃಷ್ಣರಾಜ ಒಡೆಯನೆಂಬ ಬಾಲಕನಿಗೂ ಬೇಕಾಗುತ್ತದೆ. ಇಲ್ಲಿ ಕೃಷ್ಣರಾಜ ಒಡೆಯರ್ ಪರವಾಗಿ ಪೂರ್ಣಯ್ಯನನ್ನು ಒಪ್ಪಿಕೊಂಡವರು ಅವನ ಅಜ್ಜಿ ಲಕ್ಷ್ಮಮ್ಮಣ್ಣಿ.

ಪೂರ್ಣಯ್ಯ ತುಂಬ ಸಂಕೀರ್ಣ ವ್ಯಕ್ತಿ. ಆತ ತನ್ನ 18ನೆಯ ವಯಸ್ಸಿನಲ್ಲಿ ಅನ್ನದಾನ ಶೆಟ್ಟಿ ಎಂಬ ವಿ ವರ್ತಕರ ಜೊತೆಗೆ ಶ್ರೀರಂಗಪಟ್ಟಣದಲ್ಲಿದ್ದ ಹೈದರಾಲಿಯ ಅರಮನೆಯನ್ನು ಪ್ರವೇಶಿಸಿ, ಅಲ್ಲಿ ತನ್ನ ಣತನದಿಂದ ಹೈದರ್‌ನ ಮೆಚ್ಚುಗೆ ಗಳಿಸಿದ; ತುಂಬ ಚುರುಕಾಗಿದ್ದ, ಪ್ರಾಮಾಣಿಕನಾದ ಈತ ಅರಮನೆಯಲ್ಲಿ ಕರನಾಗಿ ನೇಮಕಗೊಂಡು ಹೈದರ್‌ನ ಹಣಕಾಸು ಮಂತ್ರಿಯಾದ. ಹೈದರ್ ತೀರಿಕೊಂಡಾಗ ಟೀಪು ಬರುವವರೆಗೆ ಸಾವಿನ ಸುದ್ದಿಯನ್ನು ಯಾರಿಗೂ ತಿಳಿಸಲಿಲ್ಲ, ಶುದ್ಧಹಸ್ತ ಪ್ರಾಮಾಣಿಕತೆ ಮತ್ತು ದಕ್ಷತೆಯ ಪೂರ್ಣಯ್ಯ ಸ್ವಾಭಾವಿಕವಾಗಿಯೇ ಟೀಪುವಿನ ದಿವಾನನಾದ. ಟೀಪುವಿನ ಮಂತ್ರಿಗಳಾಗಿದ್ದ ಮೀರ್‌ಸಾದಕ್, ಸಾದತ್ ಮುಂತಾದವರು ಸುಲಿಗೆ, ಲೂಟಿಯಲ್ಲಿ ತೊಡಗಿದ್ದಾಗಲೂ ಆ ಬಗ್ಗೆ ಆಕ್ಷೇಪ ಎತ್ತದೆ ಪೂರ್ಣಯ್ಯ ಟೀಪು ಬಗ್ಗೆ ನಿಷ್ಠನಾಗಿಯೇ ಇದ್ದ; ಟೀಪು ಯುದ್ಧದಲ್ಲಿ ತೊಡಗಿದ್ದಾಗ ಸೈನಿಕರಿಗೆ ವೇತನ, ಊಟ ಕೊಡಲು ಒಂಟೆಯ ಮೇಲೆ ಹಣ, ಆಹಾರ ಹೇರಿಕೊಂಡು ತಾನೇ ಹೋಗಿ ತಲುಪಿಸಿದ. ಟೀಪುವಿನ ಕೊನೆಯ ಯುದ್ಧದ ಸಮಯದಲ್ಲಿ ಟೀಪು ಪೂರ್ಣಯ್ಯನನ್ನು ಶ್ರೀರಂಗಪಟ್ಟಣಕ್ಕೆ ಸ್ವಲ್ಪ ದೂರದಲ್ಲಿದ್ದ, ಕಾವೇರಿ ನದಿಯ ಆಚೆಯ ಕರಿಘಟ್ಟ ಎಂಬಲ್ಲಿಗೆ ಕಳಿಸಿ ಶತ್ರು ಸೈನಿಕರನ್ನು ತಡೆಯಲು ನೇಮಿಸಿದ್ದ. ಆದರೆ ಇಂಗ್ಲಿಷ್ ಸೈನಿಕರು ಆ ದಾರಿಯಲ್ಲಿ ಬರಲೇ ಇಲ್ಲ. ಟೀಪು ಯುದ್ಧದಲ್ಲಿ ತೀರಿಕೊಂಡು ನಾಲ್ಕೈದು ದಿನಗಳಾದ ಮೇಲೆ ಪೂರ್ಣಯ್ಯ ವಿಜಯೀ ಸೇನೆಯ ನಾಯಕನಾಗಿದ್ದ ಜನರಲ್ ಹ್ಯಾರಿಸ್‌ನನ್ನು ಭೇಟಿಯಾದ. ಹ್ಯಾರಿಸ್ ದೊಡ್ಡ ಗೊಂದಲದಲ್ಲಿದ್ದ. ಟೀಪುವಿನ ಪಾಳೇಗಾರರನ್ನು, ಸಣ್ಣಪುಟ್ಟ ನಾಯಕರನ್ನು ಹೇಗೆ ನಿಭಾಯಿಸುವುದೆಂದು ಅವನಿಗೆ ಗೊತ್ತಿರಲಿಲ್ಲ. ಪೂರ್ಣಯ್ಯ ಆತನಿಗೆ ಪರಿಸ್ಥಿತಿಯನ್ನು ಸಮರ್ಥವಾಗಿ ವಿವರಿಸಿ ಪಾಳೆಯಗಾರರನ್ನು (ಸಿಲೇದಾರರನ್ನು) ಹತೋಟಿಯಲ್ಲಿಟ್ಟುಕೊಳ್ಳಲು ಉಪಾಯ ಸೂಚಿಸಿದ. ಹ್ಯಾರಿಸ್ ಆಗಲೇ ಟೀಪುವಿನ ಮಕ್ಕಳನ್ನು ವೆಲ್ಲೂರು, ಕಲ್ಕತ್ತಾಗಳಿಗೆ ಕಳಿಸಿ ಮೈಸೂರು ಅರಸು ಮನೆತನಕ್ಕೆ ಆಡಳಿತ ಒಪ್ಪಿಸಲು ತೀರ್ಮಾನಿಸಿದ್ದ. ಆದರೆ ಮೈಸೂರು ರಾಜನಿಗೆ (ಮುಮ್ಮಡಿ ಕೃಷ್ಣರಾಜ) ಆಗ ನಾಲ್ಕು ವರ್ಷ. ಅವನನ್ನು ದತ್ತು ತೆಗೆದುಕೊಂಡಿದ್ದ ಲಕ್ಷ್ಮಮ್ಮಣ್ಣಿಗೆ ಪೂರ್ಣಯ್ಯನನ್ನು ಕಂಡರಾಗುತ್ತಿರಲಿಲ್ಲ. ಆದರೆ ಪೂರ್ಣಯ್ಯ ಎಷ್ಟು ಕಿಲಾಡಿಯೆಂದರೆ ಬಾಲಕನಾಗಿದ್ದ ರಾಜನಿಗೆ ಒಬ್ಬ ಅನುಭವಿ ರಾಜಕಾರಣಿಯ ನೆರವು ಅತ್ಯಗತ್ಯ ಎಂದು ಮನವರಿಕೆಯಾಗುವಂತೆ ಹೇಳಿ ತನ್ನನ್ನೇ ದಿವಾನನ್ನಾಗಿ ನೇಮಿಸುವುದು ಅನಿವಾರ್ಯವಾಗುವಂತೆ ನೋಡಿಕೊಂಡ. ಮಹಾರಾಜನ ಅಜ್ಜಿ ಲಕ್ಷ್ಮಮ್ಮಣ್ಣಿಯೊಂದಿಗೆ ಸಂಧಾನಮಾಡಿ ಮಗು ಕೃಷ್ಣರಾಜನಿಗೆ 1799 ರಲ್ಲಿ ಪಟ್ಟಾಭಿಷೇಕ ಮಾಡಿ ತಾನೇ ದಿವಾನನಾಗಿ ಎಲ್ಲ ಅಧಿಕಾರವನ್ನು ವಹಿಸಿಕೊಂಡ. 1811 ರವರೆಗೆ (12 ವರ್ಷ) ಪೂರ್ಣಯ್ಯ ದೊರೆಗಿಂತ ಹೆಚ್ಚಿನ ಅಧಿಕಾರ ಪಡೆದು ದಿವಾನನಾಗಿದ್ದ.



ಟೀಪು ನಿರ್ಮಿಸಿದ್ದ ವಾತಾವರಣದಲ್ಲಿದ್ದ ಹಿಂಸೆ, ಶೋಷಣೆಯನ್ನು ನೋಡಿಕೊಂಡಿದ್ದೂ ಪೂರ್ಣಯ್ಯ ಸುಮ್ಮನಿದ್ದದು, ರಾಜ್ಯದ ವಿಷಮ ಪರಿಸ್ಥಿತಿಯಲ್ಲಿ ವ್ಯವಹಾರ ಜ್ಞಾನದಿಂದ ನೆರವಾದದ್ದು, ಒಂದು ರೀತಿಯಲ್ಲಿ ಸಮರ್ಪಕವಾಗಿ ಎಲ್ಲವನ್ನೂ ನಿರ್ವಹಿಸಿ ಶಾಂತಿ ತಂದದ್ದು–ಇದೆಲ್ಲದರ ಮಧ್ಯೆ ಪೂರ್ಣಯ್ಯ ತನ್ನ ಪ್ರತಿಭೆ, ಪ್ರಾಮಾಣಿಕತೆ, ಸಮಯಸಾಧಕತನ ಮತ್ತು ಭಟ್ಟಂಗಿತನ–ಎಲ್ಲದರೊಂದಿಗೆ ಅನೇಕ ಪ್ರಶ್ನೆ ಎತ್ತುತ್ತಾನೆ. ಇಂಗ್ಲಿಷರಿಗೆ, ಮೈಸೂರ ದೊರೆಗಳಿಗೆ, ತನಗೆ..... ಏನು ಬೇಕು ಎಂದು ಅರಿತಿದ್ದ ಪೂರ್ಣಯ್ಯ ಒಂದು ಮಹಾ ಮುಗ್ಧ ಸಮುದಾಯದ ನಡುವೆ ಕೌಟಿಲ್ಯನಂತೆಯೂ, ಮಾಕಿಯವೆಲ್ಲಿಯಂತೆಯೂ ಕಾಣುತ್ತಾನೆ.

–ಜನವರಿ 1, 1997

ಸೀತಾಮಾತೆಯನ್ನು ಯಾಕೆ ರೇಪ್ ಮಾಡಲಿಲ್ಲ?



ಎಚ್.ಎಲ್. ಕೇಶವಮೂರ್ತಿ

ಅಣಕ

ಬೆಳಗಿನ ವಾಕಿಂಗ್ ಶಾಸ್ತ್ರ ಮುಗಿಸಿ ಪಾರ್ಕಿನಲ್ಲಿದ್ದ ಸಿಮೆಂಟ್ ಬೆಂಚಿನ ಮೇಲೆ ಕುಳಿತಿದ್ದೆವು. ಹಾಳಾದ ಮುದಿ ಚಪಲ. ವಾಕಿಂಗ್ ಅಂತ ಬರುವ ಹೆಂಗಸರನ್ನು ನೋಡಿ ಕಣ್ತುಂಬಿಸಿಕೊಳ್ಳುವ ಆಸೆ. ಆದರೆ ಚಳಿಗಾಲ ನೋಡಿ. ಬೆಚ್ಚಗಿರಲೆಂದು ಏನೇನನ್ನೋ ಸುತ್ತಿಕೊಂಡಿದ್ದೊ. ಹಿಂದೆ ಯಾವುದು, ಮುಂದೆ ಯಾವುದು ಅನ್ನುವುದೇ ತಿಳಿಯುತ್ತಿರಲಿಲ್ಲ, ಬಟ್ಟೆ ಸುತ್ತಿದ ಡ್ರಂ ನಂಗಿದ್ದ. ಅವರ ನೋಡೋಕೆ ಏನಿತ್ತು, ನಿರಾಶೇನೇ ಆಯಿತು. ಬಾಯಿ ಚಪಲ ಆದರೂ ತೀರಿಸಿಕೊಳ್ಳೋಣ ಅಂತ ಗತಕಾಲದ ರಸಿಕತೆಗೆ ಮರೆ ಹೋದೊ. ಒಬ್ಬೊಬ್ಬರೂ, ಸುಳ್ಳೇಪಳ್ಳೇ ಹೇಳುತ್ತಿದ್ದರೂ, ಕೇಳುವುದಕ್ಕೆ ಮುದವಾಗಿತ್ತು, ಪೋಲಿ ಕಥಾಶ್ರವಣ ಇನ್ನೇನು ಮುಗಿಯಿತು ಅನ್ನುವಾಗ ಕ್ಯಾತೇಗೌಡರು 'ನಿಮಗೆ ಈ ವಿಷಯ ಗೊತ್ತಾ' ಅಂತ ಕೇಳಿದರು. ಯಾವ ವಿಷಯ ಎಂದು ಯಾರೂ ಕೇಳಲಿಲ್ಲ, ಗೌಡರಿಗೆ ಕಿವಿ ಒಪ್ಪಿಸಿದೆವು. 'ಗದ್ದೆಯಲ್ಲಿ ನಾಟಿ ಮಾಡುವ ಹೆಂಗಸರನ್ನು ನೋಡಿದ್ದೀರಲ್ಲಾ, ತೊಡೆ ಕಾಣೊ ಹಾಗೆ ಸೀರೆ ಎತ್ತಿ ಕಟ್ಟಿರುತ್ತಾರೆ. ನಮ್ಮ ತಾತ ಮುತ್ತಾತ ಕಾಲದಿಂದಲೂ ಹೀಗೆ ನಡೀತಿದೆ. ಈಗಲೂ ಹಾಗೇನೆ ಇದೆ. ಅದನ್ನ ಯಾರೂ ಯಾವತ್ತೂ ಅಶ್ಲೀಲ ಅಂತ ತಿಳ್ದಿಲ್ಲ. ಆದರೆ ಇಂಗ್ಲೆಂಡ್ ಕತೆ ಗೊತ್ತ? ಮೊದಲನೆ ಎಲಿಜಬೆತ್ ರಾಣಿ ಕಾಲದಲ್ಲಿ ಮಹಿಳೆಯರ ಹಿಮ್ಮಡಿ ಕಂಡರೆ ಪುರುಷರು ಕಾಮೋದ್ರಿಕ್ತರಾಗುತ್ತಿದ್ದರಂತೆ. ಅದಕ್ಕೆ ಅಲ್ಲಿನ ಮಹಿಳೆಯರು ನೆಲಗುಡಿಸುವಂತೆ ಉಡುಪು ಧರಿಸುತ್ತಿದ್ದರಂತೆ. ಕಾಲಕಳೆದಂತೆ ಉಡುಪಿನ ಉದ್ದ ಕಡಿಮೆ ಆಗುತ್ತಾ ಆಗುತ್ತಾ ಬಂದು ಅದು ಎಲ್ಲಿಗೆ ನಿಲ್ಲುತ್ತೋ....' ಎಂದು ಆಕಾಶ ನೋಡಲಾರಂಭಿಸಿದರು. ಮನಸ್ಸಿನಲ್ಲಿಯೇ ಮಂಡಿಗೆ ತಿನ್ನುತ್ತಿದ್ದರೋ ಏನು ಕತೆಯೋ....

ಕ್ಯಾತೇಗೌಡರು ಬಿಟ್ಟ ಹುಳು ಕೊರೆಯಲಾರಂಭಿಸಿತು. ದಾರಿಯಲ್ಲಿ ಬರುವಾಗ ಮಹಿಳೆಯರ ಮೇಲಿನ ಅತ್ಯಾಚಾರ ಸುಳಿದುಹೋಯ್ತು.

ಅತ್ಯಾಚಾರಕ್ಕೆ ಏನು ಕಾರಣ?

ಉತ್ತರ ಬಹಳ ಸರಳ. ಉದ್ರೇಕಕಾರಿ ಉಡುಪು!

ಹೌದು ಬಟ್ಟೆ ತೊಡುವುದು ಮೈ ಮುಚ್ಚಲು, ದೇಹದ ಪ್ರದರ್ಶನಕ್ಕಾಗಿ ಅಲ್ಲ, ಬಹಳಷ್ಟು ಸಲ ಮುಚ್ಚುವುದಕ್ಕಿಂತ ಎತ್ತಿ ತೋರಿಸುವುದೇ ಜಾಸ್ತಿ!



ಅಂದರೆ 'ಉಡುಪು' ಕಲ್‌ಪ್ರಿಟ್ ಎಂಬುದು ನಿಗದಿ ಆಯಿತು.

ಕಾರಣ ತಿಳಿದ ಮೇಲೆ ತಡೆಯುವುದು ಸುಲಭ. ಉಡುಪು ಸಂಹಿತೆ ಜಾರಿಗೆ ತಂದರಾಯಿತು!

ಇದು ಕೆಲವು ಅಧಿಕಾರಸ್ಥರ ಅಭಿಮತ ಮಾತ್ರ ಅಲ್ಲ, ಅಧಿಕಾರಸ್ಥೆಯರದ್ದೂ ಇದೇ ಮಂತ್ರ.

ಬಹಳಷ್ಟು ಮಹಿಳಾ ಸಂಘಟನೆಗಳು ಇದನ್ನು ಒಪ್ಪಲು ಸಿದ್ಧರಿಲ್ಲ, ಇದರಲ್ಲಿ ಯಾವುದೇ ಮಂತ್ರದ ಲವಲೇಶವೂ ಇಲ್ಲ, ಇರುವುದು ಕೇವಲ ಉಗುಳು ಎನ್ನುವ ಆರೋಪ ಅವರದ್ದು. ಮಾಲ್‌ಗಳಲ್ಲಿ ಕಂಡ ಕೆಲವು ಮುಖಗಳ, ಸರಿದ ಸೆರಗಿನ ಜನರ ಆಧಾರದ ಮೇಲೆ ಬಂದ ನಿಲುವು ಇದು. ಹಾಗೆ ನೋಡಿದರೆ ಇಂತಹವರು ಅತ್ಯಾಚಾರಕ್ಕೆ ಒಳಗಾಗುವುದೇ ಅಪರೂಪ. ಅದಕ್ಕೆ ಬಲಿಯಾಗುವವರು ಅಮಾಯಕರು, ಬಡವರು, ಹುಸುಳೆಗಳು ಎಂಬುದು ಅವರ ವಾದ. ಇದನ್ನು ಪುಷ್ಟೀಕರಿಸಲು ರಾಮಾಯಣ ಎಳೆದು ತರುತ್ತಾರೆ. ವಾಲಿಯ ಹೆಂಡತಿ ತಾರೆ. ಅವನ ತಮ್ಮನಿಗೆ ಅಣ್ಣನ ಹೆಂಡತಿಯ ಮೇಲೆ ಮೋಹ. ಅಣ್ಣನನ್ನು ಸಾಯಿಸಿದ. ಅತ್ತಿಗೆಯನ್ನು ಬಲವಂತದಿಂದ ಸೇರಿದ. ಇಂತಹ ಅಕೃತ್ಯವನ್ನು ಮಾಡಲು ತಾರೆ ಏನು ಉದ್ರೇಕಕಾರಿ ಉಡುಪು ಧರಿಸಿದ್ದಳೇ ಎಂಬ ಆಕ್ರೋಶ ಅವರದ್ದು.

ಮಹಿಳಾಮಣಿಗಳ ಈ ವಾದವನ್ನು ನಾವು ಒಪ್ಪಲು ಸಿದ್ಧರಿಲ್ಲ. ಅವರು ಉದ್ಧರಿಸಿದ ರಾಮಾಯಣ ದಿಂದಲೇ ಉತ್ತರಿಸುತ್ತಿದ್ದೇವೆ, ಮುಳ್ಳಿಗೆ ಮುಳ್ಳೇ ಮದ್ದು ತಾನೇ?

ಸೀತಾಮಾತೆಯನ್ನು ನೋಡಿ ದುರುಳ ರಾವಣ ಅವಳನ್ನು ಮೋಹಿಸಿದ.

ಯಾಕೆ ಮೋಹಿಸಿದ ಎಂದರೆ ಅವಳು ತೊ 'ನಾರುಮಡಿ' ಉದ್ರೇಕಕಾರಿಯಾಗಿತ್ತು!

ಸೀತಾಮಾತೆಗೆ ಈತನ ಬಗ್ಗೆ ಒಲವು ಇರ ಏಕಪತಿವ್ರತಸ್ಥೆ ಆಕೆ!

ಲಂಕಾಧೀಶ್ವರನಿಗೆ ಯಃಕಶ್ಚಿತ್ ಹೆಣ್ಣಿನ ಮನಸ್ಸು ಬರುವುದುಂಟೆ? ಕದ್ದೊಯ್ದು ಅಶೋಕವನದಲ್ಲಿಟ್ಟ.

ಲಂಕಾಧೀಶ್ವರನಿಗೆ ಎಲ್ಲವೂ ಅಚ್ಚುಕಟ್ಟಾಗಿರಬೇ ಶುಚಿತ್ವದ ಕಡೆ ಆತನ ಗಮನ. ಸೀತೆಯೂ ಹಾ ಇರಬೇಕೆಂದು ಬಯಸಿದ. ಅರಮನೆಯಿಂದ ವಸ್ತ್ರಗ ಕಳುಹಿಸಿದ.

ಮಾರನೆಯ ದಿನ ರೇಪ್ ಮಾಡಲು ರೆಡಿಯಾಗಿ ಬ ರಾವಣ.


ನೋಡುತ್ತಾನೆ. ನಾರುಮಡಿ ಉಟ್ಟ ಸೀತೆ ಅಲ್ಲಿರ ಪರಂತು ಮೈತುಂಬ ಸೀರೆ ಉಟ್ಟು ತಲೆಯ ಮೇಲೆ ಸೆ ಹೊದ್ದ ಸೀತೆ ಅಲ್ಲಿದ್ದಾಳೆ! ಇಂತಹ ಗೌರವಸ್ಥ ಹೆಣ್ಣುಮಗಳ ರೇಪ್ ಮಾಡುವುದೇ? ಮನಸ್ಸೇ ಇಂಗಿಹೋಯಿ ಬಂದಂತೆಯೇ ಹಿಂತಿರುಗಿದ!

ಸೀತಾಮಾತೆ ರೇಪ್ ಆಗುವುದನ್ನು ಮೈಮುಚ ಉಡುಪು ತಪ್ಪಿಸಿತು!

ಮಹಿಳಾಮಣಿಗಳೇ ಅರ್ಥಮಾಡಿಕೊಳ್ಳಿ!

ಹುಂಡಿ ಕಾಸಿಗೆ ಕಿತ್ತಾಡುವ ಅಷ್ಟ ಮಠಾಧೀಶರು ಸರ್ವಜ್ಞರೇ?!

ತಲೆತಲಾಂತರದಿಂದ ವ್ಯವಸ್ಥೆಯ ಭಾರಕ್ಕೆ ನಜ್ಜುಗುಜ್ಜಾಗಿ ಹೋದ ತಳಸಮುದಾಯಗಳು ಒಂದಿಷ್ಟು ನೆಮ್ಮದಿ ಕಾಣಲೆಂದು ತನ್ನ ಜೀವ ರಕ್ತದಲ್ಲೇ ಡಾ.ಅಂಬೇಡ್ಕರ್ ರಚಿಸಿದ ಸಂವಿಧಾನ ಆಶಯಗಳು ಎತ್ತ ಕಳೆದುಹೋದವು – ಕಳ್ಳರು ಯಾರು – ಕಳ್ಳತನಮಾಡಿಯೇ ದೌಲಿನಿಂದ ಮೆರೆಯುತ್ತಿರುವ ಇವರ ಪೆಡೆಸಿನ ಹೊಡೆತಕ್ಕೆ ಸಂವಿಧಾನದ ಜೀವರಕ್ತ ಕಣಗಳು ಸತುವು ಕಳೆದುಕೊಂಡವೇ? ಮೇಲ್ವರ್ಗ ಮತ್ತು ಬಂಡವಾಳಿಗರಿಂದ ಮೊಳೆ ಜಡಿಸಿಕೊಳ್ಳುತ್ತಿರುವ ಜೀವಗಳ ತುಟಿಗಳು ಎಷ್ಟನೇ ರಾಜ್ಯೋತ್ಸವಕ್ಕೆ ಅರಳುತ್ತವೆ? 63ನೇ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಪೆಂಟಿ ಪೆಂಟಿ ಪ್ರಶ್ನೆಗಳು ಎದ್ದೇಳುತ್ತವೆ.




ಗುಡಿಸಲು ಸಾಮ್ರಾಜ್ಯ, ತುಂಡು ಭೂಮಿಯಿಲ್ಲದೆ ಕೂಲಿಗಾಗಿ ಪಟ್ಟಣ ಪಟ್ಟಣ ಅಲೆಯುವ ದಲಿತರು, ಸೂರ್ಯ-ಚಂದ್ರರಿಗೆ ವ್ಯತ್ಯಾಸವಿಲ್ಲದಂತೆ ದುಡಿಯುವ ಜನ, ದಿನಬೆಳಗಾದರೆ ವಿಷದ ಬಾಟಲಿಯ ಮಗ್ಗುಲು ಬಿದ್ದ ರೈತ, ಬೇಲಿಯೊಳಗೆ ಹರಿದುಬಿದ್ದ ಸೀರೆ, ಕುಪ್ಪಸ, ಹೆಗಲಿಗೆ ಹಗ್ಗ ಬಿಗಿದು ಬಂಡಿ ಎಳೆಯುತ್ತಲೇ ಇರುವ ಹಮಾಲಿಯವರು, ಹೇಳದೆಕೇಳದೆ ಕಸಿದುಕೊಂಡ ಭೂಮಿಯಲ್ಲಿ ನಾರುವ ಹೊಗೆ. ಏನೆಲ್ಲಾ ಆದರೂ, ನಡೆಯುತ್ತಿದ್ದರೂ ಈ ದೇಶದ್ದು ಪ್ರಪಂಚದ ದೊಡ್ಡ ಸಂವಿಧಾನ. ಎಂತಹ ವಿಪರ್ಯಾಸ.

ಸಂವಿಧಾನ ಬಂದಂತೆ ಬಂಡವಾಳಿಗರು ದಾಖಲೆಗಳನ್ನು ತಿರುವುಮುರುವು ಮಾಡಿ ಮುಖವಾಡಗಳನ್ನು ಹೊತ್ತಿದ್ದಾರೆಯೇ ಹೊರತು ಏನು ಬದಲಾಗಿದೆ? ಇನ್ನು ಬ್ರಾಹ್ಮಣವಾದ ಇಡೀ ವ್ಯವಸ್ಥೆಯ ಜುಟ್ಟನ್ನು ಹಿಡಿದುಕೊಂಡು ತನ್ನ ಮನಸ್ಸಿಗೆ ಬಂದಂತೆ ಅಲುಗಾಡಿಸುತ್ತಿದೆ. ಇದರ ರುದ್ರನರ್ತನದ ಮುಂದೆ ಸಂವಿಧಾನ ರೆಕ್ಕೆಕಿತ್ತಿದ ಹಕ್ಕಿಯಂತಾಗಿದೆ. ಇಡೀ ಸಂವಿಧಾನವನ್ನೇ ಅರೆದು ಕುಡಿದ ಡಾ.ಅಂಬೇಡ್ಕರ್ ಅಂತಹ ಶಕ್ತಿಗೆ ವಿಚ್ಛಿದ್ರಕಾರಿ ಶಕ್ತಿಗಳು ಮುಳುಗು ನೀರು ತರಲು ಯತ್ನಿಸಿರುವಾಗ, ಇನ್ನು ಅವರ ಸಂವಿಧಾನ ಓದಿಕೊಂಡು, ತಿಳಿದುಕೊಂಡವರು ಕಾನೂನುಕಟ್ಟಳೆ ಎಂದು ಏರಿದ ಧ್ವನಿಯಲ್ಲಿ ಮಾತನಾಡಿದರೆ ಬಂಡವಾಳ ಮತ್ತು ಬ್ರಾಹ್ಮಣವಾದಗಳು ಜಂಟಿಯಾಗಿ ಏನೂ ಮಾಡದೇ ಸುಮ್ಮನೇ ಕುಳಿತಿರಲು ಸಾಧ್ಯವೇ?

ಸಂವಿಧಾನವನ್ನು ದೇಶದ ದಿಕ್ಸೂಚಿಯಾಗಿಸುವ ಕೆಲಸ ಅಂಬೇಡ್ಕರ್ ಮಾಡಿದರು. ಕಾಲ ಪಲ್ಲಟದ ನಡುವೆ ದಿಕ್ಸೂಚಿಯನ್ನೇ ಉಲ್ಟಾಹೊಡೆಸುವ ಗಂಡಾಂತರಕಾರಿ ಶಕ್ತಿಗಳು ಬೃಹದಾಕಾರವಾಗಿ ಬೆಳೆದಿರುವುದುವಾಗ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಒಂದು ನೆರಳು, ಕಾಳು-ಕಡ್ಡಿ ಬೆಳೆದುಕೊಳ್ಳಲು ಒಂದಿಷ್ಟು ಭೂಮಿ, ಆರೋಗ್ಯ, ಸಮಾನ ಶಿಕ್ಷಣದ ಕನಸುಗಳು ಪೂರಾ ಎತ್ತರೆತ್ತರಕ್ಕೆ ಜಿಗಿಯುತ್ತಿವೆ. ಉತ್ತರಗಳೇ ಪ್ರಶ್ನೆಗಳಾಗಿ ಸಾಮಾನ್ಯರಿಗೆ ತಲೆಸುತ್ತುಬರುತ್ತಿದೆ. ಶಿವಸುಂದರ್ ಅವರ 'ಚಾರ್ವಾಕ' ಅಂಕಣ ಚೆನ್ನಾಗಿ ಮೂಡಿ ಬಂದಿದೆ. ಧನ್ಯವಾದಗಳು.

– ಹಳ್ಳಿ ಬಸವರಾಜ, ಹಸಮಕಲ್



ಗಲಭೆಗಳಿಗೆ ಕುಮ್ಮಕ್ಕು ನೀಡುತ್ತ ಕಾರ್ಕೋಟಕ ವಿಷ ಕಕ್ಕುತ್ತಿರುವ, ಸಮಾಜದ ಒಗ್ಗಟ್ಟನ್ನು ಹಾಳು ಮಾಡಿ ಬಿಕ್ಕಟ್ಟನ್ನು ಸೃಷ್ಟಿಸಲು ಹೊರಟಿರುವ ಕೋಮುವಾದಿ ಕ್ರಿಮಿ ಕಲ್ಲಡ್ಕನ ಪ್ರಯತ್ನ ಭ್ರಷ್ಟಾಚಾರದಲ್ಲಿ ಮುಳುಗಿ ಬೆಡ್‌ಶೀಟಿನಲ್ಲಿ ಮುಖ ಮುಚ್ಚಿಕೊಂಡವರ ಕಡೆಯಿಂದ ಜನರ ಗಮನ ಬೇರೆಡೆಗೆ ಸೆಳೆಯಲು ಮಾಡುವ ಕುತಂತ್ರದಂತೆ ಕಾಣುತ್ತಿದೆ.


ನಾಯಿ ಮನುಷ್ಯನನ್ನು ಕಚ್ಚುತ್ತದೆಯೆಂದು ಮನುಷ್ಯ ನಾಯಿಯನ್ನು ಕಚ್ಚಲು ಹೋಗುವದಿಲ್ಲ, ಆ ಕಾರಣಕ್ಕೇ ಸಮಾಜದಲ್ಲಿ ಕ್ಷೋಭೆ ಹರಡುವ ಸೈತಾನೀ ಮನೋಭಾವದ ಇಂಥವರ ಮಾತುಗಳನ್ನು ಜನರು ಕಾಲಿಗೆ ಅಂಟಿದ ಹೇಸಿಗೆಯನ್ನು ತೊಳೆದುಕೊಳ್ಳುವಂತೆ ತೊಳೆದು ಮನಸ್ಸನ್ನು ಸ್ವಚ್ಛ ಇಟ್ಟುಕೊಂಡು ಸಮಾಜದಲ್ಲಿ ಶಾಂತಿಯಪಾಲನೆ ಹಾಗೂ ಸಾಮಾಜಿಕ ಸ್ವಾಸ್ಥ್ಯ ಕಾಪಾಡಿಕೊಳ್ಳುತ್ತಿರುವುದು ನಿಜಕ್ಕೂ ಪ್ರಶಂಸಾರ್ಹ.

ಹೀಗೆಯೇ ಇಂತಹ ಜನರ ಮಾತಿಗೆ ಕಿವಿಗೊಡದೆ ಜನ ತಮ್ಮ ಪ್ರಜ್ಞಾವಂತಿಕೆಯನ್ನು ಸಾಬೀತುಗೊಳಿಸುತ್ತಾ ಹೋದರೆ ಇಂಥವರು ಹತಾಶರಾಗಿ ತಮ್ಮ ತಲೆಗೂದಲನ್ನು ತಾವೇ ಕಿತ್ತುಕೊಳ್ಳುತ್ತಾ ಹುಚ್ಚರಾಗುವ ದಿನ ದೂರವಿಲ್ಲ.


– *ಡಾ.ಅಮೀರುದ್ದೀನ್ ಖಾಜಿ, ವಿಜಾಪುರ*

2012, ಫೆಬ್ರವರಿ 8ರ ಸಂಚಿಕೆಯಲ್ಲಿ ಕಲ್ಲಡ್ಕ ಪ್ರಭಾಕರ ಭಟ್ಟ ಮುಸ್ಲಿಮರನ್ನು ನಿಂದಿಸಿ ಮಾಡಿದ ಕೆಟ್ಟ ಭಾಷಣದ ಕುರಿತು ಪ್ರಸ್ತಾಪಿಸಿ, ಆತನ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಸಾಕ್ಷ್ಯಾಧಾರವೆನಿಸಿದ ಸೀಡಿ ಪತ್ರಿಕೆಯ ಬಳಿಯಲ್ಲಿದೆ ಎಂದು ವರದಿ ಮಾಡಲಾಗಿದೆ. ಅಂದರೆ ಈ ರೀತಿ ಒಂದು ಧರ್ಮ ಮತ್ತು ಅದನ್ನು ಪ್ರತಿನಿಧಿಸುವ ಜನಾಂಗವನ್ನು ಅವಹೇಳನ ಮಾಡುವುದು ತಪ್ಪು ಎನ್ನುವುದು ಪತ್ರಿಕೆಯ ನಿಲುವು.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.



ಆದರೆ ಇದೇ ಸಂಚಿಕೆಯಲ್ಲಿ ಗೌರಿ ಲಂಕೇಶ್ ಅವರು ತಮ್ಮ ಅಂಕಣದಲ್ಲಿ ಸಲ್ಮಾನ್ ರಶ್ದಿಯ 'ಸೆಟಾನಿಕ್ ವರ್ಸಸ್' ಕೃತಿಯನ್ನು ಎಸ್.ಎಲ್.ಭೈರಪ್ಪನವರ 'ಆವರಣ' ಕಾದಂಬರಿಯೊಂದಿಗೆ ಸಮೀಕರಿಸಿ ಅದನ್ನು ನಿಷೇಧಿಸಿದ್ದು ತಪ್ಪು ಎಂದಿರುವುದು ಸರಿಯಲ್ಲ. ಒಂದು ಜನಾಂಗದ ಕಣ್ಣು ತೆರೆಸಲು ವಸ್ತುನಿಷ್ಠ ವಿಮರ್ಶೆ ಸ್ವಾಗತಾರ್ಹವಾದರೂ ಅವಹೇಳನಕ್ಕೆ ವಸ್ತುನಿಷ್ಠತೆಯನ್ನು ಆರೋಪಿಸಿ ಆತ್ಮವಿಮರ್ಶೆಗೆ ಕರೆ ನೀಡಿದರೆ ಅದರ ಮರೆಯಲ್ಲಿ ಪ್ರಭಾಕರ ಭಟ್ಟನಂತವರ ಕೆಟ್ಟ ಭಾಷಣಗಳೂ ಸಮರ್ಥನೆಯನ್ನು ದಕ್ಕಿಸಿಕೊಳ್ಳುವ ಅಪಾಯವಿದೆ. ಅವಹೇಳನ, ನಿಂದನೆಯ ಭಾಷಣಗಳಿಗೆ ಅನ್ವಯವಾಗುವ ನೀತಿ ಬರಹಕ್ಕೂ ಅನ್ವಯವಾಗಬೇಕಲ್ಲ? ಖ್ಯಾತ ಪತ್ರಕರ್ತ ಖುಷ್ವಂತ್‌ಸಿಂಗರಿಂದ ಹಿಡಿದು ಭಾರತೀಯ ಪತ್ರಿಕಾ ಮಂಡಳಿಯ ಅಧ್ಯಕ್ಷರೂ ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಾಧೀಶರೂ ಆದ ಮಾರ್ಕಾಂಡೇಯ ಖಟ್ಜೂ ತನಕ "ಕಳಪೆ ದರ್ಜೆಯ ಸಾಹಿತಿ" ಎಂದು ಕರೆಸಿಕೊಂಡಿರುವ ರಶ್ದಿಯ 'ಸಟಾನಿಕ್ ವರ್ಸಸ್' ಕಾದಂಬರಿಯ ವಿರುದ್ಧ ಅನೇಕ ಬುದ್ಧಿಜೀವಿಗಳು ರಂಗಕ್ಕಿಳಿದಿದ್ದರು.



'ಇಂಡಿಯನ್ ಪೋಸ್ಟ್' ಎಂಬ ಪತ್ರಿಕೆಯಲ್ಲಿ ಜೆ.ಪಿ.ದೀಕ್ಷಿತ್, ನಿಸೀಮ್ ಎಝೆಕಿಯೇಲ್, ಜೈನ್ ಕಾಲ್ಲುಗಟ್ಟರ್, ವೃಂದಾ ನಬಾರ್, ವಸ್ಸರ್ ನಂದಿ, ವಿ.ರಮನ್, ಅಶೀಂ ಆಯತ್ ಮುಂತಾದವರು ಆ ಕಾದಂಬರಿಯನ್ನು ಕುರಿತು ಮಾಡಿದ ವಿಮರ್ಶೆಯನ್ನು ಗಮನಿಸಿರಿ: "ಈ ಧರ್ಮದ ಬಗ್ಗೆ ಅವರು ಹೇಳಿದ್ದೇನು? ಮಹೌಂದ್ ಇದರ ಸ್ಥಾಪಕರು. ಇದು ರಶ್ದಿ ಸಂಶೋಧಿಸಿದ ಹೆಸರಲ್ಲ, ಇದು ಐರೋಪ್ಯ ವಿಮರ್ಶಕರು ಮುಹಮ್ಮದ್‌ರವರನ್ನು ಹೀಯಾಳಿಸಲಿಕ್ಕಾಗಿ ಪ್ರಯೋಗಿಸಿದ ಹೆಸರು, ಸೈತಾನನಂತೆ ನರಕದ ಪಾತಾಳದಲ್ಲಿರುವ ಒಂದು ನಿಕೃಷ್ಟ ಜೀವಿಯ ಹೆಸರು. ಈ ಹೆಸರನ್ನು ರಶ್ದಿ ಪ್ರವಾದಿಗೆ ನೀಡಿದ್ದಾರೆ..."

ಇಸ್ಲಾಮಿ ವಿಶ್ವಾಸದ ಇತರ ಆಧಾರಸ್ತಂಭಗಳನ್ನು ರಶ್ದಿ ಯಾವ ರೀತಿಯಲ್ಲಿ ಚಿತ್ರಿಸಿರುವರೆಂದು ನೋಡಿರಿ. ಪ್ರವಾದಿವರ್ಯರ ಕಿರಿ ವಯಸ್ಸಿನ ಪತ್ನಿ ಹಾಗೂ ಪ್ರವಾದಿವಚನಗಳ ಅಧಿಕೃತ ವಕ್ತಾರರಲ್ಲೊಬ್ಬರಾದ ಆಶಾರನ್ನು ಒಂದು ಗ್ರಾಮದ ಜನರೆಲ್ಲರನ್ನೂ ಅರಬ್ಬಿಸಮುದ್ರದಲ್ಲಿ ಮುಳುಗಿ ಸಾಯುವಂತೆ ಪ್ರೇರೇಪಿಸಬಲ್ಲ ವಿಲಾಸಿನಿಯೆಂದು ವರ್ಣಿಸಲಾಗಿದೆ. ಮುಸ್ಲಿಮರು ಜಗತ್ತಿನ ಅತ್ಯಂತ ಪಾವನ ಕ್ಷೇತ್ರವೆಂದು ನಂಬುವ ಕಾಬಾದ ವರ್ಣನಾಶೈಲಿಯೂ ಅದಕ್ಕಿಂತ ಭಿನ್ನವಾಗಿಲ್ಲ. ಹತ್ತು ಪರದೆಗಳು ಎಂದು ಕರೆಯಲ್ಪಡುವ ಕೃಷ್ಣ ಶಿಲಾ ಮಂದಿರವೇ ಕಾಬಾ. ಅದರ ಬಗ್ಗೆಯೂ ರಶ್ದಿ ಅಶ್ಲೀಲವಾಗಿ ಬರೆದಿದ್ದಾರೆ.

ಇಸ್ಲಾಮೀ ಬುನಾದಿಯನ್ನು ಆಕ್ರಮಿಸಲು ಬೇರೇನಾದರೂ ಬೇಕೇ? ಪ್ರವಾದಿಯವರು ರಶ್ದಿಯ ದೃಷ್ಟಿಯಲ್ಲಿ ಸೈತಾನ್, ಧರ್ಮಶಾಸಕರು ನೀತಿಗೆಟ್ಟವರು, ಕಾಬಾ ಮತ್ತು ಹಜ್‌ಗಳು ಅಶ್ಲೀಲತೆ ಮತ್ತು ದುರ್ಮೋಹಗಳ ಪ್ರತೀಕಗಳು, ಕುರಾನ್ ಸೈತಾನಿಕ ವಚನಗಳ ಸಮಾಹಾರ.

ರಶ್ದಿ ವಿರುದ್ಧ ರಂಗಕ್ಕಿಳಿದಿದ್ದ ಬುದ್ಧಿ ಜೀವಿಗಳು ತಮ್ಮ ಪತ್ರದ ಕೊನೆಯಲ್ಲಿ ಹೀಗೆ ವಿಶ್ಲೇಷಿಸಿದ್ದಾರೆ: "ಈ ಕೆಳಗೆ ಸಹಿ ಹಾಕಿರುವ ನಾವೆಲ್ಲರೂ ಮುಸ್ಲಿಮೇತರರು. ಆದ್ದರಿಂದ ನಾವು ಇಸ್ಲಾಮಿ ವಿಶ್ವಾಸಗಳನ್ನು ಅಂಗೀಕರಿಸುವುದಿಲ್ಲವೆಂದು ಸ್ಪಷ್ಟ. ಆದರೆ ಆ ವಿಶ್ವಾಸವನ್ನು ವಿರೋಧಿಸುವ ಯಾವುದೇ ವಿಮರ್ಶೆಯು ನಿಯಂತ್ರಿತ ಯುಕ್ತಿಬದ್ಧ ಹಾಗೂ ವಿಭಿನ್ನ ಧರ್ಮ ಮತ್ತು ಸಂಸ್ಕೃತಿಗಳನ್ನು ಗೌರವಿಸುವ ರೀತಿಯಲ್ಲಿರಬೇಕೆಂದು ನಾವು ನಂಬುತ್ತೇವೆ. ಅದು ಭಾರತದ ಅಖಂಡತೆ ಮತ್ತು ಭಾವನಾತ್ಮಕ ಐಕ್ಯದ ಬೇಡಿಕೆಯೂ ಹೌದು. ಈ ಐಕ್ಯ ಮತ್ತು ಸಾಮರಸ್ಯದ ಹಿತ ದೃಷ್ಟಿಯಿಂದ ಪುಸ್ತಕದ ನಿಷೇಧವನ್ನು ರದ್ದುಪಡಿಸಬಾರದೆಂದು ನಾವು ವಿನಂತಿಸುತ್ತೇವೆ."

ಕಲ್ಲಡ್ಕ ಪ್ರಭಾಕರ್ ಭಟ್ ಮುಸ್ಲಿಮರನ್ನು ಕಳ್ಳರು, ಸುಳ್ಳರು ಎಂದು ನಿಂದಿಸಿದ್ದಕ್ಕಿಂತ ಕೀಳುಮಟ್ಟದಲ್ಲಿ ರಶ್ದಿ ಆ ಜನಾಂಗದ ವಿಶ್ವಾಸವನ್ನು ಹೀಯಾಳಿಸಿದ್ದಾರೆ. ಭಾಷಣಕ್ಕಿರುವ ಅಭಿವ್ಯಕ್ತಿಯ ಇತಿಮಿತಿ ಬರಹಕ್ಕೂ ಇರಬೇಕಲ್ಲ? ಒಟ್ಟಿನಲ್ಲಿ ಸಲ್ಮಾನ್ ರಶ್ದಿಯ ಕಾದಂಬರಿ ಗೌರಿ ಲಂಕೇಶರ ಸದಾಶಯವನ್ನು ಪ್ರತಿನಿಧಿಸುವುದಿಲ್ಲ.

– *ಅಬ್ದುಲ್ ಜಬ್ಬಾರ್, ಕಾಟಿಪಳ್ಳ (ದ.ಕ)*

ಜೈಪುರದಲ್ಲಿ ನಡೆದ ಸಾಹಿತ್ಯ ಸಮ್ಮೇಳನವು ಧಾರ್ಮಿಕ ಜಾತ್ರೆ ಕುಂಭಮೇಳದಂತಿದೆ ಎಂದು ಬರೆದಿರುವ ಔಟ್‌ಲುಕ್ ಮುಖ್ಯ ಸಂಪಾದಕ ವಿನೋದ ಮೆಹ್ತ ಅವರು ಈ ಮೇಳದಲ್ಲಿ ಭಾಗವಹಿಸಿದ ಕೆಲವು ಲೇಖಕರು ತಮಗೆ ಹೀಗೆ ಹೇಳಿದರೆಂದು ವಿವರಿಸಿದ್ದಾರೆ: "ಈ ಸಮ್ಮೇಳನದಲ್ಲಿ ಸಲ್ಮಾನ್ ರಶ್ದಿಯ 'ಸಟಾನಿಕ್ ವರ್ಸಸ್' ಪುಸ್ತಕದ ಕೆಲವು ಭಾಗಗಳನ್ನು ಓದಲೆತ್ನಿಸಿದ ಅಮಿತ್ವ ಕುಮಾರ್, ರುಚಿರ್ ಜೋಶಿ, ಹರಿ ಕುಂಜ್ರು ತರಹದ ಲೇಖಕರು ರಶ್ದಿಯಷ್ಟೇ ಬೇಜವಾಬ್ದಾರಿಯಿಂದ ವರ್ತಿಸಿದ್ದಾರೆ. ತನ್ನ ಗೈರುಹಾಜರಿ

ಡಬ್ಬಲ್ ಪದ್ಮಶ್ರೀ

...ಕೇಂದ್ರ ಸರ್ಕಾರದ ಪ್ರಶಸ್ತಿ ಅಂದರೆ ಮುಗುಟ್ಟೆ ಮುನುಗಲ್ಲ, ...ಸ್ತಿ ಪಡೆಯಬೇಕಾದರೆ ಸಾಧನೆ ಮಾಡಿರಬೇಕು ಸಾಧನೆ. ...ಬಾರಿನ ಪದ್ಮಪ್ರಶಸ್ತಿ ವಿಜೇತರ ಹೆಸರು ಪ್ರಕಟ ...ತಲ್ಲಾ, ಪದ್ಮಶ್ರೀ ಪ್ರಶಸ್ತಿಗೆ ಅರ್ಹರಾದವರ ಪಟ್ಟಿಯಲ್ಲಿ ...ಲ್ ಜಿನಾಹ್ ಅನ್ನೋ ಹೆಸರು ಇತ್ತಂತೆ. ಅವರು ...ತ ಚಿತ್ರಗ್ರಾಹಕರಂತೆ. ಆದರೆ ಇಲ್ಲಿ ಒಂದು ...ತಮಟ್ಟಾಗಿತ್ತಂತೆ. ಆ ಮಹನೀಯರಿಗೆ ನಾಲ್ಕು ದಶಕಗಳ ...ದೆಯೇ ಪದ್ಮಶ್ರೀ ಪ್ರಶಸ್ತಿ ದೊರಕಿತ್ತಂತೆ! ಅಷ್ಟಕ್ಕೆ ... ಬಾಯಿಗೆ ಬಂದಂಗೆ ಆಡುತ್ತಾ ಬಿದ್ದವ್ರೆ. ಸರ್ಕಾರದ ...ಜವಾಬ್ದಾರಿತನ ಅಂತಾರೆ; ಆಯ್ಕೆ ಸಮಿತಿ ಉಡಾಫೆತನ ...ರೆ! ಪ್ರಶಸ್ತಿಗಳೇ ನಗೆಪಾಟಲ ವಿಷಯ ಆಗಿವೆ ಅಂತಾರೆ. ...ಗಿಲ್ಲ ಯಾಕೆ ಆಡ್ತಾರೆ ಅಂತೀನಿ. ಒಂದು ಡಾಕ್ಟರೇಟ್ ...ನ್ನೋನು ಇನ್ನೊಂದ ತಗುಲಿಸಿಕೊಂಡರೆ ಡಬ್ಬಲ್ ...ರೇಟ್ ಮನುಷ್ಯ ಅಂತ ಕೊಂಡಾಡುತ್ತಾರೆ. ಒಂದು ... ಇದ್ದೋನು ಇನ್ನೊಂದು ತಗೊಂಡರೆ ಡಬ್ಬಲ್ ...ಯುವ ಅಂತ ಮೆರುಸ್ತಾರೆ. ಹಿಂಗಾಡೋ ಜನರೇ ...ದು ಪದ್ಮಶ್ರೀ ಜೊತೆಗೆ ಇನ್ನೊಂದು ಪದ್ಮಶ್ರೀ ಪ್ರಶಸ್ತಿ ...ದರೆ ಡಬ್ಬಲ್ ಪದ್ಮಶ್ರೀ ಆಯಿತು ಅಂತ ಸರ್ಕಾರನ ...ಪ ಮಾಡೋದ ಬುಟ್ಟು ಹಿಂಗೆಲ್ಲ ...ಯಾಳಿಸುವುದು ನ್ಯಾಯವೇ ಅಂತೀನಿ...

ಆರು ತಿಂಗಳ ಕಾಟ

...ರೈತಸಂಘ, ಭಾಜಪಗಳಿಗೆ ಆರು ತಿಂಗಳ ಕಾಟ ...ವಾಗಿರುವಂತಿದೆ. ಹೆಂಡದ ಮಂತ್ರಿ ರೇಣುಕಾಚಾರ್ಯ ...ರು ತಿಂಗಳು ಮಾತ್ರ ಇರ್ತೀನಿ, ಆಮೇಲೆ ನಿಮಗೆ ...ಟ್ಟು ಕೊಡ್ತೀನಿ" ಅಂತ ಸದಾನಂದಗೌಡರು ...ಡ್ಯೂರಪ್ಪನವರಿಗೆ ಮಾತು ಕೊಟ್ಟಿದ್ದರು!" ಅನ್ನುತ್ತಿದ್ದಾರೆ. ...ಡಿಹಳ್ಳಿ ಚಂದ್ರಶೇಖರ್ "ಪುಟ್ಟಣ್ಣಯ್ಯ ಆರು ತಿಂಗಳು ...ಕ್ಷನಾಗಿರ್ತೀನಿ. ಆಮೇಲೆ ನೀವೇ ಆಗುವಿರಂತೆ" ಎಂದು ...ತು ಕೊಟ್ಟಿದ್ದರು. ಅನ್ನುತ್ತಿದ್ದಾರೆ. ಅಲ್ಲ ಹೀಗೆ ಅನ್ನುವವರಿಗೆ ತಲೆ ಒಳಗೆ ಏನಿದೆ ಅಂತ. ಎಲ್ಲರೂ ಅಧಿಕಾರ ಸಿಗುವವರೆಗೂ ಹಾಗೆ ಅನ್ನೋದು. ಕುರ್ಚಿ ರುಚಿ ಕಂಡ ಮೇಲೂ ಯಾರು ಹೇಳಿದಂತೆ ನಡೀತಾರೆ ಹೇಳಿ. ಕುಮಾರಸ್ವಾಮಿ ಇಪ್ಪತ್ತು ತಿಂಗಳು ಕುಂತಿರ್ತೀನಿ ಆಮೇಲೆ ನೀವು ಕುಂತ್ಕಳಿ ಅಂದಿದ್ರು ಯಡ್ಯೂರಪ್ಪನವರಿಗೆ. ಬಿಟ್ಟುಕೊಟ್ರ? ಕಂಡೂ ಕಂಡೂ ಹಿಂಗಂತಾರೆ ಅಂದ್ರೆ ಅವರ ತಲೆ ಒಳಗೆ ಏನಿದೆ ಅಂತಾವ...

* * * * *

ದಿನಕ್ಕೊಂದು ಮಾತು ಹೇಳುತ್ತಿರುವ ಯಡ್ಯೂರಪ್ಪನವರ ತಲೆಯ ಬಗೆಗೇನೆ ಅನುಮಾನ ಪ್ರಾರಂಭ ಆಗಿರುವಂತಿದೆ. ಅಂತಹದ್ದೇನೂ ಆಗಿಲ್ಲ ಕಣ್ರಿ. ತಲೆ ಸರಿಯಾಗೇ ಕೆಲಸ ಮಾಡುತ್ತಿದೆ. ಮತ್ತೆ ಯಾಕೆ ಹಂಗಾಡ್ತಾರೆ ಅಂದ್ರೆ....

ಹಿಂದೆ ಮುಖ್ಯಮಂತ್ರಿಯಾಗಿದ್ದರು. ಆಗ ಪ್ರತಿನಿತ್ಯ ಮಾಧ್ಯಮಗಳಲ್ಲಿ ಮಿಂಚುತ್ತಿದ್ದರು. ಈಗಲೂ ಹಾಗೇ ಆಗಬೇಕು ಅನ್ನೋ ಆಸೆ. ಆದರೆ ಹಾಳಾದ ಮಾಧ್ಯಮದವರು ಅವರ ಹತ್ತಿರಾನೂ ಸುಳಿಯೊಲ್ಲರು. ಅದಕ್ಕೆ ಬಿಸಿಬಿಸಿ ಸುದ್ದಿ ಕೊಡಬೇಕಾಗುತ್ತದೆ.

'ನನ್ನನ್ನು ಜೈಲಿಗೆ ಕಳುಹಿಸಲು ವಿಪಕ್ಷಗಳು ಕಾರಣ' ಅಂದ್ರು. ಸುದ್ದಿ ಆಯ್ತು. ಮಾರನೇ ದಿನಾನೇ ಅದನ್ನೇ ಹೇಳಿದರೆ ಅದನ್ನ ಯಾವೋನು ಸುದ್ದಿ ಅನ್ನೋನು? ಅದ್ಕೆ ವರಸೆ ಬದಲಾಯಿಸಿದರು. 'ನಾನು ಜೈಲಿಗೆ ಹೋಗಲು ಈಶ್ವರಪ್ಪ ಕಾರಣ' ಅಂದ್ರು. ಬಿಸಿ ಬಿಸಿ ಸುದ್ದಿ ಆಯಿತು. 'ಮತ್ತೆ ನಾನೇ ಮುಖ್ಯಮಂತ್ರಿ' ಅಂದ್ರು. 'ಸಂಕ್ರಾಂತಿವರೆಗೂ ಕಾಯ್ದು ನೋಡಿ' ಅಂದ್ರು. 'ಎನ್‌ಸಿಪಿ ಸೇರ್ತೀನಿ' ಅಂದ್ರು, 'ಸೇರಲ್ಲ' ಅಂದ್ರು. ಹಿಂಗೆ ತರಾವರಿ ಹೇಳಿಕೆ ಕೊಡ್ತಿರೋದಕ್ಕೆ ಅಲ್ಲವಾ ಅವರಿನ್ನೂ ಸುದ್ದಿ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುತ್ತಿರೋದು. ತಲೆ ಸರಿಯಾಗೇ ಇದೆ ಕಣ್ರಿ. ಆದರೆ ಪ್ರಚಾರದ ಹುಚ್ಚು ಅಷ್ಟೇ ಅಂದರೆ... ಅದ್ನೇ ತಲೆಕೆಟ್ಟೋನು ಆಡೋ ಮಾತು ಅನ್ನೋದು ಅಂದು ಬುಡಾದಾ....



ಇದೀಗ ಕನ್ನಡ ಚಿತ್ರರಂಗದ ಕೆಲವು ನಾಯಕಿಯರ ನಡುವೆ 'ಕ್ಯಾಲೆಂಡರ್ ವಾರ್' ಆರಂಭವಾಗಿದೆ. ಇದನ್ನು ಪಡ್ಡೆ ಹುಡುಗರ ಭಾಷೆಯಲ್ಲಿ 'ಬಿಚ್ಚಮ್ಮ V/s. ಗೌರಮ್ಮ' ನಡುವಿನ ಯುದ್ಧ ಎಂದೂ ಕರೆಯಬಹುದು.

ಇತ್ತೀಚೆಗೆ ಐಂದ್ರಿತಾ ರೈ ಮತ್ತು ನಿಧಿ ಸುಬ್ಬಯ್ಯ ಸಿಸಿಎಲ್‌ನ ಕ್ಯಾಲೆಂಡರ್‌ಗೆ ಬಿಕಿನಿ ತೊಟ್ಟು ಫೋಸ್ ಕೊಟ್ಟಿದ್ದರ ವಿರುದ್ಧ ರಾಗಿಣಿ ಎಂಬ ಮತ್ತೊಬ್ಬ ನಾಯಕಿ ಟೀಕೆ ಮಾಡಿದ್ದು, 'ದಂಡುಪಾಳ್ಯ' ಚಿತ್ರದಲ್ಲಿ ಪೂಜಾ ಗಾಂಧಿ 'ಅರೆನಗ್ನ'ಳಾಗಿ ಕಾಣಿಸಿಕೊಂಡಿದ್ದು.. ಇದೆಲ್ಲ ಈಗ ಇತಿಹಾಸ...

ಆದರೆ ಮೊನ್ನೆ ಜನವರಿ 30 ರಂದು ಕರ್ನಾಟಕ ರಾಜ್ಯ ರೇಷ್ಮೆ ನಿಗಮ ತನ್ನ ಶತಮಾನೋತ್ಸವದ ಅಂಗವಾಗಿ ಹೊರತಂದ ಕ್ಯಾಲೆಂಡರ್ ಕೂಡ ಈಗ ಮತ್ತೊಂದು ರೀತಿಯ ವಿವಾದಕ್ಕೆ ಕಾರಣವಾಗಿದೆ. ರೇಷ್ಮೆ ನಿಗಮದ ಅಧ್ಯಕ್ಷರಾದ ವಿಜಯ್ ಕುಮಾರ್ ಅವರು ಸಿನಿಮಾ ನಿರ್ಮಾಪಕರೂ ಆಗಿರುವುದರಿಂದ ಈ ಕ್ಯಾಲೆಂಡರ್‌ನಲ್ಲಿ ಸಿನಿಮಾ ತಾರೆಯರೇ ತುಂಬಿಹೋಗಿದ್ದಾರೆ.

ಸಿಸಿಎಲ್ ಕ್ಯಾಲೆಂಡರ್‌ನಲ್ಲಿ ಯುವ ನಟಿಯರು ಬಟ್ಟೆ ಬಿಚ್ಚಿ ತಮ್ಮ ಮೈಮಾಟವನ್ನು ಪ್ರದರ್ಶಿಸಿದ್ದರೆ, ರೇಷ್ಮೆ ನಿಗಮದ ಕ್ಯಾಲೆಂಡರ್‌ನಲ್ಲಿ ಹಿರಿಯ ನಟಿಯರು ಮೈತುಂಬ ರೇಷ್ಮೆ ಬಟ್ಟೆ ಧರಿಸಿ ತಮ್ಮ ಸೌಂದರ್ಯವನ್ನು ಪ್ರದರ್ಶಿಸಿದ್ದಾರೆ.

ವಿಜಯ್‌ಕುಮಾರ್ ತಾರೆತಮ್ಯ!



ಇದರಲ್ಲಿ ಮುಖ್ಯವಾಗಿ ಕಾಣಿಸಿಕೊಂಡಿರುವವರು ಭಾರತಿ ವಿಷ್ಣುವರ್ಧನ್, ಸುಮಲತಾ ಅಂಬರೀಷ್, ತಾರಾ ವೇಣು, ರಕ್ಷಿತಾ ಪ್ರೇಮ್, ಪ್ರಮೀಳಾ ಜೋಶಾಯ್, ಮೇಘನಾ ರಾಜ್, ಮೀನಾ, ಸೌಂದರ್ಯ, ಜಯಮಾಲಾ, ಮೊದಲಾದವರು. ಈ ನಾಯಕಿಯರ ಜೊತೆಗೆ ಮೂರ್‍ನಾಲ್ಕು ಜನ ಮಾಡೆಲಿಂಗ್ ಕ್ಷೇತ್ರದ ಬೆಡಗಿಯರೂ ವಿಜೃಂಭಿಸಿದ್ದಾರೆ. ಆದರೆ ಈ ಕ್ಯಾಲೆಂಡರ್‌ಗಾಗಿ ರೇಷ್ಮೆ ನಿಗಮದವರು ಪಕ್ಷಪಾತ ಮಾಡಿ ಕೆಲವೇ ಕೆಲವು ನಾಯಕಿಯರನ್ನು ಆರಿಸಿಕೊಂಡಿದ್ದಾರೆ ಎಂದೂ, ರಮ್ಯ, ರಾಗಿಣಿ, ಐಂದ್ರಿತಾ ರೈ, ಹರಿಪ್ರಿಯ, ರಾಧಿಕಾ ಪಂಡಿತ್, ನಿಧಿ ಸುಬ್ಬಯ್ಯ ಪೂಜಾ ಗಾಂಧಿ ಮೊದಲಾದ ಯುವ ಸುಂದರಿಯರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ ಎಂದೂ ಈ ಕ್ಯಾಲೆಂಡರ್‌ನಲ್ಲಿ ಮಿಂಚಲು ಅವಕಾಶ ಸಿಗದ ನಟಿಯರು ಗಾಳಿಸುದ್ದಿ ಹಬ್ಬಿಸುತ್ತಿದ್ದಾರೆ.

ಇವತ್ತು ಕನ್ನಡ ಚಿತ್ರರಂಗದಲ್ಲಿ ನಟಿಯರು ಬಿಚ್ಚಮ್ಮಗಳಾಗಿ ಕ್ಯಾಲೆಂಡರ್‌ಗೆ ಪೋಸ್ ಕೊಟ್ಟರೂ ಅದು ವಿವಾದವಾಗುತ್ತಿದೆ, ಮೈತುಂಬಾ ರೇಷ್ಮೆ ಸೀರೆ ಉಟ್ಟುಕೊಂಡ ಭಂಗಿಯಲ್ಲಿ ಕಂಡರೂ ಅದೂ ಕೂಡ ಚರ್ಚೆಯ ವಸ್ತುವಾಗುತ್ತದೆ. ಇದೆಂತಹ ಸೋಜಿಗ...

...ದ್ದರೂ ಈ ಸಾಹಿತ್ಯ ಸಮ್ಮೇಳನ ಯಾವುದೇ ಅಡೆತಡೆಗಳಿಲ್ಲದೆ ...ತಿಯುತವಾಗಿ ನಡೆಯುತ್ತಿರುವುದು ಈ ಸಲ್ಮಾನ್ ರಶ್ದಿಗೆ ಒಂದು ...ತಿಯಲ್ಲಿ ಖಿನ್ನತೆಯನ್ನು ಉಂಟುಮಾಡಿದಂತಿದೆ. ಈ ಜೈಪುರ ಸಾಹಿತ್ಯ ...ಮ್ಮೇಳನವನ್ನು ಜೈಪುರ ಪಾರ್ಟಿ ಸಮ್ಮೇಳನವೆಂದು ಮರುನಾಮಕರಣ ...ಡಬಹುದು. ಪ್ರತಿ ಸಂಜೆ ಎರಡರಿಂದ ಮೂರು ಪಾರ್ಟಿಗಳನ್ನು ...ಯೋಜಿಸಲಾಗಿತ್ತು, ಇಲ್ಲಿ ಪಾನೀಯ ನೀರಿನಂತೆ ಹರಿಯುತ್ತಿತ್ತು."

ಹಾಗೆಯೇ ಪ್ರಿಯಂವದ ಗೋಪಾಲ್ ಎಂಬ ಅಧ್ಯಾಪಕಿ "ಈ ಜೈಪುರ ...ಹಿತ್ಯ ಸಮ್ಮೇಳನವನ್ನು ದೊಡ್ಡ ದೊಡ್ಡ ಪ್ರಭಾವಶಾಲಿ ಕಾರ್ಪೊರೇಟ್ ...ಸ್ಥೆಗಳು ಪ್ರಾಯೋಜನೆ ಮಾಡುತ್ತಿವೆ. ಈ ಮೂಲಕ ಈ ಸಮ್ಮೇಳನ ಒಂದು ...ತಿಯಲ್ಲಿ ವಾಣಿಜ್ಯೀಕರಣವಾಗುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ, ... ಪರವಾಗಿ ಮಾತನಾಡುವ ಸೋ ಕಾಲ್ಡ್ ಲೇಖಕರು ಹಾಗೂ ಸಂಘಟಕರು ... ಸಮ್ಮೇಳನಕ್ಕೆ ಹಣಕಾಸಿನ ನೆರವು ನೀಡಿದ ಕೋಕಕೋಲ ಸಂಸ್ಥೆಯು ...ರಳದಲ್ಲಿ ನೈಸರ್ಗಿಕ ನೀರನ್ನು ಅನಧಿಕೃತವಾಗಿ ಬಳಸಿದ್ದರ ಬಗ್ಗೆಯಾಗಲಿ, ...ಮ್ಮ ನೀರನ್ನೇ ರಾಸಾಯನಿಕ ವಸ್ತುಗಳಿಂದ ಕಲುಷಿತಗೊಳಿಸುತ್ತಿರುವ ...ಗ್ಗೆಯಾಗಲಿ, ಆ ಮೂಲಕ ನಮ್ಮ ಪ್ರಕೃತಿಯನ್ನು ನಾಶಪಡಿಸುವುದರ ...ಗ್ಗೆಯಾಗಲಿ, ಅಲ್ಲಿನ ಜನರ ಜೀವಿಸುವ ಹಕ್ಕನ್ನೇ ಕಸಿದುಕೊಂಡಿರುವುದರ ...ಗ್ಗೆಯಾಗಲಿ ಮಾತನಾಡಲಿಲ್ಲ. ಹಾಗೆಯೇ ಮತ್ತೊಂದು ಪ್ರಾಯೋಜಕ ...ಪನಿಯಾದ ಬ್ಯಾಂಕ್ ಆಫ್ ಅಮೆರಿಕ ಆ ದೇಶದಲ್ಲಿ ವಿಕಿಲಿಂಕ್ಸ್‌ನ ಹಕ್ಕುಗಳನ್ನೇ ...ಮನ ಮಾಡುತ್ತಿರುವುದರ ಬಗ್ಗೆಯೂ ಮಾತನಾಡಲಿಲ್ಲ. ಇನ್ನೊಂದು ...ಯೋಜಕ ಕಂಪನಿಯಾದ ರಿಯೋಟಿನೋ ಎಂಬ ಗಣಿ ಸಂಸ್ಥೆ ಸರ್ವಾಧಿಕಾರಿ ...ಗಳೊಂದಿಗೆ ಕೈಜೋಡಿಸಿ ಮಾನವ ಹಕ್ಕುಗಳನ್ನು ದಮನ ...ಡುತ್ತಿರುವುದರ ಬಗ್ಗೆ ಏತಕ್ಕೆ ಸುಮ್ಮನಿದ್ದಾರೆ?

ಈ ಉದ್ದಿಮೆದಾರಲ್ಲೇ ಅಭಿವ್ಯಕ್ತಿ ಸ್ವಾತಂತ್ರಹರಣ ಮಾಡಿಲ್ಲವೆ? ...ತಹವರ ಹಣಕಾಸಿನ ಪ್ರಾಯೋಜಕತೆಯನ್ನು ಪಡೆದುಕೊಳ್ಳುವುದೇ ...ನೈತಿಕತೆಯಲ್ಲವೇ? ಅಭಿವ್ಯಕ್ತಿ ಸ್ವಾತಂತ್ರ್ಯವೆನ್ನುವುದು ಈ ರೀತಿ ...ಕಪಕ್ಷೀಯವಾಗಿರಲು ಸಾಧ್ಯವೇ ಇಲ್ಲ, ಅಭಿವ್ಯಕ್ತಿ ಸ್ವಾತಂತ್ರವೆನ್ನುವುದು ಒಬ್ಬ ...ಖಕನಿಗೆ ಪ್ರಾಥಮಿಕ ಅವಶ್ಯಕತೆಯಷ್ಟೆ. ಆದರೆ ಅಷ್ಟೇ ಮುಖ್ಯವಾಗಿ ನಮ್ಮ ...ರು, ನೆಲ, ಕಾಡುರಕ್ಷಣೆಗಾಗಿ; ಹಸಿವಿನ ವಿರುದ್ಧ, ಎಲ್ಲಾ ರೀತಿಯ ...ಕ್ಕುಗಳಿಗಾಗಿ ಹೋರಾಟಗಳನ್ನು ಮಾಡುತ್ತಿರುವ ಪ್ರತಿಯೊಬ್ಬ ನಾಗರಿಕನಿಗೂ ...ಭಿವ್ಯಕ್ತಿ ಸ್ವಾತಂತ್ರ ಬೇಕು ಹಾಗೂ ಅದಕ್ಕೆ ಪ್ರಜ್ಞಾವಂತರು ಅರ್ಥಪೂರ್ಣವಾಗಿ ...ಬಲಿಸುವುದೂ ಕೂಡ ನಮ್ಮೆಲ್ಲರ ಸಹಜ ಅಭಿವ್ಯಕ್ತಿಯಾಗಬೇಕು" ...ಂದಿದ್ದಾರೆ.

ಇದು ಜೈಪುರದ ಸಾಹಿತ್ಯ ಸಮ್ಮೇಳನದ ಬಗೆಗೆ ಪ್ರಜ್ಞಾವಂತರಿಂದ ...ದಂತಹ ಕೆಲವು ಅರ್ಥಪೂರ್ಣ ಅನಿಸಿಕೆಗಳು. ರಶ್ದಿಯಂತಹ ಪ್ರಚಾರದ ...ಪಾಹಪಿತನವಿರುವ ಲೇಖಕರು ಗುಣಾತ್ಮಕವಾಗಿ ಅದನ್ನು ...ಡೆಯಲಿಕ್ಕಾಗದಿದ್ದಾಗ 'ಸಟಾನಿಕ್ ವರ್ಸಸ್'ನಂತಹ ಕೃತಿಗಳ ಮೂಲಕ ...ದಾ ಸುದ್ದಿಯಲ್ಲಿರಬಯಸುತ್ತಾರೆ. ಇಂತಹ ಲೇಖಕರಿಗೆ ...ಯಾವುದೇ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದ್ಧತೆ ...ರುವುದಿಲ್ಲ.

ಕಾರ್ಪೊರೇಟ್ ವಲಯದ ಪ್ರಾಯೋಜಿತ ಜಾಗತೀಕರಣ ...ತಿಗಳನ್ನು ಈ ರಶ್ದಿ ಸಂಪೂರ್ಣವಾಗಿ ಬೆಂಬಲಿಸಿದ್ದಾರೆ. ...ಕೆಂದರೆ ಈ ಪ್ರಾಯೋಜಕತ್ವದಲ್ಲಿ ಹಣ ನೀರಿನಂತೆ ...ರಿದುಬರುತ್ತದೆ. ಯಾವುದೇ ಬದ್ಧತೆ ಇಲ್ಲದ ರಶ್ದಿಯಂತಹ ...ಖಕರಿಗೆ ಕೂಡ ಬೇಕಿರುವುದು ಈ ಅಪವಿತ್ರ ರೊಕ್ಕ. ...ಳೆದ ಇಪ್ಪತ್ತು ವರ್ಷಗಳಲ್ಲಿ ಅಮೆರಿಕ ಅಸಹಾಯಕ ಮುಸ್ಲಿಂ ...ಷ್ಟ್ರಗಳ ಮೇಲೆ ಏಕಪಕ್ಷೀಯವಾಗಿ ದಾಳಿ ನಡೆಸಿ ಅಲ್ಲಿನ ...ತಂತ್ರ್ಯದ ಮೇಲೆ ಅತ್ಯಾಚಾರ ಮಾಡಿದಾಗ, ಅಲ್ಲಿನ ಜನರ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಲ್ಲೆ ನಡೆಸಿದಾಗ ಇದೇ ಸಲ್ಮಾನ್ ರಶ್ದಿ ಮೌನಸಮ್ಮತಿಯನ್ನು ನೀಡಿದ್ದರು. ಈ ಕಾರ್ಪೊರೇಟ್ ಲೇಖಕರಿಗೆ ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ ಎಂದು ಅನಿಸಲಿಲ್ಲ, ಇಂತಹ ಆತ್ಮವಂಚನೆಯ ಲೇಖಕರು ತಿರಸ್ಕಾರಕ್ಕೆ ಮಾತ್ರ ಯೋಗ್ಯರು.



ಅದರೆ ಇದೆಲ್ಲಕ್ಕಿಂತಲೂ ಮೊದಲು ಸಲ್ಮಾನ್ ರಶ್ದಿಯ ವಿರುದ್ಧ ಕೆಲವು ಧಾರ್ಮಿಕ ಮೂಲಭೂತವಾದಿಗಳು ನಡೆಸುತ್ತಿರುವ ಅಪಪ್ರಚಾರ ಹಾಗೂ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ವಿರೋಧಿಸುತ್ತಿರುವುದನ್ನು ನಾವೆಲ್ಲ ಒಕ್ಕೊರಲಿನಿಂದ ಖಂಡಿಸಬೇಕಾಗಿದೆ. ರಶ್ದಿ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸದಂತೆ ತಡೆಯಲು ಪ್ರಜಾಪ್ರಭುತ್ವದಲ್ಲಿ ಯಾರಿಗೂ ಹಕ್ಕಿಲ್ಲ. ಈ ರೀತಿಯ ವಿರೋಧ ಒಂದು ಕೋಮಿನ ಜನರನ್ನು ಅನಗತ್ಯವಾಗಿ ಸಮಾಜವಿಮುಖಿಗಳನ್ನಾಗಿಸುತ್ತದೆ. ಏಕೆಂದರೆ ರಶ್ದಿಯಂತಹ ಬೇಜವಾಬ್ದಾರಿ ಲೇಖಕನ ಬಗೆಗೆ ಈ ರೀತಿಯ ವಿರೋಧವೇ ಅನಗತ್ಯ, ಅದರಲ್ಲೂ ಈ ಸಲ್ಮಾನ್ ರಶ್ದಿಯಂತಹ ಅಭಿರುಚಿಹೀನ ಲೇಖಕನ ಬಗ್ಗೆ ನಿರ್ಲಕ್ಷ್ಯವೇ ಸರಿಯಾದ ಪ್ರತಿಕ್ರಿಯೆ.

ಈ ಹಿಂದೆ ಎಸ್.ಎಲ್.ಭೈರಪ್ಪನಂತಹ ಪ್ರತಿಗಾಮಿ ಲೇಖಕ 'ಅನಾವರಣ'ದಂತಹ ವಿಕೃತಿಯನ್ನು ರಚಿಸಿದಾಗಲೂ ನಮ್ಮ ರಾಜ್ಯದ ಮುಸ್ಲಿಂ ಬಾಂಧವರು ಭೈರಪ್ಪನ ಕೋಮುವಾದದ ಅಪಪ್ರಚಾರಕ್ಕೆ ತಲೆಕೆಡಿಸಿಕೊಳ್ಳಲಿಲ್ಲ, ಈ ಜೀವವಿರೋಧಿ ಲೇಖಕರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದರು. ತೀರ ಇತ್ತೀಚೆಗೆ ಬಿಜಾಪುರದ ಸಿಂಧಗಿಯಲ್ಲಿ ಶ್ರೀರಾಮಸೇನೆಯ ಪುಂಡರು ಪಾಕಿಸ್ತಾನದ ಧ್ವಜ ಹಾರಿಸಿ ಕೋಮುಗಲಭೆಗಳನ್ನು ಹುಟ್ಟುಹಾಕಲೆತ್ನಿಸಿದಾಗಲೂ ಇಲ್ಲಿನ ಮುಸ್ಲಿಂರು ಅದಕ್ಕೆ ಪ್ರಚೋದಿತರಾಗದೆ ಸಂಪೂರ್ಣ ನಿರ್ಲಕ್ಷ್ಯ ತೋರಿಸಿ ತಮ್ಮ ಪ್ರೌಢಿಮೆಯನ್ನು, ಸಾಮಾಜಿಕ ಜವಾಬ್ದಾರಿಯನ್ನು ತೋರಿಸಿ ಈ ಹಿಂದೂ ಮತಾಂಧರ ಕುಟಿಲ ಕಾರ್ಯಾಚರಣೆಯನ್ನು ಸಂಪೂರ್ಣ ವಿಫಲಗೊಳಿಸಿದರು.

ಇದೇರೀತಿಯ ನಿರ್ಲಕ್ಷ್ಯವನ್ನೇ, ಸಂಯಮವನ್ನೇ ದೇಶದ ಹಾಗೂ ರಾಜ್ಯದ ಮುಸ್ಲಿಂರು ತೋರಬೇಕಾಗಿದೆ. ಪದೇಪದೇ ಮೂಲಭೂತವಾದಿಗಳ ಕೈಯಲ್ಲಿ ಆಟಿಕೆಗಳಾಗುವುದರಲ್ಲಿ ಯಾವ ಪುರುಷಾರ್ಥವನ್ನೂ ಸಾಧಿಸಿದಂತಾಗುವುದಿಲ್ಲ.

- ಬಿ.ಶ್ರೀಪಾದ ಭಟ್, ಬೆಂಗಳೂರು

ಲಾಸ್ಟು 'ಲಂಕೇಶ್' ಫೈನು ಫೈನು,
ದಿಸ್ ವೀಕು ಸಪ್ಪೆ ಸಪ್ಪೆ,
ವೈ ದಿಸ್ ಡಿಫರೆನ್ಸು, ಡಿಫರೆನ್ಸು?

- ರಂಗ, ಕೊಡಗು



ಎರಡು ಸಾವಿರ ಪೊಲೀಸರನ್ನು ಮತ್ತು ನಾಲ್ಕು ಬಂದೂಕುಧಾರಿಗಳನ್ನು ತನ್ನ ಸುತ್ತ ಇಟ್ಟುಕೊಂಡು ಚಡ್ಡಿ 'ವೀರ' ಕಲ್ಲಡ್ಕ ಪ್ರಭಾಕರ ಭಟ್ಟ 'ತಾಕತ್ತಿದ್ದರೆ ಬನ್ನಿ' ಎಂದು ಮುಸಲ್ಮಾನರಿಗೆ ಸವಾಲು ಹಾಕುತ್ತಾನೆ. ಇದು ಭಟ್ಟನ ತಾಕತ್ತಾ?

ನಿಜವಾದ ತಾಕತ್ತು ಏನೆಂದು ತೋರಿಸಿದ ಉಪ್ಪಿನಂಗಡಿಯ ಮುಸ್ಲಿಮ್ ಹುಡುಗರಿಂದ ಭಟ್ಟ ಕಲಿಯಲಿ.

- ಇಸ್ಮತ್ ಪಜೀರ್, ಮಂಗಳೂರು

ವಿವೇಕಾನಂದರ ಜೀವನದ ಘಟನೆಗಳನ್ನು ಆಧರಿಸಿ ಪ್ರಜಾವಾಣಿಯಲ್ಲಿ ದಿನೇಶ್ ಅಮೀನ್ ಮಟ್ಟು ಬರೆದ ಲೇಖನಕ್ಕೆ ಪ್ರತಿಕ್ರಿಯಿಸಿ, ಶಿವಮೊಗ್ಗದಲ್ಲಿ ಚಡ್ಡಿಗಳು ನಡೆಸಿದ ದಾಂಧಲೆ ಖಂಡನೀಯ.

ಚಡ್ಡಿಗಳು ಹಿಂದೂ ಧರ್ಮವನ್ನು ತಾವೇ ಗುತ್ತಿಗೆ ಹಿಡಿದವರ ಹಾಗೇ, ಸನ್ನಿ ಹಿಡಿದವರ ಹಾಗೇ ಎಗರಾಡುತ್ತಿರುವುದನ್ನು ನೋಡಿದರೆ ಕೋಪ ಉಕ್ಕಿ ಬರುತ್ತದೆ.

ವಿವೇಕಾನಂದರು ಧೂಮಪಾನಿಗಳೆಂಬುದು ಬಹಳ ಹಿಂದೆಯೇ ತಿಳಿದ ವಿಷಯ. ವಿವೇಕಾನಂದರು ಶಿಕಾಗೋ ಧರ್ಮ ಸಮ್ಮೇಳನಕ್ಕೆ ಹೋಗಲು ಸಹಾಯ ಮಾಡಿದವರಲ್ಲಿ, ಅಂದಿನ ಮೈಸೂರಿನ ರಾಜರಾದ ಚಾಮರಾಜೇಂದ್ರ ಒಡೆಯರ್ ಕೂಡ ಒಬ್ಬರು. ಬಹುಶಃ ಅದೇ ಸಮಯದಲ್ಲಿ ವಿವೇಕಾನಂದರು ಮೈಸೂರು ರಾಜರ ಅತಿಥಿಗಳಾಗಿ ಅರಮನೆಯಲ್ಲಿ ತಂಗಿದ್ದರು. ಅಂದಿನ ಮಹಾರಾಜರು, ವಿವೇಕಾನಂದರ ಊಟ, ಉಪಚಾರ ಆದಮೇಲೆ "ಇನ್ನೇನಾದರೂ ತಮಗೆ ಬೇಕೆ" ಎಂದು ಕೇಳಿದರಂತೆ. ಆದಕ್ಕೆ ವಿವೇಕಾನಂದರು "ಒಂದು ಸಿಗರೇಟು ತರಿಸಿ ಕೊಡಿ" ಅಂತ ಕೇಳಿದರಂತೆ. ಈ ವಿಷಯ ಬಹಳಷ್ಟು ಜನರಿಗೆ ಈ ಹಿಂದೆಯೇ ತಿಳಿದ ವಿಚಾರ. ವಿವೇಕಾನಂದರಿಗೆ ಈ ದೇಶದ ಬಡತನ, ಅಜ್ಞಾನ, ಅನಕ್ಷರತೆ ಮತ್ತು ಅನಾರೋಗ್ಯಕ್ಕೆ ದೇವರು ಮತ್ತು ಮಾನವರ ನಡುವೆ ಇರುವ ದೇವಮಾನವರು ಕಾರಣ ಅಂತ ಗೊತ್ತಿತ್ತು, ಆದುದರಿಂದಲೇ ಅವರು ವರ್ಣ ಶ್ರೇಣಿಯ ದ್ವೇಷಿಯಾಗಿದ್ದರು. ಅವರ ಮಾತಲ್ಲೇ ಹೇಳುವುದಾದರೆ "**I don't believe in a God who cannot give me bread here, giving me eternal bliss in heaven! India is to be raised, the poor are to be fed, education has to be spread, the evil of priest-craft has to be removed.**"

-ಎಂ.ಸಿ. ಕುಮಾರಸ್ವಾಮಿ, ಮೈಸೂರು


ಉಡುಪಿಯ ಮಠಾಧೀಶರು ಪರ್ಯಾಯ ಪೀಠವೇರಿದಾಗ "ಸರ್ವಜ್ಞ ಪೀಠಾರೋಹಣ" ಎಂದು ಬಣ್ಣಿಸುತ್ತಾರೆ. ಆದರೆ ಹಿಂದಿನ 700 ವರ್ಷಗಳಲ್ಲಿ ಪರ್ಯಾಯ ಪೀಠ ಪಡೆದವರಲ್ಲಿ ನಿಜವಾದ ಸರ್ವಜ್ಞರೆಷ್ಟು? ತಮ್ಮ ಸ್ವಂತ ಧರ್ಮದ ಹಿರಿಯರಾದ ಶಂಕರಾಚಾರ್ಯರನ್ನು ಹೀನಾಮಾನವಾಗಿ ಬಯ್ದು 'ಮಧ್ವವಿಜಯ' ಬರೆದವನು ಸರ್ವಜ್ಞನೇ? 500 ವರ್ಷಗಳ ಹಿಂದೆ ಶೈವ ದೇವಸ್ಥಾನಗಳಿಗೆಲ್ಲಾ ಗೂಂಡಾಪಡೆಗಳೊಂದಿಗೆ ನುಗ್ಗಿ ಅಲ್ಲಿಯ ಶೈವ ಅರ್ಚಕರನ್ನೆಲ್ಲಾ ಬಲಾತ್ಕಾರದಿಂದ ವೈಷ್ಣವರನ್ನಾಗಿ ಮತಾಂತರಿಸಿದವರು ಸರ್ವಜ್ಞರೇ? ಈ ಮತಾಂತರಕ್ಕೆ ಒಪ್ಪದಿದ್ದ ಶೈವ ಅರ್ಚಕರನ್ನು ಹೊಡೆದು-ಬಡಿದು ವೈಷ್ಣವರ ಎಂಜಲೆಲೆಯ ಮೇಲೆ ಉರುಳಾಡಿಸಿ ಈಗಿನ ಮಡೆಸ್ನಾನವೆಂಬ ಅನಿಷ್ಟಕ್ಕೆ ಶ್ರೀಕಾರ ಹಾಕಿದವರು ಸರ್ವಜ್ಞರೇ? ಶೂದ್ರ ಅಣ್ಣಪ್ಪ ಜೋಗಿ ಎಂಬ ಮಹಿಮರು ಪ್ರತಿಷ್ಠಾಪಿಸಿದ ಧರ್ಮಸ್ಥಳದ ಮಂಜುನಾಥನನ್ನು ತಮ್ಮವರು ಪ್ರತಿಷ್ಠಾಪಿಸಿದ್ದು ಎಂದು ಸುಳ್ಳು ಹೇಳುವವರು ಸರ್ವಜ್ಞರೇ? ಶೂದ್ರ ಶ್ರೀಕೃಷ್ಣನ ಭಕ್ತರಲ್ಲಿ ತಾರತಮ್ಯ ಮಾಡುವವರು, ತಮ್ಮದೇ ಧರ್ಮದ ತಮ್ಮದೇ ಜಾತಿಯ ಇನ್ನೊಂದು ಉಪಜಾತಿಯನ್ನು ಕೀಳಾಗಿ ಕಾಣುವವರು ಸರ್ವಜ್ಞರೇ?

ಭೂಮಿ ಗುಂಡಗಿದೆ ಎಂದು ಗೊತ್ತಿಲ್ಲದವರು, ಪೃಥ್ವಿಯ ಮೇಲೆ ಏಳು ಖಂಡ ಏಳು ಸಮುದ್ರಗಳಿವೆ, ಹತ್ತಾರು ಧರ್ಮ ನೂರಾರು ಸಂಸ್ಕೃತಿಗಳು ಸಾವಿರಾರು ಭಾಷೆಗಳಿವೆ ಎಂಬುದೆಲ್ಲಾ ಗೊತ್ತೇ ಇಲ್ಲದವರು ಸರ್ವಜ್ಞರಾಗಿದ್ದರೇ? ಅಥವಾ ಈಗಿನ ರಾಜಕೀಯದಲ್ಲಿ ಕೈಯಾಡಿಸಿ ಕೈಕೊಳೆ ಮಾಡಿಕೊಳ್ಳುವವರು ಹಾಗೂ ತಮ್ಮ ತಮ್ಮೊಳಗೇ ಕ್ಷುಲ್ಲಕವಾಗಿ ಜಗಳಾಡುವ ಮಠಾಧೀಶರುಗಳು ಸರ್ವಜ್ಞರಾಗಿರುವರೇ? ಇವರಿಗೆಲ್ಲಾ ಸರ್ವಜ್ಞ ಎಂದು ಕರೆಯುವುದಾದರೆ ತನಗೆ ಸರ್ವಜ್ಞನೆನಿಸಿಕೊಳ್ಳಲು ನಾಚಿಕೆಯಾಗುತ್ತದೆ ಎಂದು ನಿಜವಾದ ಸರ್ವಜ್ಞ ಕವಿಯ ಆತ್ಮ ಸಮಾಧಿಯಲ್ಲಿ ಅಳುತ್ತಿರಬಹುದೇ!

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು



'ದೇವೀರಿ' ಮಂಜನ ಜರ್ಮನಿ ಯಾನ....



ಹದಿಮೂರು ವರ್ಷಗಳ ಹಿಂದೆ ಆ ಹುಡುಗನ ಬದುಕು ಅಕ್ಷರಶಃ ಬೀದಿಗೆ ಬಿದ್ದಿತ್ತು. ಆತನ ಅಪ್ಪ ಬಿಎಸ್‌ಎನ್‌ಎಲ್‌ನಲ್ಲಿ ಸಣ್ಣದೊಂದು ನೌಕರಿ ಮಾಡಿಕೊಂಡಿದ್ದ ಮಹಾನ್ ಕುಡುಕ. ಆತನ ತಾಯಿ ನಾಟಕಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಮಾಡುತ್ತ ಬದುಕೆಂಬ ಬಂಡಿಯನ್ನು ಸಾಗಿಸಲು ಕಷ್ಟಪಡುತ್ತಿದ್ದಳು. ಇಂತಹ ಸಂದರ್ಭದಲ್ಲೇ ಮತ್ತೊಬ್ಬಳನ್ನು ಮದುವೆಯಾಗಲು ಕುಡುಕ ತಂದೆ ತನ್ನ ಹೆಂಡತಿ ಮತ್ತು ಮಗನನ್ನೇ ಬೀದಿಗೆ ತಳ್ಳಿದ.

ನಟನೆಯಿಂದ ತಾಯಿಗೆ ಸಿಗುತ್ತಿದ್ದ ಹಣ ಇಬ್ಬರ ಹೊಟ್ಟೆಗೆ ಒಪ್ಪೊತ್ತಿನ ಊಟ ಹಾಕಲೂ ಸಾಲುತ್ತಿರಲಿಲ್ಲ, ಇನ್ನು ಮನೆ ಬಾಡಿಗೆಯ ಮಾತು ಎಲ್ಲಿಂದ ಬಂದೀತು. ಕೊನೆಗೊಂದು ದಿನ ಮನೆಯ ಮಾಲೀಕ ಅಮ್ಮ-ಮಗನನ್ನು ಗಂಟು ಮೂಟೆ ಸಮೇತ ಹೊರದಬ್ಬಿದ್ದ.

ಆಗ ಅವರಿಬ್ಬರಿಗೂ ಆಶ್ರಯ ನೀಡಿದ್ದು ಬೆಂಗಳೂರು ರೈಲ್ವೇ ನಿಲ್ದಾಣ. ರೈಲ್ವೇಸ್ಟೇಷನ್ನಿನ ಪಾದಚಾರಿ ಯ ಬದಿಯೇ ತಾಯಿ- ಮಗನ ವಾಸಸ್ಥಾನ. ಬಡತನ ದಿಂದ ತಾಯಿಯ ಆರೋಗ್ಯ ಕೆಡವಲಾರಂಭಿಸಿತು. ಆಗ ಹತ್ತು ವರ್ಷದ ಮುಗ್ಧ ಹುಡುಗ ರೈಲ್ವೇಸ್ಟೇಷನ್ನಿನಲ್ಲಿ ಕೂಲಿ ಕೆಲಸ ಮಾಡಲಾರಂಭಿಸಿದ. ಆತ



ದುಡಿದ ಅರವತ್ತೆಪ್ಪತ್ತು ರೂಪಾಯಿಯ ಪುಡಿಗಾಸೇ ಅವರಿಬ್ಬರ ಅನ್ನದ ಮೂಲವಾಯಿತು. ಆದರೆ ಕಾನೂನಿನಪ್ರಕಾರ ಆ ಬಾಲಕ ಕೂಲಿ ಕೆಲಸ ಮಾಡುವಂತಿಲ್ಲ. ಆಗ ತಾಯಿಯನ್ನು ಆಸ್ಪತ್ರೆಗೆ ಸೇರಿಸಿ, ಹುಡುಗನಿಗೆ ರಕ್ಷಣೆ ನೀಡಿದ್ದು 'ಬಾಸ್ಕೋ ಮನೆ'.

ಹೀಗೆ ತಂದೆ ಮತ್ತು ತಾಯಿ ಬದುಕಿದ್ದಾಗಲೇ ಅನಾಥಾಶ್ರಮ ಸೇರಿದ ಹುಡುಗನ ಹೆಸರು ಮಂಜುನಾಥ. ಪಿ.ಲಂಕೇಶರ ಕಿರು ಕಾದಂಬರಿಯನ್ನಾಧರಿಸಿ ಕವಿತಾ ಲಂಕೇಶ್ ನಿರ್ದೇಶಿಸಿದ್ದ ಪ್ರಶಸ್ತಿ ವಿಜೇತ 'ದೇವೀರಿ' ಸಿನಿಮಾದಲ್ಲಿ ಕ್ಯಾತನ ಪಾತ್ರದಲ್ಲಿ ಮನೋಜ್ಞವಾಗಿ ನಟಿಸಿ ರಾಜ್ಯ ಪ್ರಶಸ್ತಿ ಪಡೆದಿದ್ದನಲ್ಲಾ? ಅದೇ ಹುಡುಗ ಈ ಮಂಜ.

ಬಾಸ್ಕೋ ಮಕ್ಕಳ ಕೇಂದ್ರದಲ್ಲಿ ಮೆಕ್ಯಾನಿಕ್ ಆಗಲು ತರಬೇತಿ ಪಡೆಯುತ್ತಿದ್ದ ಮಂಜ ಕವಿತಾ ಲಂಕೇಶರ ಕಣ್ಣಿಗೆ ಬಿದ್ದು 'ದೇವೀರಿ' ಚಿತ್ರದಲ್ಲಿ ನಟಿಸಿದ್ದಲ್ಲದೆ ಅನಂತರ 'ಪ್ರೀತಿ ಪ್ರೇಮ ಪ್ರಣಯ', 'ಕೋದಂಡರಾಮ' ಮತ್ತು 'ಸಚ್ಚ' ಎಂಬ ಚಿತ್ರಗಳಲ್ಲೂ ನಟಿಸಿದ. 'ದೇವೀರಿ' ಚಿತ್ರದ ಶೂಟಿಂಗ್ ನಡೆಯುತ್ತಿದ್ದ ದಿನಗಳಲ್ಲೇ ಆತನ ತಾಯಿ ತೀವ್ರ ಅನಾರೋಗ್ಯದಿಂದ ಜೀವಬಿಟ್ಟಳು. ತಂದೆ ಅಷ್ಟು ಹೊತ್ತಿಗಾಗಲೇ ಮತ್ತೊಂದು ಮದುವೆಯಾಗಿ ಇನ್ನಿಬ್ಬರು ಮಕ್ಕಳಿಗೆ ಅಪ್ಪನಾಗಿದ್ದ.

ಇಂಥ ಮಂಜುನಲ್ಲಿ ಮತ್ತೆ ಓದಿನ ಬಗ್ಗೆ ಆಸಕ್ತಿ ಕೆರಳಿಸಿ, ಆತನಿಗೆ ಉತ್ತಮ ಒಂದು ನೆಮ್ಮದಿಯ ಜೀವನ ಕಲ್ಪಿಸಿದ್ದು 'ಬಾಸ್ಕೋ ಮನೆ'ಯೇ. ಉತ್ತಮ ಕ್ರಿಕೆಟ್ ಪಟುವೂ ಆಗಿರುವ ಮಂಜ ಕರ್ನಾಟಕ ಲೀಗ್ ಪಂದ್ಯಗಳಲ್ಲಿ ಹಲವಾರು ಬಾರಿ ಆಡಿದ್ದಾನೆ.

ಸದ್ಯ ಜರ್ಮನಿ ದೇಶದಲ್ಲಿ ಪ್ರಪಂಚದ ವಿವಿಧ ಮೂಲೆಗಳಿಂದ ಆಯ್ಕೆಯಾದ ಒಂದಷ್ಟು ಹುಡುಗರಿಗೆ 'ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವುದು ಹೇಗೆ', 'ಕ್ರೀಡೆಯ ಮೂಲಕ ಬದುಕು ರೂಪಿಸಿಕೊಳ್ಳುವ ಹೊಸ ಮಾರ್ಗಗಳು ಯಾವುವು' ಎಂಬುದರ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಜರ್ಮನಿಯ ಖ್ಯಾತ ಫುಟ್‌ಬಾಲ್ ಪಟು ಜೆನ್ಸ್ ಲೆಹಮನ್ ನಡೆಸುವ ಈ ತರಬೇತಿ ಕಾರ್ಯಾಗಾರಕ್ಕೆ ಮಂಜ ಕೂಡಾ ಆಯ್ಕೆಯಾಗಿದ್ದು 'ಡಿಕೇಸರ್ ಅಂಡ್ ಫ್ರೆಂಡ್‌ಶಿಪ್'ನ ಫೆಲೋಶಿಪ್ ಪಡೆದಿದ್ದಾನೆ. ಕನಸು ಕಾಣುವ ಬಾಲ್ಯದಲ್ಲಿ ಕಷ್ಟವನ್ನೇ ಉಂಡಿದ್ದ ಈ ಯುವಕ ಈಗ ಹೊಸ ಭರವಸೆ, ಕನಸುಗಳನ್ನು ಹೊತ್ತು ಜರ್ಮನಿಗೆ ಸಾಗಿದ್ದಾನೆ.

ಆತ ಅಲ್ಲಿ ಒಂದು ವರ್ಷ ಇದ್ದು ಕಲಿಯಲಿದ್ದಾನೆ. ಈ ಮಂಜನ ಭವಿಷ್ಯ ಇನ್ನು ಮುಂದಾದರೂ ಉಜ್ವಲವಾಗಲಿ ಎಂದು ಲಂಕೇಶ್ ತಂಡ ಹಾರೈಸುತ್ತದೆ.

❖ ಅರುಣ

ಜಿಕೆಜಿ ಯಾಕೆ ಹೀಗಾದರು



ಬುದ್ಧಿಜೀವಿ ಎನಿಸಿಕೊಂಡಿರುವ ಜಿ.ಕೆ. ಗೋವಿಂದರಾವ್ ಅವ ಏನಾಗಿದೆ ಎಂಬ ಅನುಮಾನ ಮೊನ್ನೆ ಸಿನಿಮಾ ಪತ್ರಕರ್ತರಲ್ಲಿ ಉದ್ಭವಿಸಿ

ಅದು ನಿಖಿಲ್ ಮಂಜು ಎಂಬಾತ ನಿರ್ದೇಶಿಸಿರುವ 'ಒಂದೂರಲ್ಲಿ' ಕುರಿತ ಸಂವಾದ ಸಭೆ. ಈ ಚಿತ್ರಕ್ಕೆ ಕವಿ ಎಚ್.ಎಸ್.ವೆಂಕಟೇಶ ಮೂರ್ತಿ ಕಥೆ, ಚಿತ್ರಕತೆ, ಸಂಭಾಷಣೆ, ಸಾಹಿತ್ಯ ಎಲ್ಲವನ್ನೂ ಒದಗಿಸಿದ್ದಾರೆ. ಅಂಗವಿಕಲ ಕುರಿತ ಕಥೆಯನ್ನು ಈ ಸಿನಿಮಾ ಹೊಂದಿದೆ.

ಈ ಚಿತ್ರವನ್ನು ಒಂದಿಷ್ಟು ಬುದ್ಧಿಜೀವಿಗಳು, ಹಿರಿಯ ಸಾಹಿತಿಗಳಿಗ ಅದರ ಬಗ್ಗೆ ಸಂವಾದವನ್ನು ನಡೆಸುವುದು ನಿರ್ದೇಶಕ ಎಂಬಾತ ಅವರ ಆಗಿತ್ತು, ಅದಕ್ಕೆಂದೇ ಅವರು ಪತ್ರಕರ್ತ ಸತ್ಯಮೂರ್ತಿ ಆನಂದೂರು, ಸಾಹಿತಿಗಳಾದ ಎಚ್ಚೆಸ್ವಿ ಮತ್ತು ವೆಂಕಟಸುಬ್ಬಯ್ಯ ಹಾಗು ಜಿಕೆಜಿ ಅವರನ್ನು ಕರೆದಿದ್ದರು.

ಆದರೆ ಸಿನಿಮಾವನ್ನು ನೋಡಿದ ನಂತರ ಗೋವಿಂದರಾಯರು ತಮ್ಮ ಮಿತ್ರ ಎಚ್ಚೆಸ್ವಿ ಅವರನ್ನು ಹೊ ರಭಸದಲ್ಲಿ ಕನ್ನಡ ಚಿತ್ರರಂಗವನ್ನು ಬಾಯಿಗೆ ಬಂದಹಾಗೆ ಹೀಗಳೆದರು. ಅವತ್ತು ಅವರ ಮಾತಿನ ಪರಿ ಹೀ

"ಈ ಹಿಂದೆಯೇ ಈ ನಿಖಿಲ್ ಮಂಜು ಒಂದು ಸಿನಿಮಾವನ್ನು ನಿರ್ದೇಶಿಸಿದ್ದ. ಆ ಚಿತ್ರವನ್ನು ನೋಡಿ ಅರ್ಧಕ್ಕೇ ಎದ್ದು ಓಡಿಹೋಗಿದ್ದೆ. ಈ ಬಾರಿಯೂ ಆತ 'ಒಂದೂರಲ್ಲಿ' ಚಿತ್ರವನ್ನು ಅದ್ಭುತವಾಗಿ ಮಾಡಿದ್ದಾನೆ. ಚಿತ್ರಗಳಿಗೆ ನಾವು ಪ್ರೋತ್ಸಾಹ ನೀಡಬೇಕು. ಕನ್ನಡದಲ್ಲಿ ಎಂತೆಂಥವೋ ಚಿತ್ರಗಳು ಪ್ರಚಾರ ಪಡೆಯುತ್ತವೆ. ಈ ಅದೇ ರಾಜ್‌ಕುಮಾರ್, ಅದೇ ಬಫೂನ್‌ನಂಥ ನರಸಿಂಹರಾಜು ನಟಿಸಿದ ಚಿತ್ರಗಳು ಬರುತ್ತಿದ್ದವು. ಅಂ ನಮ್ಮವರು ಬೆಂಬಲಿಸುತ್ತಿದ್ದರು. ನಮ್ಮ ಗಾಂಧಿನಗರದಲ್ಲಿ ಎಂಥ ಸಾಹಿತ್ಯ ಹುಟ್ಟುತ್ತೆ ಅಂದ್ರೆ 'ನೀರಬಿಟ್ಟು ಮೇಲೆ ದೋಣಿ ಸಾಗಲಿ, ನೆಲವ ಬಿಟ್ಟು ನೀರ ಮೇಲೆ ಬಂಡಿ ಹೋಗಲಿ...' ಆಹಾ ಇದು ಶ್ರೇಷ್ಠ ಹಾ ಇದರಲ್ಲಿ ಏನಾದ್ರೂ ಅರ್ಥ ಇದ್ಯಾ? ನಮ್ಮ ಎಚ್ಚೆಸ್ವಿ ಕೂಡಾ ಅದ್ಭುತವಾಗಿ ಹಾಡು ಬರೀತಾರೆ. ಅದು ಭಾ ಅನಿಸಿಕೊಳ್ಳುತ್ತದೆ..." ಹೀಗೆ ಓತಪ್ರೋತವಾಗಿ ಜಿಕೆಜಿ ಭಾಷಣ ಮುಂದುವರಿದೇ ಇತ್ತು...

ನರಸಿಂಹರಾಜು ಅವರನ್ನು ಬಫೂನ್ ಎಂದಿದ್ದು, 'ನೀರ ಬಿಟ್ಟು ನೆಲದ ಮೇಲೆ...' ತರಹದ ಸಾರ್ವ ಜನಪ್ರಿಯ ಹಾಡನ್ನು ಹುಚ್ಚುಚ್ಚಾಗಿ ಟೀಕಿಸಿದ್ದು ಪತ್ರಕರ್ತರಿಗಂತೂ ಸಹಿಸಲಾಗಲಿಲ್ಲ, ಅವರೆಲ್ಲ ಜಿಕೆಜಿ ಕೇಳಗಿಡುವ ಮುನ್ನವೇ ಸಂವಾದ ಸಭೆಗೆ ಸದ್ದಿಲ್ಲದೆಯೇ ಬಹಿಷ್ಕಾರ ಹಾಕಿ ಹೊರನಡೆದಿದ್ದರು!!

ಮಸ್ಕಲ್ ಮಂಜನ ಗೌರೀ ಪುರಾಣ!



ಈ ಹಿಂದೆ ಯು2 ಆನಂದ ಎಂಬ ವರಾಹ ಮೋರೆಯನ್ನು ಹೀರೋ ಮಾಡಿ, ಹರಿಪ್ರಿಯಾಳನ್ನು ಹೀರೋಯಿನ್ನಾಗಿಸಿ 'ಮನಸುಗಳ ಮಾತು ಮಧುರಾ' ಎಂಬ ಚಿತ್ರವನ್ನು ನಿರ್ದೇಶಿಸಿದ್ದ ಮಂಜು ಮಸ್ಕಲ್‌ಮಟ್ಟಿ ಎಂಬ ಮಹಾನ್ ವ್ಯಕ್ತಿ ಮತ್ತೊಮ್ಮೆ ಗಾಂಧಿನಗರದಲ್ಲಿ ಪ್ರತ್ಯಕ್ಷನಾಗಿದ್ದಾನೆ.

ಈತ ಇಲ್ಲಿಯತನಕ ನಿರ್ದೇಶಿಸಿರುವುದು ಒಂದೇ ಒಂದು ಚಿತ್ರವಾದರೂ ಶ್ರೀಮಾನ್ ಮಸ್ಕಲ್‌ಮಟ್ಟಿಯವರು ತಲೆಮೇಲಿನ ಡೈರೆಕ್ಟರ್ ಟೋಪಿಯನ್ನಂತೂ ಕಳಚಿರಲೇ ಇಲ್ಲ, ಸಿನಿಮಾದಲ್ಲಿ ಛಾನ್ಸು ಕೊಡ್ತೀನಿ ಅಂತಾ ಕಂಡವರ ತಲೆಮೇಲೆ ಕೈ ಮಡಗುವುದನ್ನೇ ಪೂರ್ಣಾವಧಿ ಉದ್ಯೋಗ ಮಾಡಿಕೊಂಡಿರುವ ಈ ಮಸ್ಕಲ್‌ಮಟ್ಟಿ ಈಗ 'ಗೌರಿಪುತ್ರ' ಎಂಬ ಚಿತ್ರವನ್ನು ಆರಂಭಿಸಿದ್ದಾನೆ.

"ಈ ಚಿತ್ರ ನನ್ನದೇ ಬದುಕಿನ ಅನುಭವ. ಬಹಳ ವರ್ಷಗಳಿಂದ ಕೂತು ಈ ಕಥೆಯನ್ನು ಕೆತ್ತಿದ್ದೇನೆ" ಎಂ ಈತ ಪುಂಗುತ್ತಿದ್ದಾನೆ.

ಈ ಚಿತ್ರದ ಒಂದು ಟ್ರ್ಯಾಕ್‌ನಲ್ಲಿ ಮದುವೆಯಾಗಲು ಹುಡುಗಿಯನ್ನು ಹುಡುಕುತ್ತಾ ತಿರುಗುವ ನಾಯ ಇನ್ನೇನು ಮದುವೆ ಫಿಕ್ಸ್ ಆಯಿತು ಎನ್ನುವಷ್ಟರಲ್ಲಿ ಅದು ಕೈತಪ್ಪುತ್ತಿರುತ್ತದೆ. ಹಾಗೆಯೇ ಇನ್ನೊಂದು ಟ್ರ್ಯಾ ಅಂಧ ರೇಡಿಯೋ ಜಾಕಿಯೊಬ್ಬನನ್ನು ಸುಂದರವಾದ ಯುವತಿಯೊಬ್ಬಳು ಪ್ರೀತಿಸಿ ಮದುವೆಯಾಗಿ ಚೆಂದ ಬದುಕು ಸಾಗಿಸುತ್ತಾಳೆ... ಇದು ತಮಿಳಿನಲ್ಲಿ ಚೇರನ್ ನಿರ್ದೇಶಿಸಿ, ನಟಿಸಿದ್ದ 'ರಾಮನ್ ತೇಡಿಯ ಸೀತೆ' (ಹುಡುಕಿದ ಸೀತೆ) ಸಿನಿಮಾದ ಕಥೆ.

ಆದರೂ ಈ ಕತೆ ತನ್ನ 'ಸ್ವಂತ ಅನುಭವ'ದ ಕಥೆ ಎಂದು ಹೇಳುತ್ತಿರುವ ಈ ಮಸ್ಕಲ್‌ಮಟ್ಟಿ ಜನರಿಗೆ ಅದ ಮಕ್ಮಲ್ ಟೋಪಿ ಹಾಕಲು ಹೊರಟಿದ್ದಾನೆ ಎಂದು ನೋಡಿದರೆ ನಗು ಬರುತ್ತದೆ...

ಯೂಟ್ಯೂಬ್‌ನಲ್ಲಿ ಹಿಟ್ ಆದ 'ಪ್ಯಾರ್‌ಗೆ ಆಗ್ಬಿಟ್ಟೈತೆ.....!'



'ಕೊಲವೆರಿ ಡಿ' ಹಾಡಿನ ಮಟ್ಟದಲ್ಲದಿದ್ದರೂ ಗಮನಾರ್ಹ ಮಟ ಕನ್ನಡ ಸಿನಿಮಾದ ಹಾಡೊಂದು ಯೂಟ್ಯೂಬ್‌ನಲ್ಲಿ ಹಿಟ್ ಆಗಿದೆ. ಕೋ ನಾಯಕರಾಗಿ ನಟಿಸಿರುವ 'ಗೋವಿಂದಾಯನಮಃ' ಚಿತ್ರದ 'ಪ್ಯಾರ್‌ಗೆ ಆಗ ಹೋ ನಮ್ದೂಕೆ ಜಾನ್‌ಗೆ ಪ್ಯಾರ್‌ಗೆ ಆಗ್ಬುಟ್ಟೈತೆ...' ಎಂಬ ಹಾಡು ಕೇವಲ ದಿನಗಳಲ್ಲಿ ಯೂಟ್ಯೂಬ್‌ನಲ್ಲಿ 25,000 ಪ್ರೇಕ್ಷಕರನ್ನು ಸೆಳೆದಿದೆ.

ಸಂಗೀತ ನಿರ್ದೇಶಕ ಗುರುಕಿರಣ್ ನೀಡಿರುವ ಟ್ಯೂನಿಗೆ ಉರ್ದು- ಮಿಶ್ರಿತ ಸಾಹಿತ್ಯವನ್ನು ಚಿತ್ರದ ನಿರ್ದೇಶಕ ಪವನ್ ಒಡೆಯರ್ ಬರೆದಿ ಚೇತನ್ ಮತ್ತು ಇಂದು ನಾಗರಾಜ್ ಅದಕ್ಕೆ ದನಿ ನೀಡಿ ತಮಾಷೆಯಾಗಿರುವ ಈ ಹಾಡು ಅಂತರ್ಜಾಲದಲ್ಲಿ ಹಿಟ್ ಆಗಿರುವುದ ನಾಯಕ ನಟ ಕೋಮಲ್‌ನ ಕಾಲು ನೆಲದ ಮೇಲೆ ನಿಲ್ಲದಂತಾಗಿದೆ. 'ಕೊಲವೇರಿ ಡಿ' ತರಹ ಇದು ಸೂಪರ್ ಡೂಪರ್ ಹಿಟ್ ಆಗಿದ್ದರೆ ಕೋ ಸ್ವರ್ಗಕ್ಕೇ ಹೋಗುತ್ತಿದ್ದರೇನೋ!!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com